
ಐಕ್ಯರಂಗ


ದುಡಿವ ಜನರ ಪ್ರಾಣ ಮಿತ್ರ

ಸಂಪುಟ 25 ಸಂಚಿಕೆ 33
ಆಗಸ್ಟ್ 17, 2003 ಬೆಲೆ ರೂ. 3.00



ಸುಪ್ರೀಂಕೋರ್ಟ್ ತೀರ್ಪು

ನೌಕರರಿಗೆ ಮುಷ್ಕರದ ಹಕ್ಕಿಲ್ಲವೇ?






ಎನ್‌ಡಿಎ ಸರ್ಕಾರದ ಆರ್ಥಿಕ - ವಿಕೃತಿಗಳು

ಜನರ ಮರಣ ಶಾಸನ ಬರೆದ ಎಸ್.ಎಂ.ಕೃಷ್ಣ

ವಿಧಾನಸಭೆ ಕಲಾಪ ಕಾಂಗ್ರೆಸ್-ಬಿಜೆಪಿ ಸಲ್ಲಾಪ

ದ.ಕನ್ನಡ : ಬಿಜೆಪಿಯ ಭೂಗತ ನಂಟು !

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 39

ಹಿಂಜಿನ ಸಂಚಿಕೆಯಲ್ಲಿ ಮನುಷ್ಯರ ಮಾಂಸಕ್ಕಾಗಿ ಹಪಹಪಿಸುತ್ತಿದ್ದವರತೆ ಮಾತನಾಡುತ್ತಿದ್ದ ಸೈನಿಕರು, ಭಾರತದ ಗ್ರಾಮೀಣ ಭಾಗಗಳಲ್ಲಿ ಹೊಗೆಯಾಡುತ್ತಿದ್ದ ಕಿಡಿ ಜ್ವಾಲೆಯಾಗಿ ಆವರಿಸಿದ ತೆಲಂಗಾಣ ಸಂಘರ್ಷ, ಸಾಮ್ರಾಜ್ಯಶಾಹಿ ಮತ್ತು ಪಾಳೇಗಾರಿ ಭೂಮಾಲಿಕರನ್ನು ರಕ್ಷಿಸುತ್ತಾ ಬರುತ್ತಿದ್ದ ಗಾಂಧಿ, ಗಾಂಧಿ ವಾದದ ಪ್ರಭಾವ ಮತ್ತು ಶಕ್ತಿ ಮೊದಲ ಬಾರಿ ಮುರಿದು ಬಿದ್ದದ್ದು ಮತ್ತು ಜಯಪಾಲ್ ಸಿಂಗರ ಬಾಲ್ಯದ ನೆನಪುಗಳ ಬಗ್ಗೆ ಓದಿರುವಿರಿ. ಮುಂದೆ....



ಕನ್ನಡಕ್ಕೆ: ವಿಶ್ವ ಕುಂದಾಪುರ

ಬೆಂಗಳೂರಿನಲ್ಲಿ ಸೆರೆ ಸಿಕ್ಕ ಸಂಗಾತಿಯ ಹತ್ಯೆ

ಐಪಿಎಸ್‌ನ ಆ ಕ್ರೂರ ದಿನಗಳಲ್ಲಿ, ಜಗತ್ತಿನಾದ್ಯಂತ ಎಲ್ಲ ಕಮ್ಯುನಿಸ್ಟರ ಹಾಗೂ ನಮ್ಮಲ್ಲಿಯ ಕಮ್ಯುನಿಸ್ಟರ ಛಾಯೆಯಂತೆ ಕ್ರಾಂತಿಕಾರಿ ಉತ್ಸಾಹದಿಂದ ಕೆಲಸ ಮಾಡಲು ಮನಸ್ಸಿಲ್ಲದಿರುವುದನ್ನು ನಾನು ಗಮನಿಸಿದೆ. ಐಪಿಎಸ್ ಕೇಂದ್ರದ ಕೇಂದ್ರ ಕಚೇರಿ ಮಾತ್ರವೇ ಅಲ್ಲ ಇತರ ಪ್ರಾಂತೀಯ ಸಮಿತಿಗಳ ಕೇಂದ್ರ ಕಚೇರಿಗಳೂ ಇವೆಯೆನ್ನುವುದು ಇತ್ತೀಚೆಗೆ ಗೊತ್ತಾಗುವ ತನಕ ಬಹುಶಃ ಇದೇ ಪರಿಸ್ಥಿತಿಯಿತ್ತು.

ಆಂಧ್ರ ಪ್ರಾಂತೀಯ ಸಮಿತಿ ಕೇಂದ್ರ ಕಚೇರಿಯಲ್ಲಿ ಹತಾಶೆ, ವಿಶ್ವಾಸ ಶೂನ್ಯತೆಯಿಂದ ಮುಕ್ತವಾದ ವಾತಾವರಣ ಇದ್ದುದನ್ನು ನಾನು ಕಂಡೆ. ಮೇಜುಗಳನ್ನು ಓರಣವಾಗಿ ಇಡಲಾಗಿತ್ತು. ಕುರ್ಚಿಗಳಲ್ಲಿ ಕುಳಿತವರು ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನವಾಗಿದ್ದರು. ಇದು ಅವರ ಅತುಲ ಆತ್ಮವಿಶ್ವಾಸದ ಪ್ರತೀಕವಾಗಿತ್ತು. ಈಗ ತಾನೇ ಹತಾಶೆಯ ಮಡುವಿನಿಂದ ಹೊರಬಂದ ನನಗಂತೂ ಇದು ಸ್ಫೂರ್ತಿಯ ಚಿಲುಮೆಯಾಗಿತ್ತು.

ಲಕ್ಷಗಟ್ಟಲೆ ಜನರು ಒಳಗೊಂಡ, ಸಾವಿರಾರು ಚದರ ಮೈಲಿ ವಿಸ್ತಾರ ಪ್ರದೇಶದಲ್ಲಿ ಹಬ್ಬಿದ ಕ್ರಾಂತಿಕಾರಿ ಹೋರಾಟದ ನೇತೃತ್ವ ವಹಿಸಿದ ಜನರಲ್ ಸ್ಟಾಫ್ ಒಬ್ಬರ ಕೇಂದ್ರ ಕಚೇರಿ ಇಷ್ಟೊಂದು ವ್ಯವಸ್ಥಿತವಾಗಿರುತ್ತದೆ ಹಾಗೂ ಪ್ರಶಾಂತವಾಗಿರುತ್ತದೆ ಎಂದು ನಾನು ನಿರೀಕ್ಷಿಸಿರಲಿಲ್ಲ ಎಂದು ಹೇಳಲೇಬೇಕು. ಶಿಸ್ತು ಹಾಗೂ ಪ್ರಶಾಂತತೆಯನ್ನು ನಾನು ಮೆಚ್ಚುವುದಿಲ್ಲ ಎಂದಲ್ಲ. ಆದರೆ ಗಹನವಾದ ಚಟುವಟಿಕೆಯ ನೇತೃತ್ವ ವಹಿಸಿದ ಜನರಲ್ ಸ್ಟಾಫ್‌ರ ಕೇಂದ್ರದಲ್ಲಿ ಇದನ್ನು ಕಂಡು ನಾನು ಅವಕ್ಕಾದೆ, ಯಾಕೆಂದರೆ ನನಗದು ಅನಿರೀಕ್ಷಿತವಾಗಿತ್ತು.

ಕಳೆದ ಎರಡು ವರ್ಷಗಳಲ್ಲಿ ನಾನು ಇದೇ ರೀತಿಯ ಕಾರ್ಯನಿರತ ಅಥವಾ ಹಾಗಂತ ನಟಿಸುತ್ತಿದ್ದ ಕೆಲವು 'ಜನರಲ್ ಸ್ಟಾಫ್' ರನ್ನು ಭೇಟಿಯಾಗಿದ್ದೇನೆ. ಅಲ್ಲಿ ಇಂಥ ಕಟ್ಟುನಿಟ್ಟಿನ ವ್ಯವಸ್ಥೆಯನ್ನು ನೋಡಿರಲಿಲ್ಲ. ಕೊಳಕು ಜೋಪಡಿಗಳು ಇನ್ನಷ್ಟು ಕೊಳಕಾಗಿದ್ದವು. ಯಾಕೆಂದರೆ ಅರಾಜಕತೆಯ ಪ್ರವೃತ್ತಿ ಹಾಗೂ ಹವ್ಯಾಸಗಳುಳ್ಳ ಜನರು ಕ್ರಾಂತಿ ವಿಚಾರದಲ್ಲಿ ಗೊಂದಲ ಹುಟ್ಟಿಸಲು ಬರುತ್ತಿದ್ದರು ನೋಡಿ. ಅವರ ದೃಷ್ಟಿಯಲ್ಲಿ 'ಕ್ರಾಂತಿಕಾರಿ' ಕೇಂದ್ರದ ಕಾರ್ಯನಿರ್ವಹಣೆಗೆ ಶಾಂತಿ ಮತ್ತು ಪ್ರಶಾಂತತೆಯ ಅಗತ್ಯವಿಲ್ಲ!

ಸಂಗಾತಿಗಳತ್ತ ಕೂಗಾಡುವುದು, ಸುಧಾರಣಾವಾದ ಹಾಗೂ ವ್ಯಕ್ತಿವಾದದ ವಿರುದ್ಧ 'ಹೋರಾಡುವ' ಹೆಸರಲ್ಲಿ ಕಣ್ಣು ಕೆಂಪಗೆ ಮಾಡಿಕೊಳ್ಳುವುದು, ನಿರ್ದಿಷ್ಟ ಪದಗಳನ್ನು ಬಳಸಿ ಬೈಯುವುದು ಇವೆಲ್ಲವೂ ಈ ಕೇಂದ್ರದಲ್ಲಿ ಇರಲಿಲ್ಲ. ಸೌಹಾರ್ದತೆ, ಸಮಸ್ಯೆಗಳು ಹಾಗೂ ವ್ಯಕ್ತಿಗಳನ್ನು ನಿಭಾಯಿಸುವಲ್ಲಿ ದೃಢತೆ, ಶಾಂತಚಿತ್ತ ಹಾಗೂ ಹೊಸದಾಗಿ ಉದ್ಭವವಾಗುವ ಸಮಸ್ಯೆಗಳಿಗೆ - ವೈಚಾರಿಕವಾಗಿ ತಕ್ಷಣವೇ ಪರಿಹಾರ ಕಂಡುಕೊಳ್ಳುವುದು - ಇವೆಲ್ಲ ಇಲ್ಲಿ ಸ್ಥಾನ ಪಡೆದಿದ್ದವು. ಇವೆಲ್ಲವೂ ಕೇಂದ್ರ ಕಚೇರಿಯ ಜನರಲ್ ಸ್ಟಾಫ್ ಒಬ್ಬರ ದಕ್ಷತೆಯ ಪ್ರತೀಕವಾಗಿದ್ದವು.

ಹಿಂದೆ ಅನೇಕ ಸಂದರ್ಭಗಳಲ್ಲಿ ಜನರಲ್ ಸ್ಟಾಫ್ ಕೇಂದ್ರ ಕಚೇರಿಗಳಲ್ಲಿ ನೋವುಂಡ ಅನುಭವವಿದೆ. ಅರಾಜಕತೆಯ ಜೋಪಡಿಗಳ ಅವ್ಯವಸ್ಥೆಯ ತಾಣಗಳಾಗಿದ್ದವು. ಊಟಕ್ಕೆ, ನಿದ್ದೆಗೆ ಒಂದು ಸಮಯವಿರಲಿಲ್ಲ. ಈ ಅರಾಜಕತೆಯ ಪರಿಣಾಮವಾಗಿ ಕೆಲಸ ಮಾಡಲೂ ಸಮಯವಿರುತ್ತಿರಲಿಲ್ಲ. ಊಟ, ನಿದ್ದೆ, ಕೆಲಸದಲ್ಲಿ ಶಿಸ್ತು, ನಿಯಮವಿಲ್ಲದಿರುವುದರ ಫಲವಾಗಿ ಆರೋಗ್ಯ ಕೆಟ್ಟು ಮಾಡಬೇಕಾದ ಕೆಲಸಗಳನ್ನು ಸರಿಯಾಗಿ ಮಾಡಲಾಗುತ್ತಿರಲಿಲ್ಲ. ಕೆಲಸಕ್ಕೊಂದು ಯೋಜನೆ ಎಂಬುದೂ ಇರಲಿಲ್ಲ.

> **ಕ್ರಾಂತಿಕಾರಿಗಳ ಕಾರ್ಯಸ್ಥಾನ ಅವ್ಯವಸ್ಥೆಯ ಬೀಡು ಎಂಬ ಸಾಮಾನ್ಯ ನಂಬಿಕೆ ಕೆಲವರನ್ನು ಆಂಧ್ರ ಪ್ರಾಂತೀಯ ಸಮಿತಿಯ ಭೂಗತ ಕೇಂದ್ರ ಸುಳ್ಳು ಮಾಡಿ ತೋರಿಸಿತ್ತು. ಅಲ್ಲಿ ಎಲ್ಲವೂ ವ್ಯವಸ್ಥಿತವಾಗಿದ್ದವು. ಮೇಜುಗಳನ್ನು ಓರಣವಾಗಿ ಇಡಲಾಗಿತ್ತು. ಕುರ್ಚಿಗಳಲ್ಲಿ ಕುಳಿತ ಸಂಗಾತಿಗಳು ತಮ್ಮ ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು. ಸೌಹಾರ್ದತೆ- ಸಂಗಾತಿತನದ ಭಾವನೆ ಇಲ್ಲಿ ಮನೆ ಮಾಡಿತ್ತು. ಅದು ಈ ಕೇಂದ್ರದ ಹೆಚ್ಚುಗಾರಿಕೆಯಾಗಿತ್ತು. ಬಹಳಷ್ಟು ಕೇಂದ್ರಗಳಲ್ಲಿ ಅವ್ಯವಸ್ಥೆಗಳನ್ನಷ್ಟು ಕಂಡು ರೂಢಿಯಾಗಿದ್ದ ನನಗೆ ಇಲ್ಲಿನ ಶಿಸ್ತನ್ನು ಕಂಡು ಆಶ್ಚರ್ಯವಾಯಿತು. ಖುಷಿಯೂ ಆಯಿತು.**

ಅಬ್ಬಾ ಅಂತೂ ಕೊನೆಗೂ ಇಲ್ಲೊಂದು ಬದಲಾವಣೆ ಕಂಡಿತು. ಇದು ಸ್ವಾಗತಾರ್ಹ ಬದಲಾವಣೆಯೂ ಹೌದು. ಸೌಹಾರ್ದ ಸಹಕಾರ, ಶಾಂತ ಚಿತ್ತತೆ, ಸೂಕ್ತ ನಿರ್ಧಾರಗಳು ಹಾಗೂ ಕ್ರಮಗಳು - ಇವೆಲ್ಲವೂ ಆಗ ನಾನಿದ್ದ ಪರಿಸ್ಥಿತಿಯಲ್ಲಿ ನನ್ನಂಥವರಿಗೆ ಚೇತೋಹಾರಿ ಆಗಿದ್ದವು.

ಅವರು ಯಾವುದೇ ವಿಷಯವನ್ನು ಚರ್ಚಿಸುತ್ತಿರಲಿಲ್ಲ ಎಂದಲ್ಲ, ಯಾವುದೇ ಸಣ್ಣದಿರಲಿ-ದೊಡ್ಡದಿರಲಿ, ಕಾರ್ಯ ಸಾಧ್ಯತೆ ಅಥವಾ ತಾತ್ವಿಕ ವಿಚಾರಗಳ ಬಗ್ಗೆ ಪರಸ್ಪರರು ಭಿನ್ನಾಭಿಪ್ರಾಯ ತಾಳುತ್ತಿರಲಿಲ್ಲ ಎಂದಲ್ಲ, ಚರ್ಚಿಸುವಾಗ ಅವರ ಮಧ್ಯೆ 'ಬಿಸಿ ವಾಗ್ವಾದ' ನಡೆಯುತ್ತಿರಲಿಲ್ಲ ಎಂದಲ್ಲ - ಎಲ್ಲವೂ ನಡೆಯುತ್ತಿತ್ತು. ಆದರೆ ಅವೆಲ್ಲವೂ ಯೋಜಿತ ರೀತಿಯಲ್ಲಿ ನಡೆಯುತ್ತಿದ್ದವು. ಪ್ರತಿಯೊಂದಕ್ಕೂ ನಿಗದಿತ ಕಾರ್ಯಪಟ್ಟಿಯಿತ್ತು, ಯೋಜನೆಯಿತ್ತು. ಎಲ್ಲಕ್ಕಿಂತ ಮೇಲಾಗಿ ಪ್ರಾಮಾಣಿಕ ಸೌಹಾರ್ದತೆ, ಸಂಗಾತಿತನದ ಭಾವನೆ, ಮುಕ್ತತೆ ಹಾಗೂ ನೇರ ನಡೆನುಡಿಯ ವಾತಾವರಣದಲ್ಲಿ ಎಲ್ಲವೂ ನಡೆಯುತ್ತಿದ್ದವು.

ಅನೇಕ ಸಂಗಾತಿಗಳು ಹಾಗೂ ಜನರ ಪ್ರಾಣ ಮತ್ತು ಸುರಕ್ಷತೆ ಒಳಗೊಂಡ ಹೋರಾಟವೊಂದರ ನಾಯಕರಾಗಿ ತಮ್ಮ ಹೆಗಲ ಮೇಲಿರುವ ಜವಾಬ್ದಾರಿಗಳನ್ನು ಅರಿತುಕೊಂಡು ಅವರು ಕೆಲಸ ಮಾಡುತ್ತಿದ್ದರು.

ಆದರೆ, ಪ್ರಾಂತೀಯ ಸಮಿತಿಯಲ್ಲಿ ಎಲ್ಲವೂ ನಿಷ್ಪಕ್ಷವಾಗಿ ಕ್ರಾಂತಿಕಾರಿಯಾಗಿತ್ತು ಹಾಗೂ ಪ್ರಾಮಾಣಿಕವಾಗಿತ್ತು ಎಂದು ಯೋಚಿಸುವುದು ತಪ್ಪಾಗುತ್ತದೆ. ನನ್ನದೇ ರೀತಿಯಲ್ಲಿ ದೋಷಗಳತ್ತ ಗಮನ ಹರಿಸಿದೆ. ಅಲ್ಲಿ ನಡೆಯುತ್ತಿರುವುದರ ಬಗ್ಗೆ ಇಷ್ಟವಿಲ್ಲದಿದ್ದ ಒಬ್ಬಿಬ್ಬರು ವ್ಯಕ್ತಿಗಳು ಇದ್ದರು. ಆದರೆ ತಮ್ಮ ಮನಸ್ಸಿನಲ್ಲಿರುವುದನ್ನು ಹೇಳುವ ಧೈರ್ಯವಾಗಲಿ, ದೃಢತೆಯಾಗಲೀ ಅವರಿಗೆ ಇರಲಿಲ್ಲ. ಹೇಳಿಕೊಳ್ಳಲೊಂದು ವೇದಿಕೆಯೂ ಅವರಿಗೆ ಸಿಗಲಿಲ್ಲ. ಅಂಥವರ ಪೈಕಿ ಒಬ್ಬರು ಅನಂತರ ಬಹುದೂರ ಸುರಕ್ಷಿತ ಜಾಗಕ್ಕೆ ಪಲಾಯನ ಮಾಡಿದರು.

ಹೀಗಾಗಿ, ಅಲ್ಲಿ ಎಲ್ಲವೂ ಹೂವಿನ ಹಾಸಿಗೆ ಆಗಿರಲಿಲ್ಲ. ಹಾಲು-ಜೇನು ತುಂಬಿರಲಿಲ್ಲ. ಬಹುಪಾಲು ಹಾಗಿದ್ದುದು ಮಾತ್ರ ನಿಜ. ಈ ಅನುಕೂಲಕರ ಅಂಶ ಆ ಕ್ಷಣಕ್ಕೆ ಮಹತ್ವದ್ದು. 'ಕೇಂದ್ರದ ಮೇಲೆ ದಾಳಿ ನಡೆದರೆ ತಪ್ಪಿಸಿಕೊಳ್ಳುವ ಮಾರ್ಗಗಳಾವುವು'- ಅಲ್ಲಿಗೆ ತಲುಪಿದಾಗ ಕಾಮ್ರೇಡ್ ನಾಗ್‌ರನ್ನು ನಾನು ಪ್ರಶ್ನಿಸಿದೆ. ಪ್ರತಿಸಲವೂ ಹೊಸ ಸ್ಥಳಕ್ಕೆ ಹೋದಾಗ ನಾನು ಕೇಳುವಸಹಜ ಪ್ರಶ್ನೆಯದು. ಆದರೆ ಇಲ್ಲಿ ನಾಗ್‌ಗೆ ನನ್ನ ಪ್ರಶ್ನೆಯಿಂದ ಇರುಸುಮುರುಸು ಆದುದನ್ನು ನಾನು ಗಮನಿಸಿದೆ. ಹಾಗೇಕೆ ಎಂಬುದಕ್ಕೆ ಉತ್ತರ ಮಾತ್ರ ನನಗೂ ಇನ್ನೂ ಸಿಕ್ಕಿಲ್ಲ.

"ಇದು ಹಿಂಬಾಗಿಲು...." ಆತ ತೋರಿಸಿದ.

'ಇದು ಹಿಂಬಾಗಿಲು' - ಎಂದು ನಾಗ್ ತೋರಿಸಿದರು. "ಆದರೆ ಇಲ್ಲಿನ ಪರಿಸ್ಥಿತಿ ಭಿನ್ನವಾದುದು. ಒಂದು ವೇಳೆ ನಮ್ಮ ಜಾಗದ ಮೇಲೆ ದಾಳಿ ನಡೆದರೆ ಶಸ್ತ್ರಗಳಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳುತ್ತೇವೆ. ಪೊಲೀಸರ ಕೈಗೆ ಸಿಗುವುದೆಂದರೆ ಅವರು ನಮ್ಮನ್ನು ಸಾಯಿಸಿದರೆಂದೇ ಲೆಕ್ಕ. ಪ್ರತಿರೋಧ ತೋರಿಸುವುದು; ವೈರಿಗಳನ್ನು ಸ್ವಲ್ಪಕಾಲ ತಡೆಹಿಡಿದು ನಮ್ಮಲ್ಲಿನ ಕೆಲವರು ತಪ್ಪಿಸಿಕೊಂಡು ಹೋಗುವಂತೆ ಮಾಡುವುದೇ ಬೇರೆಲ್ಲದ್ದಕ್ಕಿಂತ ಹೆಚ್ಚು ವಾಸ್ತವಿಕ ಪರಿಹಾರವಾಗಿದೆ" ಎಂದು ಹೇಳಿದ ನಾಗ್ ಮೂಲೆಯಲ್ಲಿದ್ದ ಧೂಳು ಹಿಡಿದ ಹಳೆಯ ಸ್ಟೆನ್‌ಗನ್ ಒಂದನ್ನು ತೋರಿಸಿ 'ಅಲ್ಲಿ ಶಸ್ತ್ರವಿದೆ' ಎಂದರು.

"ಇದು ಹಳೆಯದು ಹಾಗೂ ಇದರ ಸ್ಪ್ರಿಂಗ್ ದೋಷದಿಂದ ಕೂಡಿದೆ. ಆದರೆ ಹೊಸತೆಲ್ಲವನ್ನು ನಾವು ಕಾಡಿಗೆ ಕಳಿಸುತ್ತಿದ್ದೇವೆ" ಎಂದೂ ನಾಗ್ ವಿವರಿಸಿದರು.

"ಶತ್ರುಗಳು ನಮ್ಮೆಲ್ಲ ಸಂಗಾತಿಗಳನ್ನು ಗುಂಡಿಟ್ಟು ಸಾಯಿಸುತ್ತಿದ್ದಾರೆ. ಕೈಗೆ ಸೆರೆ ಸಿಕ್ಕರೂ ಕಾರ್ಯಾಚರಣೆಯಲ್ಲಿ ಸತ್ತರು ಎಂದು ಸುಳ್ಳು ಸುದ್ದಿ ಹರಡುತ್ತಾರೆ. ಇತ್ತೀಚೆಗಷ್ಟೇ ಒಬ್ಬ ಪ್ರಮುಖ ಸಂಗಾತಿಯನ್ನು ಬೆಂಗಳೂರಿನಲ್ಲಿ ಸೆರೆ ಹಿಡಿಯಲಾಯಿತು. ಇವತ್ತು ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಯ ಪ್ರಕಾರ ಆತ ಪೊಲೀಸ್ ಪಡೆ ಜತೆ ನಡೆದ ಕಾಳಗದಲ್ಲಿ ಹತರಾಗಿದ್ದಾರೆ" ನಾಗ್ ಹೇಳುತ್ತಾಹೋದರು.

ಫ್ಯಾಸಿಸಂ ಅಪಾಯ

ನಾಗ್ ಅವರ ವಿವರಣೆ ಕೇಳಿದಾಗ ತೆಲಂಗಾಣ ಹೋರಾಟವನ್ನು ಹತ್ತಿಕ್ಕಲು ವೈರಿ ಪೈಶಾಚಿಕತೆ ಮೆರೆಯುತ್ತಿದೆ ಎಂದು ನಾನು ಮೊದಲಿಗೆ ನಂಬಲಿಲ್ಲ, ನನಗದು ಮನವರಿಕೆಯಾಗಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. 'ಬಂಧಿತರಾದರೆಂದರೆ ಗುಂಡೇಟಿನಿಂದ ಸಾಯುವುದೇ ಎಂದರ್ಥ' ಎಂಬ ಅವರ ಮಾತು ನನ್ನ ಕಿವಿಯಲ್ಲಿ ಅನುರಣಿಸಿತು. 'ನಾಗ್ ಹೇಳುವುದರಲ್ಲಿ ಉತ್ಪ್ರೇಕ್ಷೆಯಿದೆ' ಎಂದು ನನ್ನಷ್ಟಕ್ಕೆ ನಾನು ಗೊಣಗಿದೆ. ಆ ಕಾಲದಲ್ಲಿ, ಇಡೀ ದೇಶದಲ್ಲಿ ಫ್ಯಾಸಿಸಂ ಅನಿವಾರ್ಯವಾಗುತ್ತದೆ ಎಂದು ಅಪಾಯದ ಗಂಟೆ ಬಾರಿಸಿದವರ ಪೈಕಿ ನಾನೂ ಒಬ್ಬನಾಗಿದ್ದೆ. ನಾಗ್ ಹೇಳಿದ್ದು ಸಹಜ ಆಗಿರಬೇಕಾಗಿತ್ತು ಎಂಬುದು ನನ್ನ ಭಾವನೆ. ಆದರೆ ಅದು ಹಾಗಾಗಿರಲಿಲ್ಲ. ಇದಕ್ಕೆ ಕಾರಣಗಳೇನೆಂಬುದನ್ನು ಮೊದಲು ವಿವರಿಸಬೇಕು. ಯಾಕೆಂದರೆ ಕೇವಲ ನನ್ನ ವೈಯಕ್ತಿಕ ಮನೋಭಾವದಿಂದಾಗಿ ಆಗ ಆಲೋಚಿಸುವಂತಾಗಲಿಲ್ಲ. ಆದರೆ ಅದು ಇಡೀ ದೇಶದಲ್ಲಿ ನಗ್ನ ಭಯೋತ್ಪಾದನೆ (Whit Terror ಬಗ್ಗೆ ಪಕ್ಷದಲ್ಲಿ ಆ ಕಾಲದಲ್ಲಿದ್ದ ನಿರ್ದಿಷ್ಟ ಪ್ರವೃತ್ತಿಯೊಂದರ ಪ್ರಮುಖ ಪ್ರಶ್ನೆ ಅದಾಗಿತ್ತು.

ಸಂಗಾತಿಗಳೇ, ಮೇಲೆ ಪ್ರಸ್ತಾವಿಸಿದ ಪ್ರವೃತ್ತಿಯನ್ನು ಪ್ರತಿನಿಧಿಸುವವರು; ಆದರೆ ಆಂಧ್ರದ ನಗರಗಳು ಮತ್ತು ಗ್ರಾಮೀಣ ಭಾಗಗಳು ಮತ್ತು ತೆಲಂಗಾಣದಲ್ಲಿ ನಗ್ನ ಭಯೋತ್ಪಾದನೆ ಇರುವುದನ್ನು ಕಾಣಲು ಅವಕಾಶ ಸಿಗದವರು, ಈ ಪ್ರವೃತ್ತಿಯ ಬಗ್ಗೆ ತಾತ್ವಿಕ ನಂಬಿಕೆ ಹೊಂದಿದ್ದಾರೆ ಅಷ್ಟೇ. ಹೀಗಾಗಿ ಸಹಜವಾಗಿಯೇ ಅವರಿಗೆ ಈ ಪ್ರವೃತ್ತಿಯ ಪರಿಕಲ್ಪನೆ ಸರಿಯಾಗಲಿಲ್ಲ.

(ಮುಂದುವರಿಯುವುದು)

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಆಗಸ್ಟ್ 16 ರಿಂದ 31, 2003
ಕೇಂದ್ರ ಸರ್ಕಾರದ ಅಮೆರಿಕ ಪರ ವಿದೇಶಿ - ನೀತಿ, ಜನವಿರೋಧಿ ಆರ್ಥಿಕ ನೀತಿ ಹಾಗೂ ಕೋಮುವಾದೀಕರಣದ ವಿರುದ್ಧ ಪ್ರಚಾರಾಂದೋಲನ-ಸಿಪಿಐ(ಎಂ) ಕರೆ.
ಸೆಪ್ಟೆಂಬರ್ 8 ರಂದು ಬೆಂಗಳೂರಿನಲ್ಲಿ ರ್‍ಯಾಲಿ
ಸೆಪ್ಟೆಂಬರ್ 18 ರಂದು ಮಂಗಳೂರಿನಲ್ಲಿ ರ್‍ಯಾಲಿ

ಆಗಸ್ಟ್ 13, 2003
ತಮಿಳುನಾಡು ಸರ್ಕಾರಿ ನೌಕರರ ಹೋರಾಟಕ್ಕೆ ಸೌಹಾರ್ದ ದಿನ, ಸಿಐಟಿಯು ಕರೆ

ಆಗಸ್ಟ್ 13, 2003
ಪೊಲೀಸ್ ದೌರ್ಜನ್ಯಕ್ಕೆ ಬಲಿಯಾದ ವಿದ್ಯಾರ್ಥಿ ಚಂದ್ರಮೂರ್ತಿ ಕುಟುಂಬಕ್ಕೆ ನ್ಯಾಯ ಒದಗಿಸಲು ಒತ್ತಾಯಿಸಿ, ಸ್ಲಂ ಜನರ ಮೇಲೆ ದೌರ್ಜನ್ಯ ವಿರೋಧಿಸಿ ಬೆಂಗಳೂರು ಪೋಲೀಸ್ ಕಮಿಷನರ್ ಕಚೇರಿ ಮುಂದೆ ಧರಣಿ. ವಿನೋಭಾನಗರದಿಂದ ಮೆರವಣಿಗೆ - 24 ಸಂಘಟನೆಗಳ ಜಂಟಿ ಕರೆ

ಅಕ್ಟೋಬರ್ 16 ರಿಂದ 19 ರವರೆಗೆ
ಸಿಐಟಿಯು ರಾಜ್ಯಸಮ್ಮೇಳನ, ಮೈಸೂರಿನಲ್ಲಿ



ಜನರ ಮರಣ ಶಾಸನ ಬರೆದ ಮುಖ್ಯಮಂತ್ರಿ ಕೃಷ್ಣ

ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಜಿ.ಎನ್.ನಾಗರಾಜ್‌ರವರು ಪತ್ರಿಕಾಗೋಷ್ಠಿಯಲ್ಲಿ ಬಿಡುಗಡೆ ಮಾಡಿದ ಹೇಳಿಕೆ ಇಲ್ಲಿದೆ. ರಾಜ್ಯದ ಜನತೆ ಮತ್ತು ಸರ್ಕಾರಗಳು ಮುಖಾಮುಖಿಯಾಗುತ್ತಿವೆ. ಈ ಸಂದರ್ಭದಲ್ಲಿ ಸಿಪಿಐ(ಎಂ) ಜನರ ನಡುವೆ ಆಂದೋಲನವನ್ನು ಸಾರಿದೆ.

ಬರಗಾಲ ಮತ್ತು ಆತ್ಮಹತ್ಯೆಗಳು : ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಎಂ.ರಾಂಪುರ ಗ್ರಾಮದ ಒಂದೇ ಕುಟುಂಬದ 6 ಜನ ತೀವ್ರ ಬಡತನ, ಹಸಿವು ಮತ್ತು ಸಾಲದ ಬಾಧೆಯಿಂದ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವುದು ರಾಜ್ಯದ ಬಡ ಜನರ ಬವಣೆಯನ್ನು ವಿವರಿಸುತ್ತದೆ. ಇದೂ ಸಾಲದೆಂಬಂತೆ, ಪ್ರತಿನಿತ್ಯ ಒಬ್ಬರು, ಇಬ್ಬರು ರೈತರು ಸಾಲದ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಚಿತ್ರದುರ್ಗ ಜಿಲ್ಲೆಯ ಹೊಸದುರ್ಗ ತಾಲೂಕಿನ ಎ.ಆರ್. ಸಿದ್ದಲಿಂಗಪ್ಪ ಬ್ಯಾಂಕಿನ ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹಾಗೇ ಕೋಲಾರದ ಶ್ರೀನಿವಾಸಪುರ ತಾಲೂಕಿನ ಕೂಲಿಗೆಪಲ್ಲಿಯ ರೈತರ ವೆಂಕಟರಮಣಪ್ಪ, ಬಾಗಲಕೋಟೆಯ ಮಧೋಳ ತಾಲೂಕಿನ ಪಿ.ಎಂ.ಬುದ್ನಿ, ಗುಲ್ಬರ್ಗಾ ಜಿಲ್ಲೆಯ ಕೊಡಮಾರು ಗ್ರಾಮದಲ್ಲಿ ಒಬ್ಬರೈತನೂ ಸೇರಿ ಇಬ್ಬರು ಆತ್ಮಹತ್ಯೆ ಮಾಡಿಕೊಂಡ ಸರಣಿಯಲ್ಲಿದ್ದಾರೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಕಳೆದ ಒಂದು ವಾರದಲ್ಲಿ ಸತತವಾಗಿ ಮೂರು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಹರಿಹರ ತಾಲ್ಲೂಕಿನ ಹನಗವಾಡಿ ಗ್ರಾಮದ ಯುವ ರೈತ 27 ವರ್ಷದ ಎಸ್.ಗಂಗಾಧರಪ್ಪ ಆಗಸ್ಟ್ 5 ನೇ ತಾರೀಕಿನಂದು ಆತ್ಮಹತ್ಯೆ ಮಾಡಿಕೊಂಡಿರುತ್ತಾರೆ.

ಸರಕಾರದ ಅಂಕಿ ಅಂಶದ ಪ್ರಕಾರವೇ ಈವರೆಗೆ 185 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇಷ್ಟೆಲ್ಲ ದಾರುಣ ಘಟನೆಗಳು ನಡೆಯುತ್ತಿದ್ದರೂ ಹಸಿವಿನಿಂದ ಯಾರೂ ಸತ್ತಿಲ್ಲ ಎಂದು ಮುಖ್ಯಮಂತ್ರಿ, ಗೃಹಸಚಿವರು ಹೇಳಿಕೆ ನೀಡುತ್ತಿರುವುದು, ವಾಸ್ತವ ಪರಿಸ್ಥಿತಿಗೆ ಬಗೆದ ವಂಚನೆಯಾಗಿದೆ.

ಕೇಂದ್ರ, ರಾಜ್ಯ ಸರ್ಕಾರಗಳೆರಡೂ ಹೊಣೆ: ಇಂತಹ ಅಮಾನವೀಯ ಘಟನೆಗಳಿಗೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಎರಡೂ ಪೂರ್ತಿ ಹೊಣೆಯಾಗಿವೆ. ಸತತವಾಗಿ 3ನೇ ವರ್ಷವೂ ಬರಗಾಲ ಆವರಿಸಿದ್ದು, ಈ ವರ್ಷವೂ 126 ತಾಲ್ಲೂಕುಗಳು ಬರಪೀಡಿತ ಎಂದು ಅಂದಾಜು ಮಾಡಲಾಗಿದೆ. 9.90 ಲಕ್ಷ ಮೆಟ್ರಿಕ್‌ಟನ್ ಆಹಾರಧಾನ್ಯ ಹಾಗೂ 1889 ಕೋಟಿ ರೂ. ನೆರವನ್ನು ರಾಜ್ಯ ಸರ್ಕಾರ ಯಾಚಿಸಿದ್ದರೂ ಕೇಂದ್ರ ಯಾವುದೇ ನೆರವಿಗೆ ಧಾವಿಸಿಲ್ಲ. ಕೇಂದ್ರ ಸರ್ಕಾರದ ಗೋದಾಮುಗಳಲ್ಲಿ ಕೋಟಿಗಟ್ಟಳೆ ಟನ್ ಆಹಾರ ಧಾನ್ಯ ಕೊಳೆಯುತ್ತಿದೆ. ಇದನ್ನು ಬರಪೀಡಿತ ಪ್ರದೇಶಗಳಿಗೆ ಅಂತ್ಯೋದಯ ಯೋಜನೆಯ ಅಡಿಯಲ್ಲಿ ಎಲ್ಲಾ ಕೃಷಿ ಕೂಲಿಕಾರರು, ಸಣ್ಣ ರೈತರಿಗೆ ಸಿಗುವಂತೆ ಮಾಡಬೇಕು. ರಿಸರ್ವ್ ಬ್ಯಾಂಕ್, ನಬಾರ್ಡ್ ಮೂಲಕವಾಗಿ ಕೃಷಿ ಕ್ಷೇತ್ರಕ್ಕೆ ಸುಲಭ ದರದಲ್ಲಿ ಸಾಲ ಒದಗಿಸಬೇಕು ಹಾಗೂ ಸಣ್ಣ ಮತ್ತು ಮಧ್ಯಮ ರೈತರಿಗೆ ಹಿಂದಿನ 3 ವರ್ಷದ ಸಾಲವನ್ನು ಕೇಂದ್ರ ಸರ್ಕಾರ ಮನ್ನಾ ಮಾಡಬೇಕು. ಶ್ರೀಮಂತ ರೈತರ ಸಾಲವನ್ನು ಮುಂದಕ್ಕೆ ಹಾಗಬೇಕು.

ಜಾಗತೀಕರಣದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರದ ನೀತಿಯ ಭಾಗವಾಗಿ ಲಾಭದ ಒಂದೇ ಧೋರಣೆಯನ್ನು ಮುಂದಿಟ್ಟು ರಾಷ್ಟ್ರೀಕೃತ ಬ್ಯಾಂಕುಗಳು ವರ್ಷದಿಂದ ವರ್ಷಕ್ಕೆ ಕೃಷಿ ಕ್ಷೇತ್ರಕ್ಕೆ ಸಾಲ ಕಡಿಮೆ ಮಾಡುತ್ತಿರುವುದರಿಂದ ಖಾಸಗಿ ಸಾಹುಕಾರರ ಸಾಲದ ಬಲೆಗೆ ಬಿದ್ದಿರುವುದು ರೈತರ ಆತ್ಮಹತ್ಯೆಗೆ ಒಂದು ಕಾರಣ. ಬರ ಪರಿಸ್ಥಿತಿಯ ಅರಿವಿದ್ದರೂ, ಸಾಲ ವಸೂಲಾತಿಗಾಗಿ ಜಪ್ತಿ ಮಾಡುವುದು ಸೇರಿದಂತೆ, ಕಠಿಣ ಕ್ರಮ ಕೈಗೊಳ್ಳುತ್ತಿರುವುದು ಆತ್ಮಹತ್ಯೆಗೆ ಇನ್ನೊಂದು ಕಾರಣವಾಗಿದೆ.

ಹರಪನಹಳ್ಳಿ ತಾಲ್ಲೂಕಿನಲ್ಲಿ ಸಾಧಾರಣ 10000 ರೈತರು ಕೃಷಿ ಕೂಲಿಕಾರರು ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಾಮಗಾರಿ ಒದಗಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಗೋದಾಮುಗಳಲ್ಲಿರುವ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿ ಕೂಲಿಗಾಗಿ ಕಾಳು ಯೋಜನೆಯಲ್ಲಿ ಪ್ರತಿಯೊಬ್ಬ ರೈತ, ಕೃಷಿ ಕೂಲಿಗಾರರೂ ಒಳಗೊಳ್ಳುವಂತೆ ಗ್ರಾಮೀಣ ಕಾಮಗಾರಿಗಳನ್ನು ಕೈಗೆತ್ತಿಗೊಳ್ಳಬೇಕು ಎಂದು ಸಿಪಿಐ(ಎಂ) ಆಗ್ರಹಿಸುತ್ತದೆ.

ಸುಪ್ರೀಂ ಕೋರ್ಟ್ ತೀರ್ಪು- ಪ್ರಜಾಪ್ರಭುತ್ವೀಯ ಶಕ್ತಿಗಳು ಒಪ್ಪಲಾಗದು: ತಮಿಳು ನಾಡು ಸರ್ಕಾರಿ ನೌಕರರ ಮುಷ್ಕರಕ್ಕೆ ಸಂಬಂಧಿಸಿ ನೀಡಿದ ತೀರ್ಪಿನಲ್ಲಿ ಸರ್ವೋಚ್ಚ ನ್ಯಾಯಾಲಯವು ರಾಜ್ಯ ಸರ್ಕಾರಿ ನೌಕರರಿಗೆ ಮುಷ್ಕರ ಮಾಡಲು ಯಾವುದೇ ಮೂಲಭೂತ, ಕಾನೂನುಬದ್ಧ ಅಥವಾ ನೈತಿಕ ಹಕ್ಕಿಲ್ಲ ಎಂದು ಹೇಳಿರುವುದು ಸಂವಿಧಾನದಲ್ಲಿ ನಮೂದಿಸಿರುವ ಮೂಲಭೂತ ಹಕ್ಕಿಗೆ ವಿರುದ್ಧವಾದುದು. ಇದು ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ILO) ಯ ನಿಯಮಾವಳಿಗಳಿಗೂ ವಿರುದ್ಧವಾಗಿದೆ.

ಮಾತ್ರವಲ್ಲ, ಸಾಮಾಜಿಕ, ಆರ್ಥಿಕ ಶೋಷಣೆಗೆ ಒಳಗಾದ ಜನರ ಸಮಸ್ಯೆಗಳನ್ನು ಎತ್ತಿ ಹಿಡಿದು ಹೋರಾಡುವ ರಾಜಕೀಯ ಪಕ್ಷ ಮತ್ತು ಸಂಘಟನೆಗಳಿಗೂ ಇದನ್ನು ಅನ್ವಯಿಸಿದ್ದು ತೀವ್ರ ಆಘಾತಕಾರಿಯಾಗಿದೆ. ಯಾವುದೇ ಪ್ರಜಾಪ್ರಭುತ್ವ ಶಕ್ತಿಗಳು ಈ ತೀರ್ಪನ್ನು ಒಪ್ಪಲು ಸಾಧ್ಯವಿಲ್ಲ ಹಾಗೂ ಇದನ್ನು ಮರುಪರಿಶೀಲನೆ ಮಾಡಬೇಕೆಂದು ಸಿಪಿಐ(ಎಂ) ಒತ್ತಾಯಿಸಿದೆ.

ವೃತ್ತಿ ಶಿಕ್ಷಣಗಳಿಗೆ ಸಂಬಂಧಪಟ್ಟ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಕುರಿತಂತೆ ಹಾಗೂ ಗ್ರಾಮೀಣ ಕೃಪಾಂಕದ ಬಗ್ಗೆ ನ್ಯಾಯಾಲಯವು ನೀಡಿರುವ ತೀರ್ಪುಗಳೂ ಕೂಡ ನ್ಯಾಯಾಂಗ, ಜಾಗತೀಕರಣ- ಖಾಸಗೀಕರಣದ ಜನ ವಿರೋಧಿ ನೀತಿಗಳಿಂದ ಪ್ರಭಾವಿತವಾಗಿವೆ ಎಂಬ ಅನುಮಾನಗಳು ಬರುವಂತಾಗಿದೆ.


ಸಿಇಟಿ ಇನ್ನೂ ಡೋಲಾಯಮಾನ, ಕೇಂದ್ರ ಸರ್ಕಾರದ ಮಧ್ಯಪ್ರವೇಶ ಅಗತ್ಯ : ಸಿಇಟಿಯ

> **ಕೇಂದ್ರ - ರಾಜ್ಯ ಸರ್ಕಾರಗಳ ನೀತಿಗಳ ವಿರುದ್ಧ ಆಗಸ್ಟ್ 16 ರಿಂದ 31 ರ ವರೆಗೆ ಸಿಪಿಐ(ಎಂ) ರಾಜಕೀಯ ಪ್ರಚಾರಾಂದೋಲನ ಸಂಘಟಿಸುತ್ತಿದೆ.**
>
> **ಆಗಸ್ಟ್ 9, ರಾಜ್ಯಮಟ್ಟದ ರ್‍ಯಾಲಿ ಬೆಂಗಳೂರಿನಲ್ಲಿ**

ಮೂಲಕ ವಿಪರೀತ ಹಣ ತೆತ್ತು ಖಾಸಗಿ ಮೆಡಿಕಲ್, ಡೆಂಟಲ್ ಕಾಲೇಜುಗಳಿಗೆ ಪ್ರವೇಶ ಬಯಸಿದರೆ, ಸುಪ್ರೀಂಕೋರ್ಟ್ ತೀರ್ಪು ಬರುವವರೆಗೆ ಕಾಯಬೇಕೆಂದು ಖಾಸಗಿ ಶಿಕ್ಷಣ ಸಂಸ್ಥೆಗಳು ಹೇಳುತ್ತಿವೆ. ಇದರಿಂದ ವಿದ್ಯಾರ್ಥಿಗಳ ಪರಿಸ್ಥಿತಿ ಡೋಲಾಯಮಾನವಾಗಿದೆ.

ಇಂದು ರಾಜ್ಯದಲ್ಲಿ ಮೆಡಿಕಲ್, ಡೆಂಟಲ್ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿಗಳಿಗೆ ಕ್ರಮವಾಗಿ 1.90, 1.10 ಮತ್ತು 0.36 ಲಕ್ಷ ರೂ. ಶುಲ್ಕ ನಿಗದಿ ಮಾಡಿದ್ದು, ಅತ್ಯಂತ ಶ್ರೀಮಂತರ ಮಕ್ಕಳು ಮಾತ್ರವೇ ಮೆಡಿಕಲ್, ಡೆಂಟಲ್ ಕಾಲೇಜಿಗೆ ಪ್ರವೇಶ ಕೋರುವಂತಾಗಿದೆ. ಬಡ, ಮಧ್ಯಮ ವರ್ಗ ಮತ್ತು ದಲಿತ ವಿದ್ಯಾರ್ಥಿಗಳು ವೃತ್ತಿಪರ ಶಿಕ್ಷಣದಿಂದ ವಂಚಿತರಾಗಲಿದ್ದು ಸಾಮಾಜಿಕ ನ್ಯಾಯಕ್ಕೆ ಕೊಡಲಿ ಪೆಟ್ಟಾಗಿದೆ.

ಸುಪ್ರೀಂಕೋರ್ಟ್ ತೀರ್ಪು ದೇಶದ ವಿವಿಧ ರಾಜ್ಯಗಳಿಗೆ ಅನ್ವಯಿಸಲಿದೆ. ಇಂತಹ ಸನ್ನಿವೇಶದಲ್ಲಿ ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ, ವಿದ್ಯಾರ್ಥಿಗಳ ಪ್ರವೇಶ, ಶುಲ್ಕ ಮತ್ತು ಆಡಳಿತದ ವಿಷಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ನಿಯಂತ್ರಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ನೀಡುವ ಸಮಗ್ರ ಶಾಸನವೊಂದನ್ನು ಕೂಡಲೇ ತರಬೇಕೆಂದು ಸಿಪಿಐ(ಎಂ) ಆಗ್ರಹಪಡಿಸಿದೆ. ಹಾಗೂ ಎಲ್ಲಾ ವಿಭಾಗದ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಕಳೆದ ವರ್ಷ ನಮ್ಮ ರಾಜ್ಯದಲ್ಲಿ ಇದ್ದ ಶುಲ್ಕಕ್ಕೆ ಮಿತಿಗೊಳಿಸಬೇಕು.



ಮಧ್ಯಮಾವಧಿ ಹಣಕಾಸು ಯೋಜನೆ -ಮರಣಶಾಸನ: ನಿನ್ನೆ ವಿಧಾನಸಭೆಯಲ್ಲಿ ಎಸ್.ಎಂ.ಕೃಷ್ಣರವರು 2003 ರಿಂದ 2007 ರ ವರೆಗಿನ ಮಧ್ಯಮಾವಧಿ ಹಣಕಾಸು ಯೋಜನೆಯನ್ನು ಮಂಡಿಸಿದ್ದಾರೆ. ಹಾಗೂ ಮುಂದಿನ ವರ್ಷಗಳಲ್ಲಿ ರಾಜ್ಯ ಸರ್ಕಾರ ಮುಟ್ಟಬೇಕಾದ ಹಣಕಾಸು ಗುರಿಗಳು, ಸಾರ್ವಜನಿಕ ಉದ್ದಿಮೆಗಳ ಖಾಸಗೀಕರಣ, ವಿದ್ಯುತ್, ನೀರಾವರಿ, ಸಾರಿಗೆ ಮೊದಲಾದ ದರಗಳ ಏರಿಕೆ - ಇವುಗಳಿಗೆ ಮುಂದಿನ 5 ವರ್ಷಗಳ ಅವಧಿಯಲ್ಲಿ ಏರಿಸಬೇಕಾಗಿರುವ ಪ್ರಮಾಣವನ್ನು ಸೂಚಿಸುವ ಯೋಜನೆ ಇದು. ಈ ಸರಕಾರದ ಅವಧಿ ಇನ್ನು ಕೆಲವೇ ತಿಂಗಳುಗಳಲ್ಲಿ ಮುಗಿಯಲಿರುವಾಗ ಮುಂದೆ ಚುನಾಯಿತರಾಗಿ ಆಯ್ಕೆಯಾಗಲಿರುವ ವಿಧಾನಸಭೆ ಹಾಗೂ ಸರ್ಕಾರಗಳು ಏನು ಮಾಡಬೇಕೆಂಬುದನ್ನು ಈ ಸರ್ಕಾರ ನಿರ್ಧರಿಸುವ ಹಕ್ಕನ್ನು ಯಾರು, ಯಾವಾಗ ನೀಡಿದ್ದಾರೆ ಎಂಬುದನ್ನು ಜನತೆ ಪ್ರಶ್ನಿಸಬೇಕಾಗಿದೆ. ಮುಂದಿನ ಸರ್ಕಾರಗಳ ನೀತಿಗಳನ್ನು ಇಂದೇ ನಿರ್ಧರಿಸುವ ಈ ಕ್ರಮ ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕೆ ವಿರೋಧಿಯಾಗಿದೆ.

ವಿಶ್ವಬ್ಯಾಂಕ್ ನೀಡಿದ ಸಂರಚನಾ ಹೊಂದಾಣಿಕೆಯ ಸಾಲದ ಶರತ್ತುಗಳ ಭಾಗವಾಗಿ ಕೃಷ್ಣ ಸರ್ಕಾರ ಇಂತಹ ಅನೈತಿಕ ಕ್ರಮಕ್ಕೆ ಮುಂದಾಗಿರುವುದನ್ನು ರಾಜ್ಯದ ಎಲ್ಲಾ ರಾಜಕೀಯ ಪಕ್ಷಗಳು ಪ್ರತಿರೋಧಿಸಬೇಕೆಂದು ಸಿಪಿಐ(ಎಂ) ಕರೆ ನೀಡಿದೆ. ಈ ಪ್ರಜಾಪ್ರಭುತ್ವ ವಿರೋಧಿ ಪದ್ಧತಿ ಹಾಗೂ ಯೋಜನೆಯನ್ನು ವಿಧಾನಸಭೆಯು ಸಾರಾಸಗಟಾಗಿ ನಿರಾಕರಿಸಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ.

ಈ ಯೋಜನೆಯಲ್ಲಿ ರಾಜ್ಯದ ಹಣಕಾಸು ಸ್ಥಿತಿ ಸ್ಥಿರಗೊಳ್ಳುತ್ತಿದೆ ಎಂದು ಕೃಷ್ಣ ಸರ್ಕಾರ ಜಂಭ ಕೊಚ್ಚಿಕೊಂಡಿದೆ. ರಾಜ್ಯದ ಜನತೆಯ ಆರ್ಥಿಕ ಪರಿಸ್ಥಿತಿಯನ್ನು ಅಸ್ಥಿರತೆಗೆ ದೂಡಿ ಆತ್ಮಹತ್ಯೆಗಳಿಗೆ, ಅಪಾರ ವಲಸೆಗಳಿಗೆ, ನಿರ್ಗತಿಕತನಕ್ಕೆ ತಳ್ಳಿ, ಈ ಆರ್ಥಿಕ ಸ್ಥಿರತೆಯನ್ನು ಸಾಧಿಸಲಾಗಿದೆ ಎಂಬುದನ್ನು ಜನತೆ ಬಹು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ. ಅಲ್ಲದೆ ಸರ್ಕಾರಿ ಉದ್ದಿಮೆ ಗಳನ್ನು ಖಾಸಗೀಕರಿಸುವ, ವಿದ್ಯುತ್ ಶಿಕ್ಷಣ ಆರೋಗ್ಯ ದರಗಳನ್ನು ಮುಗಿಲಿಗೇರಿಸುವ ಖಾಸಗೀ ಕರಿಸುವ ಈ ಯೋಜನೆ ನಿರಂತರವಾಗಿ ರಾಜ್ಯದ ಜನತೆಯನ್ನು ಅಸ್ಥಿರತೆಗೆ ದೂಡುವ ಆತ್ಮಹತ್ಯೆಗಳನ್ನು ಹೆಚ್ಚಿಸುವ ಮರಣ ಶಾಸನವಾಗಿದೆ.

ಗ್ರಾಮೀಣ ಕೃಪಾಂಕ ಆಧಾರಿತ ನೌಕರರ ಮರುನೇಮಕ : ರೈತರ ಆತ್ಮಹತ್ಯೆ ಒಂದೆಡೆಯಾದರೆ, ಗ್ರಾಮೀಣ ಕೃಪಾಂಕದ ಕುರಿತಾಗಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಿಂದಾಗಿ ಕೆಲಸಕಳೆದು ಕೊಂಡ ಹತಾಶ ನೌಕರರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅವರ ಮರುನೇಮಕದ ಕುರಿತಾಗಿ ರಾಜ್ಯ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿದೆ. 4-5 ವರ್ಷಗಳಿಂದ ಸೇವೆ ಸಲ್ಲಿಸುತ್ತಾ ಬಂದಿದ್ದ ನೌಕರರಿಗೆ ಒಂದು ತಿಂಗಳು ಸಂಬಳಕ್ಕೂ ಚ್ಯುತಿ ಬಾರದಂತೆ ರಾಜ್ಯ ಸರ್ಕಾರ ಮರುನೇಮಕ ಮಾಡಿಕೊಳ್ಳಬೇಕಾಗಿತ್ತು.

ಈಗಲೂ ಕೂಡ ವಿಧಾನಸೌಧದಲ್ಲಿ ಒಂದು ಮಂತ್ರಿ ಶಾಖೆಯಿಂದ ಮತ್ತೊಂದು ಮಂತ್ರಿ ಶಾಖೆಗೆ ಫೈಲುಗಳನ್ನು ತಳ್ಳುತ್ತಾ ವಿಳಂಬ ಮಾಡದೆ ಮರುನೇಮಕ ಮಾಡಿಕೊಳ್ಳಬೇಕು. ಇದಕ್ಕೆ ಮಧ್ಯಮಕಾಲೀನ ಹಣಕಾಸು ಯೋಜನೆಗಳ ಆರ್ಥಿಕ ಸ್ಥಿರತೆ ನೆಪ ಅಡ್ಡಿಯಾಗಬಾರದು.. ○

ವಿಧಾನಸಭೆ ಕಲಾಪ : ಕಾಂಗ್ರೆಸ್-ಬಿಜೆಪಿ ಸಲ್ಲಾಪ

ಶುಕ್ರವಾರದಂದು ವಿಧಾನಸಭಾ ಕಲಾಪಗಳು ಮುಕ್ತಾಯವಾದದ್ದೇ ಭಾರಿ ಗದ್ದಲ, ಕೋಲಾಹಲ, ಗೊಂದಲಗಳ ನಡುವೆಯೇ. ಪ್ರಜಾಪ್ರಭುತ್ವವನ್ನು ಅಣಕಿಸಿ ಪ್ರಹಸನದ ಮಟ್ಟಕ್ಕೆ ಇಳಿಸಲಾಯಿತು.

ಕಲಾಪಗಳು ನಡೆಯುತ್ತಿರುವಾಗಲೇ 'ಅಧಿಕೃತ' ವಿರೋಧ ಪಕ್ಷ(!)ವಾಗಿರುವ ಬಿಜೆಪಿಯ ನಾಯಕರು ಛಾಪಾಕಾಗದದ ಹಗರಣದಲ್ಲಿ ಆರೋಪಿಯಾಗಿರುವ ಕರೀಂಲಾಲನ ಸುತ್ತ ವಾದ ವಿವಾದಕ್ಕೆ ತೊಡಗಿದರು. ನಿಲುವಳಿ ಸೂಚನೆಗೆ ಸಭಾಧ್ಯಕ್ಷ ವೆಂಕಟ್ಟಪ್ಪನವರು ಅವಕಾಶ ಕೊಡಲಿಲ್ಲವೆಂದು ಗದ್ದಲದ ಧೂಳನ್ನೆಬ್ಬಿಸಿದರು. ಇದು ವಿಪರೀತಕ್ಕೆ ಹೋಗುತ್ತಿರುವುದನ್ನು ಗಮನಿಸುತ್ತಾ, ಈ ನಡುವೆಯೇ ಸಭಾಧ್ಯಕ್ಷರು ಮಹತ್ವದ ನಾಲ್ಕು ಮಸೂದೆಗಳನ್ನು ಮಂಡಿಸಿಯೇ ಬಿಟ್ಟರು. ಧ್ವನಿಮತದ ಮೂಲಕ ಅಂಗೀಕಾರಕ್ಕೂ ಮುಂದಾದರು. ಇವುಗಳ ಬಗ್ಗೆ ಚರ್ಚೆ ನಡೆಯಬೇಕೆಂದು, ಕಾಲಾವಕಾಶವನ್ನು ಜನತಾದಳದ ಶಾಸಕರು ಕೋರಿದರೂ ಅವಕಾಶ ನೀಡದೇ, ಗೊಂದಲ-ಗದ್ದಲಗಳ ನಡುವೆ ಆಡಳಿತ ಪಕ್ಷದ ಕೆಲವರ ಧ್ವನಿ ಮತ ಪಡೆದು ಅಂಗೀಕಾರವೂ ಆಗಿ ಹೋಯ್ತು. ಆ ನಾಲ್ಕು ಮಸೂದೆಗಳು ಬಹಳ ಮುಖ್ಯವಾದ ವಿಧೇಯಕಗಳಾಗಿದ್ದವು. 1. ರಾಜ್ಯ ವಿಶೇಷ ಆರ್ಥಿಕ ವಲಯಗಳ ಅಭಿವೃದ್ಧಿ ವಿಧೇಯಕ-2003, 2. ಸ್ಥಳೀಯ ನಿಧಿ ಪ್ರಾಧಿಕಾರಗಳ ಆರ್ಥಿಕ ಹೊಣೆಗಾರಿಕೆ ವಿಧೇಯಕ-2003, 3. ರಾಜ್ಯ ವೈದ್ಯಕೀಯ ನೋಂದಣಿ ತಿದ್ದುಪಡಿ ವಿಧೇಯಕ-2003, 4. 2003 ರ ನೀರಾವರಿ ತಿದ್ದುಪಡಿ ವಿಧೇಯಕ.

ಇವು ಕರ್ನಾಟಕದ ಅಭಿವೃದ್ಧಿ, ಜನ-ಜೀವನದ ಮೇಲೆ ಪರಿಣಾಮ ಬೀರುವ ವಿಧೇಯಕಗಳು. ಚರ್ಚೆಗೆ ಒಳಗಾಗದೇ ಅವು ಸಾರ್ವಜನಿಕರ ಎದುರು ಬಾರದೇ ಒಳಗೊಳಗೇ ಅಂಗೀಕಾರ ಪಡೆದದ್ದು ಸಂಸದೀಯ ಪ್ರಜಾಪ್ರಭುತ್ವವನ್ನು ಅಣಕ ಮಾಡಿ, ಜನತೆಯ ಸಾರ್ವಭೌಮ ಹಕ್ಕನ್ನು ಅವಮಾನಗೊಳಿಸಿದೆ. ಸಭಾಧ್ಯಕ್ಷರು ಸ್ಥಾನದ ಘನತೆಯನ್ನು ಹರಾಜಿಗಿಟ್ಟು ಆಡಳಿತ ಪಕ್ಷದ ಏಜೇಟರಂತೆ ವರ್ತಿಸಿದ್ದು ಖಂಡನೀಯ. ಅವರು ಸಂದರ್ಭದ ದುರುಪಯೋಗ ಪಡೆದದ್ದು ಕೆಟ್ಟ ಪರಂಪರೆಗೆ ಅಡಿಗಲ್ಲು ಇಟ್ಟಂತಾಗಿದೆ.

ಬಿಜೆಪಿ ಸಹಕಾರ : ಅದು ಕಲಾಪಗಳ ಕೊನೆಯ ದಿನವೆಂದು ಬಿಜೆಪಿಗೂ ಗೊತ್ತಿತ್ತು. ಇಂತಹ ವಿಧೇಯಕಗಳು ಅಂಗೀಕಾರಕ್ಕೆ ಕಾಯುತ್ತಿವೆಯೆಂಬುದೂ ಗೊತ್ತಿತ್ತು. ಮಾತ್ರವಲ್ಲ, ಈ ಅಂದಾದುಂಧಿ ಗದ್ದಲದ ನಡುವೆ ವಿಧೇಯಕಗಳು ಅಂಗೀಕಾರದ ಪ್ರಕಟಣೆ ಹೊರಬಿದ್ದಕೂಡಲಾದರೂ ಇದರತ್ತ ಗಮನಹರಿಸಬೇಕಿತ್ತು.

ಈ ವಾರ ಕರ್ನಾಟಕ
ಒಂದು ನೋಟ
ಎಸ್.ವೈ.ಗುರುಶಾಂತ್

ಜನತಾದಳದವರು ಈ ಪ್ರಶ್ನೆ ಎತ್ತಿದಾಗಲಾದರೂ ಧ್ವನಿ ಗೂಡಿಸ ಬಹುದಿತ್ತು. ಆದರೆ ಇದಾವುದನ್ನು ಮಾಡಲು ಬಿಜೆಪಿ ನಾಯಕರು ಸಿದ್ಧರಿರಲಿಲ್ಲ! ಕರೀಂಲಾಲನ ಪ್ರಕರಣವನ್ನೇ ಹಿಂಜುವುದರಲ್ಲೇ ಅವರ ಹಿತವೂ ಅಡಗಿದೆ ಎಂದು ಭಾವಿಸಿರಬೇಕು. ಈ ವಿಧೇಯಕಗಳು ಹೀಗೆಯೇ ಅಂಗೀಕಾರವಾಗಲಿ ಎಂಬ ಇಂಗಿತವೂ ಇರಬಹುದು. ಯಾಕೆಂದರೆ ಕಾಂಗ್ರೆಸ್-ಬಿಜೆಪಿ ಎರಡೂ ಹೊರಗೆ ವಿರುದ್ಧ ಎಂಬಂತೆ ಮಾತನಾಡುತ್ತಾರೆ. ಆದರೆ ಆರ್ಥಿಕ ನೀತಿ-ಹಲವು ರಾಜಕೀಯ-ಸಾಮಾಜಿಕ ನೀತಿಗಳಲ್ಲಿ ಪರಸ್ಪರ ಬೆಂಬಲಿಸಿಯೇ ಪೂರಕವಾಗಿ ಕೆಲಸ ನಿರ್ವಹಿಸುತ್ತಾರೆ. ಇದು ಗೊತ್ತಿರುವ ಸಂಗತಿಯೇ ಆಗಿದೆ.

ಈ ಹಿಂದಿನ ದಿನವೇ ಮಧ್ಯಾವಧಿ ಆರ್ಥಿಕಯೋಜನೆಯನ್ನು ಮಂಡಿಸಿದ ಕೃಷ್ಣರ ಹಕ್ಕನ್ನು ಪ್ರಶ್ನಿಸದೇ ಉಳಿದದ್ದು ಏನು ತೋರಿಸುತ್ತದೆ. ವರ್ಗ ಹಿತಗಳ ಸಖ್ಯತೆ ಮತ್ತು ರಾಜಕೀಯ ದಿವಾಳಿತನಕ್ಕೆ ಇನ್ನೊಂದು ನಿದರ್ಶನದ ಅಗತ್ಯವಿರಲಾರದು!

ಕೆ.ಆರ್. ಪುರ ಚುನಾವಣೆಯ ಓಟು-ನೋಟಗಳ ಭರಾಟೆಯಲ್ಲಿ ಐಕ್ಯರಂಗ ಜನ ಪ್ರಿಯ

ಕೃಷ್ಣರಾಜಪುರದ ನಗರಸಭಾ ಚುನಾವಣೆಯೀಗ ಕೆ.ಆರ್. ಪುರವೆಂದರೆ ಗೊತ್ತಲ್ಲ. ಅಲ್ಲಿ ಐ.ಟಿ.ಐ. ಫ್ಯಾಕ್ಟರಿ ಇದೆ. ಹೆಚ್.ಎ.ಎಲ್. ಕಾರ್ಖಾನೆ ರೈಲ್ವೆ, ಮೈಕೋ ಪೋಲೀಸ್ ಎಂಜಿನ್ ವರ್ಕ್ಸ್‌ಶಾಪ್, ಇತ್ಯಾದಿ ಹಾಗೆಯೇ ಏಶಿಯಾದಲ್ಲೇ ವಿಶೇಷ ತೂಗು ಸೇತುವೆ 'ಎಂಬ ಖ್ಯಾತಿಯ ಪ್ರದೇಶ... ನಿಮ್ಮ ವಿವರಣೆ, ಸ್ಮರಣೆ ಸರಿ, ಆದರೆ ಈಗೀಗ ಕೆ.ಆರ್.ಪುರ ಇನ್ನೊಂದಕ್ಕೆ ಖ್ಯಾತಿಯೆದ್ದಿದೆ. ಅದೇನದು? ಲೋಕಾಯುಕ್ತರ ಧಾಳಿಯಲ್ಲಿ ನಗರಸಭೆಯೊಂದರಲ್ಲೇ ಸಿಕ್ಕ ಪುರಾವೆಗಳಂತೆ ನೂರಾರು ಕೋಟಿ ರೂಪಾಯಿಗಳನ್ನು ಆಳುವ ಕಾಂಗ್ರೆಸ್ ಪಕ್ಷದವರೂ ಅಧಿಕಾರಿಗಳೂ ಉಸ್ತುವಾರಿಸಚಿವರೂ ಮುಖ್ಯಮಂತ್ರಿಗಳೂ ಸೇರಿ ನುಂಗಿ ನೀರು ಕುಡಿದ ಹಾಗೆ ಭಾರಿ ಹಗರಣ ಬಯಲಾದದ್ದು ಇಲ್ಲೆ. ಮಾತ್ರವಲ್ಲ ಸಸ್ಪೆಂಡ್ ಆದ ಅಧಿಕಾರಿಗಳನ್ನು ವಿಚಾರಣೆಗೆ ಮೊದಲೇ ಬಡ್ತಿ ನೀಡಿ ಪುನರ್ ಸೇವೆಗೆ ಕರೆದು ಲೋಕಾಯುಕ್ತರ ಮುಖಕ್ಕೆ ಮಸಿಬಳಿದಿದ್ದು ಇಲ್ಲೇ. ಇಂತಹ ಸಂದರ್ಭದಲ್ಲಿ ಈ ಸಂಗತಿಗಳನ್ನು ಬಯಲಿಗೆಳೆದು, ಆಗಬೇಕಾದ ಆದ್ಯತೆ ಕೆಲಸಗಳನ್ನು ಹೇಳುವ, ಜನರ ಪ್ರತಿನಿಧಿಯು ಯಾರು ಆರಿಸಿಬರಬೇಕೆಂದು ವಿವರಿಸುವ ವಿಶೇಷ ಸಂಚಿಕೆಯೊಂದನ್ನು ದುಡಿವ ಜನರ ಪ್ರಾಣ ಮಿತ್ರ ಐಕ್ಯರಂಗ ಹೊರಗೆ ತಂದಿದೆ. ಪತ್ರಿಕೆಯ ವಿಶೇಷ ಪುರವಣಿ ಬೇಕೆಂಬುದು ಅಲ್ಲಿನ ಜನರ ಒತ್ತಾಸೆ. ಅಂದಮೇಲೆ ಅಂದವಾದ ನಾಲ್ಕು ಪುಟಗಳ ಹರಿತ ಬರಹಗಳು, ಸತ್ಯ ದಿಗ್ದರ್ಶನದ ಸಂಚಿಕೆ ಜನರ ನಡುವೆ. ಈಗ ಐಕ್ಯರಂಗ ಅಲ್ಲಿ 'ಜನ' ಪ್ರಿಯ.

ಚಲೇಜಾವ್, ಚಲೇ ಆವ್..... ಕಾಂಗ್ರೆಸ್ ವೈಖರಿ

ಆಗಸ್ಟ್ -9. 1942, ತೊಲಗು ತೊಲಗಾಚೆ ಬಿಳಿ ತೊಗಲ ಸುಲಿಗೆಗಾರ ನಾವಲ್ಲ ತೊತ್ತು ಎಂದು ಘರ್ಜಿಸಿ ಬ್ರಿಟಿಶ್ ವಸಾಹತು ಶಾಹಿಗಳನ್ನು ದೇಶ ಬಿಟ್ಟೋಡಿಸಲು ಸಮರ ಸಾರಿ ಒಂದು ನಿರ್ಣಾಯಕ ಕರೆ ನೀಡಿದ ದಿನ. ಆಗ.. ಕಾಂಗ್ರೆಸ್ ಹೇಳಿದ್ದು ಚಲೇಜಾವ್ ! ಈಗ ಕಾಂಗ್ರೆಸ್ ಹೇಳುತ್ತಿದೆ 'ಚಲ್ ಆವ್'. ಇಂದು ಕಾಂಗ್ರೆಸ್ ಬೆಂಗಳೂರಿನಲ್ಲಿ ಕ್ವಿಟ್ ಇಂಡಿಯಾ 'ಚಳುವಳಿಯ ಸ್ಮರಣೆಯಲ್ಲಿ ಕ್ರಾಂತಿಜೋತಿಯಾತ್ರೆ' ನಡೆಸಿತು. ಎಲ್ಲೆಲ್ಲೂ ಬಣ್ಣ ಬಣ್ಣದ ಬ್ಯಾನರ್‌ಗಳು, ಆಕರ್ಷಕ ಕಮಾನುಗಳು, ಕಾಂಗ್ರೆಸ್‌ನ ಪ್ರತಿ ಅಧಿವೇಶನದಲ್ಲಿಯೂ ಆಯ್ಕೆಯಾದ ಅಧ್ಯಕ್ಷರ ಕಟೌಟ್‌ಗಳು! (ಸೋನಿಯಾ ಗಾಂದಿಯವರೂ ಸಹ ಆಗೀನ ಅಧ್ಯಕ್ಷರ ಜೊತೆ ಸ್ವಾತಂತ್ರ್ಯ ಸಂಗ್ರಾಮದ ನಂಟು ಬೆಳೆಸಿಕೊಳ್ಳಲು!) ಇದ್ದೂರಿನಿಂದ ಪರವೂರನಿಂದ ಸಹಸ್ರ, ಸಹಸ್ರ ಜನಗಳ ಅಣಿನೆರೆಕೆ, ಮೆರವಣಿಗೆ ಮತ್ತು ಕಾಂಗ್ರೆಸ್ ಅಧ್ಯಕ್ಷ ಜನಾರ್ಧನ ಪೂಜಾರಿಯವರ ಅಮೋಘ, ಆಕ್ರೋಶಭರಿತ ಭಾಷಣ, ಜೊತೆಗೆ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಮುಂ.... ಕಾಂಗ್ರೆಸ್ ಇತಿಹಾಸ ಪರಂಪರೆ ಪರಾಕುಗಳು ಪೂಜಾರಿ ಇದ್ದಮೇಲೆ ಇಷ್ಟಾದರೂ ಇರಲಾರದೇ? ಆದರೆ ಇಂದಿನ ಕರ್ತವ್ಯ? ಅದು ಮರೆತದ್ದಲ್ಲ, ಮರೆಸುತ್ತಿರುವುದು! ಯಾವ ಕಾಂಗ್ರೆಸ್ ಈಸ್ಟ್ ಇಂಡಿಯಾ ಕಂಪನಿ ತೊಲಗಿಸಲು, ಸ್ವಾತಂತ್ರ್ಯ ಗಳಿಸಲು ಹೋರಾಡಿದೆಯೆಂದು ಹೇಳುತ್ತದೆಯೋ, ಬ್ರಿಟಿಶ್ ಸಾಮ್ರಾಜ್ಯಶಾಹಿಗಳನ್ನು 'ಚಲೇಜಾವ್' ಎಂದು ಹೇಳಿತೋ... ಅದೇ ಕಾಂಗ್ರೆಸ್ ರಾಜೀವ್‌ಗಾಂಧಿ, ನರಸಿಂಹರಾವ್ ಆದಿಯಾಗಿ ಎಸ್.ಎಂ. ಕೃಷ್ಣರಂತಹ ಮುಖ್ಯಮಂತ್ರಿಗಳೂ ಸೇರಿ... ದೇಶದ ಸ್ವಾತಂತ್ರ್ಯ, ಸಾರ್ವಭೌಮತ್ವ, ಸ್ವಾವಲಂಬನೆಯನ್ನು ವಿನಾಶಗೊಳಿಸುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳಿಗೆ, ವಿಶ್ವಬ್ಯಾಂಕ್, ಐ.ಎಂ.ಎಫ್.ಗಳಿಗೆ ಕೆಂಪು ಹಾಸಿಗೆ ಹಾಸಿ, ಕೈಮುಗಿದು ಕರೆದು ಕೊಂಡು ಕೇಳುತ್ತಿರುವ ಆದೇ ಕಾಂಗ್ರೆಸ್, ಇಂದು ಅಮೇರಿಕಾ, ಬ್ರಿಟನ್‌ಗಳನ್ನು 'ಚಲೇ ಆವ್' ಎಂದು ಹೇಳುತ್ತಿರುವುದು ಇದೇ ಕಾಂಗ್ರೆಸ್ ಅಲ್ಲವೇ? ಈ ದಿನಾಚರಣೆಗೆ ಏನಾದರೂ ಅರ್ಥವಿದೆಯೇ? ಈ ಪ್ರಚಾರದ ಸ್ಟಂಟ್‌ಗಳಿಂದ ಭಾರತ ಉಳಿದೀತೆ? ನಿಜ ಕಾಂಗ್ರೆಸ್ಸಿಗರಾದರೂ ಯೋಚಿಸಿಯಾರೇ?

ಇದರೊಂದಿಗೆ ಇನ್ನೊಂದು ತಮಾಷೆ! ಎಲ್ಲೂ, ಎಂದೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಒಂದು ಹೆಜ್ಜೆಯೂ ಹಾಕದ ಪಕ್ಕಾ ಬ್ರಿಟೀಶರ ನೆಚ್ಚಿನ ಬಂಟರಾಗಿದ್ದ, ಈಗಲೂ ಸಾಮ್ರಾಜ್ಯಶಾಹಿಗಳ ಸೇವಕರಾಗಿರುವ ಸಂಘ ಪರಿವಾರ ಬಿಜೆಪಿ ತನಗೂ ಸ್ವಾತಂತ್ರ್ಯ ಹೋರಾಟದ ಟಚ್, ಮುಖವಾಡ ಇರಲಿ ಎಂದು ದೇಶಪ್ರೇಮದ ಬಣ್ಣ ಬಳಿದುಕೊಂಡು ಕೋಲು ಹಿಡಿದು ಕುಂಟುತ್ತಾ ಕಾಂಗ್ರೆಸ್‌ನೊಂದಿಗೆ ಸ್ಪರ್ದೆಯಲ್ಲಿ ಹೆಜ್ಜೆಯಿಡುತ್ತಿರುವುದು. ಈ ನಾಟಕಗಳನ್ನು ಅರಿಯದಷ್ಟು ಮುಗ್ಧರಲ್ಲ ಭಾರತದ ಪ್ರಜೆಗಳು.

ಭದ್ರಾವತಿ ಉಕ್ಕು ಕಾರ್ಖಾನೆ ಸ್ಫೋಟ. ಉದಾರೀಕರಣ ಸಾವಾಗಿ ಬಂತು!

ಕರ್ನಾಟಕದ, ಮಾತ್ರವಲ್ಲ ದೇಶದಲ್ಲೇ ಅತ್ಯಂತ ಪ್ರತಿಷ್ಠಿ[illegible] ಕೈಗಾರಿಕೆಯಾದ ಭದ್ರಾವತಿಯ ಎಂ. ವಿಶ್ವೇಶ್ವರಯ್ಯ ಉಕ[illegible] ಕಾರ್ಖಾನೆಯಲ್ಲಿ ಕಳೆದವಾರ ಸಂಭವಿಸಿದ ಸ್ಫೋಟವೊಂದರ[illegible] ಸ್ಥಳದಲ್ಲೇ ಏಳು ಕಾರ್ಮಿಕರು ನಂತರ ಆಸ್ಪತ್ರೆಯಲ್ಲಿ ಇ[illegible] ಒಟ್ಟು ಒಂಬತ್ತು ಜನ ಸಾವಿಗೀಡಾಗಿದ್ದಾರೆ.

ಬಿಸಿ ಲೋಹ ಪರಿವರ್ತಕ ಸ್ಥಾವರ ಸ್ಫೋಟಗೊಂಡು ದುರಂತಕ್ಕೆ ತಿರುಗಿತು. ಈ ಸ್ಥಾವರ ಸುಸ್ಥಿತಿಯಲ್ಲಿ ಇಲ್ಲವೆಂದು ಅದನ್ನು ಕೂಡಲೇ ಬದಲಾಯಿಸಬೇಕೆಂದು ಕಾರ್ಮಿಕರು ಆಡ[illegible] ವರ್ಗಕ್ಕೆ ತಿಳಿಸಿದ್ದರೂ ಕೂಡ. ಆದರೆ ಅತ್ಯಧಿಕ ಉತ್ಪಾದನೆ ಪ[illegible] ಮೇಲೆಯೇ ಬದಲಾಯಿಸೋಣ ಎಂದು ತಾಕೀತು ಮ[illegible] ಅತ್ಯಂತ ದಿವ್ಯ ನಿರ್ಲಕ್ಷ ವಹಿಸಿದ್ದು ನಿಷ್ಕಾಳಜಿ ಮತ್ತು [illegible] ಉಳಿಸುವ ದುರಾಲೋಚನೆ ಒಂಬತ್ತು ಜನರ[illegible] ಬಲಿತೆಗೆದುಕೊಂಡಿತು. ಇದಕ್ಕೆ ಆಡಳಿತ ಮಂಡಳಿಯೇ ಹ[illegible] ಹೊರಬೇಕು ಮಾತ್ರವಲ್ಲ, ಇವರ ಮೇಲೆ ಕ್ರಿಮಿನಲ್ ಮೊಕ[illegible] ದಾಖಲಾಗಬೇಕು.

ಉದಾರೀಕರಣದ ಹೊಡೆತದಲ್ಲಿ ಈ ಹೆಮ್[illegible] ಕೈಗಾರಿಕೆಯನ್ನು ಖಾಸಗಿಯವರಿಗೆ ಬಲಿಗೊಡುವ ಹಲವ[illegible] ಯತ್ನಗಳನ್ನು ಕೇಂದ್ರ ಸರ್ಕಾರ ನಡೆಸುತ್ತಲೇ ಬಂದಿದೆ. [illegible] ಸಿಐಟಿಯು ನಾಯಕರ ನಾಯಕತ್ವದ ಸಂಘ ಅವ[illegible] ಮಾಡಿಕೊಡಲಿಲ್ಲ. ತಂತ್ರಜ್ಞಾನ ಮೇಲ್ದರ್ಜೆಗೆ ಹಾಗೂ ಇ[illegible] ಬಂಡವಾಳ ಹೂಡಿ ಆಧುನೀಕರಿಸಿದರೆ ಅತ್ಯುತ್ತಮ ಉತ[illegible] ಪಡೆಯಲು ಸಾಧ್ಯ ಎಂದು ಸಂಘ ಒತ್ತಾಯಿಸುತ್ತಾ ಬಂ[illegible] ಕೇಂದ್ರ ಸರ್ಕಾರ ಮತ್ತು ಆಡಳಿತ ಮಂಡಳಿ ಕಿವಿಗೊ[illegible] ಸಿದ್ದರಿಲ್ಲ. ಮೇಲಾಗಿ ಕಾರ್ಮಿಕರನ್ನೇ ಕಿತ್ತುಹಾಕುವ ಸ್ವ[illegible] ನಿವೃತ್ತಿಯೋಜನೆಯ ಹೆಸರಲ್ಲಿ ಕೆಲಸಗಾರರನ್ನು ಹೊರದೂ[illegible] ನೀತಿ ಅನುಸರಿಸುತ್ತಿದೆ. ಹೀಗಾಗಿ ಎಲ್ಲಾ ಘಟಕಗಳಲ್ಲಿ[illegible] ಕಟ್ಟೆಚ್ಚರದ ನಿಗಾ ವಹಿಸಲು ಆಗದ ಸ್ಥಿತಿ ಬಂದಿದೆ. ಮ[illegible] ಸಂಪನ್ಮೂಲದ ಕೊರತೆಯೂ ಕೂಡ ಇದೆ. ಉದಾರೀಕ[illegible] ಖಾಸಗೀಕರಣದ ಕುರುಡು ಕಾಂಚಾಣದ ಕುಣಿತದಲ್ಲಿ ಶ್ರಮ[illegible] ಕಾರ್ಮಿಕರ ಪ್ರಾಣಕ್ಕೆ ಯಾವ ಲೆಕ್ಕ. ಇನ್ನಾದರೂ ಈ ಕಾಮ[illegible] ಕೈಗಾರಿಕೆ ಕಾರ್ಮಿಕರನ್ನು ಉಳಿಸಲು ಸರ್ಕಾರ ಮುಂದಾ[illegible] ಹಣಹೂಡೀತೆ? ಬಲಿಯಾದ ಕುಟುಂಬಕ್ಕೆ ಪರಿಹಾ[illegible] ನೀಡಬೇಕು! ವಿವರ ತನಿಖೆ ನಡೆದು ತಪ್ಪಿತಸ್ಥರ ಮೇಲೆ ಕ್ರಿ[illegible] ಮೊಕದ್ದಮೆ ಹೂಡಬೇಕು.

ಕೃಷ್ಣ ಗ್ರಾಮೀಣ ಬ್ಯಾಂಕಿನ ಅಧಿಕಾರಿಗಳು ಮತ್ತು ನೌಕರರು ಧರಣಿ

ಅಖಿಲ ಭಾರತ ಗ್ರಾಮೀಣ ಬ್ಯಾಂಕ್ ನೌಕರರ ಸಂಘಟನೆಯ ಕರೆಯ ಮೇರೆಗೆ ಕೃಷ್ಣ ಗ್ರಾಮೀಣ ಬ್ಯಾಂಕಿನ ಅಧಿಕಾರಿಗಳು ಮತ್ತು ನೌಕರರು ಆಗಸ್ಟ್ 4 ರಿಂದ 6 ರವರೆಗೆ ಗುಲ್ಬರ್ಗಾದಲ್ಲಿರುವ ಬ್ಯಾಂಕಿನ ಪ್ರಧಾನ ಕಚೇರಿ ಎದುರು ಧರಣಿ ನಡೆಸಿದರು.


ಭಾರತದ ರಾಷ್ಟ್ರೀಯ ಗ್ರಾಮೀಣ ಬ್ಯಾಂಕಿನ ಸ್ಥಾಪನೆ (IRBI), ನಿವೃತ್ತಿಯ ನಂತರದ ಸವಲತ್ತುಗಳು ಸೇರಿದಂತೆ, ಎಲ್ಲಾ ಪ್ರದೇಶಗಳಿಗೂ ಸಮಾನ ವೇತನ, ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಕೃಷ್ಣಾ ಗ್ರಾಮೀಣ ಬ್ಯಾಂಕ್ ನೌಕರರು ಗುಲ್ಬರ್ಗಾದಲ್ಲಿ ತಮ್ಮ ಪ್ರಧಾನ ಕಚೇರಿಯ ಮುಂದೆ ಧರಣಿ ಕುಳಿತು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.



ಈ ಧರಣಿ ಸತ್ಯಾಗ್ರಹದ ನೇತೃತ್ವವನ್ನು ಅಖಿಲ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಒಕ್ಕೂಟದ ಅಧ್ಯಕ್ಷರಾದ ಎಸ್.ವಿ.ಮಮದಾಪುರ, ಕೃಷ್ಣಾ ಗ್ರಾಮೀಣ ಬ್ಯಾಂಕ್‌ನ ಅಧಿಕಾರಿಗಳ ಸಂಘದ ಅಧ್ಯಕ್ಷರಾದ ವೈ.ಡಿ.ಮುದುಗಾನೂರು, ಪ್ರಧಾನ ಕಾರ್ಯದರ್ಶಿ ಬಿ.ವಿ.ರಾಘವೇಂದ್ರ, ನೌಕರರ ಸಂಘಟನೆಯ ಅಧ್ಯಕ್ಷರಾದ ಅರವಿಂದ ಬೆಕಟನೂರ, ಪ್ರಧಾನ ಕಾರ್ಯದರ್ಶಿ ಪ್ರಭು ಕಲಾಲ್, ವಿ.ಬಿ.ಚೌಗಿ ಮೊದಲಾದವರು ಭಾಗವಹಿಸಿದ್ದರು.

ಪ್ರಚಾರಾಂದೋಲನದತ್ತ....

ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರದ ಆಡಳಿತದಲ್ಲಿ ಕೃಷಿ - ಕೈಗಾರಿಕಾ ವಲಯಗಳು ಸತತವಾದ ಕುಸಿತವನ್ನು ಕಂಡಿವೆ. ನಿರುದ್ಯೋಗ ಹೆಚ್ಚಿದೆ. ಆದರೆ ಸದಾ ಮುನ್ನಡೆಯ ಮಾತುಗಳನ್ನು ಆಡುತ್ತಲೇ ಇದೆ. ಆರ್ಥಿಕ ರಂಗದಲ್ಲಿನ ಅಂಶಗಳೇ ನಿಜವನ್ನು ಬಯಲಿಗಿಡುತ್ತವೆ



ಎನ್‌ಡಿಎ ಸರ್ಕಾರ ಆರ್ಥಿಕ ಪ್ರಗತಿ-ವಿಕೃತಿ

ಡಾ. ಎಂ.ಕೆ.ಪಂಧೆ

ಎನ್‌ಡಿಎ ಸರ್ಕಾರ ಮತ್ತು ಹೆಚ್ಚಿನ ರಾಜ್ಯ ಸರ್ಕಾರಗಳು ಕಳೆದ 12 ವರ್ಷಗಳಿಂದ ಅನುಸರಿಸುತ್ತಿರುವ ಆರ್ಥಿಕ ನೀತಿಗಳು ದೇಶಾದ್ಯಂತ ಶ್ರಮಜೀವಿಗಳ ಬದುಕಿನ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮಗಳನ್ನು ಬೀರಿವೆ.

ಕಾರ್ಮಿಕವರ್ಗ ಸಂಘಟಿಸಿದ ಏಳು ದೇಶವ್ಯಾಪಿ ಐಕ್ಯ ಮುಷ್ಕರಗಳು ಜಾಗತೀಕರಣದ ನೀತಿಗಳ ವಿರುದ್ಧ ಈ ವರ್ಗದಲ್ಲಿ ಹೆಚ್ಚುತ್ತಿರುವ ಪ್ರತಿರೋಧವನ್ನು ಬಿಂಬಿಸಿವೆ. ಸರ್ಕಾರದ ಈ ಧೋರಣೆಗಳು ದೇಶ ಹೆಚ್ಚೆಚ್ಚಾಗಿ ಬಹುರಾಷ್ಟ್ರೀಯ ಕಂಪನಿಗಳನ್ನು ಅವಲಂಬಿಸುವಂತೆ ಮಾಡಿವೆ. ದೇಶದ ಆರ್ಥಿಕ ಬೆಳವಣಿಗೆ ನಿಧಾನವಾಗುತ್ತಿದೆ ಎಂಬುದನ್ನು ಭಾರತದ ಜನತೆ ತಮ್ಮ ಸ್ವಂತ ಅನುಭವದಿಂದಲೇ ಕಾಣುತ್ತಿದ್ದಾರೆ. ಜನಸಾಮಾನ್ಯರು ದಿವಾಳಿಯಾಗುತ್ತಿದ್ದಾರೆ, ಭಾರತದ ಮಣ್ಣಿಂದ ಬಡತನದ ನಿರ್ಮೂಲನೆ ದೂರದ ಕನಸಾಗುತ್ತಿದೆ.

ಕೈಗಾರಿಕಾ ಬೆಳವಣಿಗೆಯಲ್ಲಿ ನಿಧಾನಗತಿ

ಬಂಡವಾಳ ರಚನೆಯ ದರ ಕಳೆದೆರೆಡು ವರ್ಷಗಳಲ್ಲಿ ಸತತವಾಗಿ ನಿಧಾನಗೊಂಡಿದೆ. 'ಇಕನಾಮಿಕ್ಸ್ ಟೈಮ್ಸ್' ದೈನಿಕ ಫೆಬ್ರವರಿ 2, 2003 ರ ತನ್ನ ಸಂಚಿಕೆಯಲ್ಲಿ ಅಂಕಿ-ಅಂಶಗಳನ್ನು ಕೊಡುತ್ತಾ ಹೇಳಿದೆ. 1999-00 ಶೇ 27.7 ಇದ್ದದ್ದು ಇದು 2001-02 ರಲ್ಲಿ ಶೇ 25.6 ಕ್ಕೆ ಇಳಿದಿದೆ. ಕೆಲವು ವಲಯಗಳಲ್ಲಿ ಈ ನಿಧಾನಗತಿ ಇನ್ನೂ ತೀವ್ರವಾಗಿದೆ. 2001-02 ರಲ್ಲಿ ಉತ್ಪಾದನಾ ವಲಯದಲ್ಲಿ ಒಟ್ಟು ಬಂಡವಾಳ ನಿರ್ಮಾಣ ಹಿಂದಿನ ವರ್ಷಕ್ಕಿಂತ ಶೇ. 7.4 ರಷ್ಟು ಇಳಿಯಿತು, ಸಾರಿಗೆಯಲ್ಲಿ ಶೇ 24, ಸಂಪರ್ಕ ಕ್ಷೇತ್ರದಲ್ಲಿ ಶೇ 18.3 ರಷ್ಟು ಇಳಿಯಿತು. ಕೈಗಾರಿಕೆಯಲ್ಲಿ ಹೂಡಿಕೆಯಲ್ಲಿನ ಸ್ಥಗಿತತೆ ತೊಂಭತ್ತರ ದಶಕದ ಮಧ್ಯ ಭಾಗದಿಂದ ಕಾಣುತ್ತಿರುವ ಕಾರಣಗಳಲ್ಲೊಂದು ಎಂದು ಸರ್ಕಾರದ 2002-03 ರ ಆರ್ಥಿಕ ಪರಾಮರ್ಶೆ ಒಪ್ಪಿಕೊಂಡಿದೆ. ಎನ್‌ಸಿಎಇಆರ್ (ರಾಷ್ಟ್ರೀಯ ಅನ್ವಯಿಕ ಆರ್ಥಿಕ ಸಂಶೋಧನಾ ಮಂಡಳಿ) "ಹೆಚ್ಚಿನ ಆರ್ಥಿಕ ಸೂಚಕಗಳಲ್ಲಿ ಬೆಳವಣಿಗೆ ಇನ್ನೂ ಕಾಣುತ್ತಿಲ್ಲ ಮತ್ತು ಇನ್ನೂ ಗಮನಾರ್ಹ ಬೆಳವಣಿಗೆ ಕಾಣದ ಒಂದು ಅಂಶವೆಂದರೆ ಬಂಡವಾಳ ಹೂಡಿಕೆ, ಬಡ್ಡಿ ದರಗಳ ಇಳಿಕೆ, ಸ್ಥಿರ ವಿನಿಮಯ ದರ, ಸಾಕಷ್ಟು ಕಡಿಮೆ ಪ್ರಮಾಣದ ಹಣದುಬ್ಬರ, ಉದಾರೀಕೃತ ವಿದೇಶಿ ಹೂಡಿಕೆ ವ್ಯವಸ್ಥೆ, ಶಾಂತ ಆಂತರಿಕ ವಾತಾವರಣ ಅಥವಾ ಕಂಪನಿಗಳ ಲಾಭಗಳು ಹೆಚ್ಚಿದ್ದರೂ ಇವೆಲ್ಲ ಕೂಡಾ ಕೈಗಾರಿಕಾ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಲು ಹೊಸ ಹೂಡಿಕೆಗಳಿಗೆ ಪ್ರೋತ್ಸಾಹ ನೀಡುವಲ್ಲಿ ಸೋತಿವೆ" ಎಂದು ಹೇಳಿರುವುದಾಗಿ ಜನವರಿ 1, 2003 ರ ಬಿಸಿನೆಸ್ ಸ್ಟಾಂಡರ್ಡ್ ಪತ್ರಿಕೆ ವರದಿ ಮಾಡಿದೆ.

ಕೈಗಾರಿಕೆಯಲ್ಲಿ ಉತ್ಪಾದನಾ ಬೆಳವಣಿಗೆ ದರದಲ್ಲಿ ಇಳಿಕೆಯಷ್ಟೇ ಅಲ್ಲ, ಕೃಷಿ ವಲಯವೂ ಇಳಿಕೆ ಕಾಣುತ್ತಿದೆ. 2002-03 ರ ವರೆಗಿನ ಆರು ವರ್ಷಗಳಲ್ಲಿ ಮೂರು ವರ್ಷಗಳಲ್ಲಿ ಕೃಷಿ ಬೆಳವಣಿಗೆ ಬದಲು ಅವನತಿ ಕಾಣುಬಂದಿತ್ತು. 1999-00 ರಲ್ಲಿ ಸ್ಥಗಿತತೆ ಇತ್ತು. 2002-03 ರಲ್ಲಿ ಶೇ 3.2 ಇಳಿಕೆ ಕಂಡಿತ್ತು. ಅದಕ್ಕೆ ಬರದ ಸನ್ನಿವೇಶ ಕಾರಣ ಎಂದು ದೂರನ್ನೆಲ್ಲಾ ಅದರ ಮೇಲೆ ಹಾಕಲಾಗಿದೆ. ಅಷ್ಟೇ ಅಲ್ಲ, 2002-03 ರಲ್ಲಿ ಆಹಾರ ಧಾನ್ಯಗಳ ಉತ್ಪಾದನೆ 1996 ರ ಮಟ್ಟಕ್ಕಿಂತಲೂ 1.5 ಕೋಟಿ ಟನ್‌ಗಳಷ್ಟು ಕಡಿಮೆಯಾಗಿದೆ. ಎಣ್ಣೆ ಬೀಜಗಳು, ಹತ್ತಿ, ಕಬ್ಬು, ಚಹಾ, ಕಾಫಿಯಂತಹ ಪ್ರಮುಖ ವಾಣಿಜ್ಯ ಬೆಳೆಗಳ ಉತ್ಪಾದನೆಯೂ ಇಳಿದಿದೆ. ಇತರೆಲ್ಲವುಗಳಲ್ಲಿ ಸ್ಥಗಿತತೆಯೇ ಇದೆ

ಕೃಷಿ ವಲಯದಲ್ಲೂ

ಎಲ್ಲಾ ಉದಾರೀಕರಣ ಕ್ರಮಗಳು ಹಾಗೂ ಭೂಮಾಲಕರಿಗೆ ಎಲ್ಲಾ ರೀತಿಯ ರಿಯಾಯ್ತಿಗಳ ನಂತರವೂ ಬಹುರಾಷ್ಟ್ರೀಯ ಉತ್ಪನ್ನದಲ್ಲಿ ಕೃಷಿಯಲ್ಲಿ ಒಟ್ಟು ಬಂಡವಾಳ ನಿರ್ಮಾಣದ ಪ್ರಮಾಣ ಸತತವಾಗಿ ಇಳಿಯುತ್ತಿದೆ. 2001-02 ರಲ್ಲಿ ಅದು ಕೇವಲ ಶೇ. 1.3 ಇತ್ತು. ಕೃಷಿ ಉದ್ಯೋಗದಲ್ಲಿ 1983-93 ರ ಅವಧಿಯಲ್ಲಿ ಶೇ 1.57 ದರದ ವಾರ್ಷಿಕ ಬೆಳವಣಿಗೆ ಕಂಡಿದ್ದರೆ 1993-2000 ರ ಅವಧಿಯಲ್ಲಿ ಅದು -0.34 ಕ್ಕೆ ಇಳಿದಿದೆ. ಈ ವರ್ಷ ಅದು ಮತ್ತಷ್ಟು ಇಳಿದಿದೆ. ಆಹಾರ ಧಾನ್ಯಗಳ ತಲಾ ಪೂರೈಕೆಯಲ್ಲಿ ಈ ಇಡೀ ಉದಾರೀಕರಣದ ದಶಕದಲ್ಲಿ ವರ್ಷದಿಂದ ವರ್ಷಕ್ಕೆ ಇಳಿಯುತ್ತಾ ಬಂದಿದೆ.

ನಿರುದ್ಯೋಗದಲ್ಲೂ ತೀವ್ರ ಏರಿಕೆ

ನಿರುದ್ಯೋಗ ಪರಿಸ್ಥಿತಿಯೂ ಉಲ್ಬಣಗೊಳ್ಳುತ್ತಿದೆ, ಕ್ಲಿಷ್ಟ ಸ್ವರೂಪಗಳನ್ನು ಪಡೆಯುತ್ತಿದೆ. ಈ ಗಂಭೀರ ಬೆಳವಣಿಗೆಗೆ ಹಲವು ಕಾರಣಗಳಿವೆ. ಇವುಗಳಲ್ಲಿ ಎರಡು ಮುಖ್ಯ ಅಂಶಗಳೆಂದರೆ ವಿಶ್ವಾದ್ಯಂತ ಬಂಡವಾಳಶಾಹಿ ಅಧಿಕಾರದಲ್ಲಿ ಮುಂದುವರೆಯುತ್ತಿರುವ ಬಿಕ್ಕಟ್ಟು ಮತ್ತು ಸಾಮ್ರಾಜ್ಯಶಾಹಿ ಜಾಗತೀಕರಣದ ವ್ಯವಸ್ಥೆಯಲ್ಲಿ ತಥಾಕಥಿತ ಮಾರುಕಟ್ಟೆ ಆರ್ಥಿಕದ ಧಾಳಿ.

ಅಂತರ್ರಾಷ್ಟ್ರೀಯ ಶ್ರಮ ಸಂಘಟನೆ (ILO) ಈ ಬಗ್ಗೆ ಗಂಭೀರ ಆತಂಕ ವ್ಯಕ್ತಪಡಿಸುತ್ತಾ ಹೀಗೆಂದಿದೆ - "ಆರ್ಥಿಕ ನಿಧಾನಗತಿ ವಿಶ್ವ ಉದ್ಯೋಗ ಸನ್ನಿವೇಶವನ್ನು ಹದಗೆಡಿಸುತ್ತಿದೆ. ಆರ್ಥಿಕ ಪುನಶ್ಚೇತನದ ನಿರೀಕ್ಷೆಯಿಲ್ಲದಿರುವುದರಿಂದ 2003 ರಲ್ಲೂ ಇಂತಹ ಪ್ರವೃತ್ತಿಯ ಬದಲಾವಣೆ ಕಾಣಲಿಕ್ಕಿಲ್ಲ" ILO ಅಂದಾಜುಗಳ ಪ್ರಕಾರ 2002 ರ ಅಂತ್ಯದಲ್ಲಿ ವಿಶ್ವದ ನಿರುದ್ಯೋಗಿಗಳ ಸಂಖ್ಯೆ 18 ಕೋಟಿ ತಲುಪಿದೆ. 2002 ರ ಅಂತ್ಯದ ವೇಳೆಗೆ 55 ಕೋಟಿ ಕಾರ್ಮಿಕರು ದಿನವೊಂದಕ್ಕೆ ಒಂದು ಡಾಲರಿಗಿಂತಲೂ ಕಡಿಮೆ ಆದಾಯದಲ್ಲಿ ಬದುಕು ನಡೆಸಬೇಕಾಗಿ ಬಂದಿದೆ ಎಂದೂ ಅದು ಹೇಳಿದೆ. ಇದು ನಿರುದ್ಯೋಗ ಮತ್ತು ಬಡತನದ ನಡುವಿನ ಸಂಬಂಧವನ್ನು ತೋರಿಸುತ್ತದೆ.

ನಮ್ಮ ದೇಶದಲ್ಲಿ ಸಾರ್ವಜನಿಕ ವಲಯದಲ್ಲಿ ಆಗಿರುವ ಅಗಾಧ ಉದ್ಯೋಗ ನಷ್ಟ ನಿರುದ್ಯೋಗ ಸಮಸ್ಯೆಯನ್ನು ದೊಡ್ಡ ಪ್ರಮಾಣದಲ್ಲಿ ಉಲ್ಬಣಗೊಳ್ಳುತ್ತಿದೆ. ಸಂಘಟಿತ ವಲಯದಲ್ಲಿ ಶೇ 69 ಉದ್ಯೋಗವಕಾಶ ಸಾರ್ವಜನಿಕ ವಲಯದಿಂದ ಬರುತ್ತಿತ್ತು. ಸಾರ್ವಜನಿಕ ವಲಯದ ಮೇಲೆ ಸರ್ಕಾರ ನಡೆಸಿದ ತೀವ್ರ ಧಾಳಿಯಿಂದಾಗಿ ಅದೀಗ ತೀವ್ರವಾಗಿ ಇಳಿದಿದೆ. ಮಾರ್ಚ್ 31, 2001 ರ ವೇಳೆಗೆ ಅದು 2.775 ಕೋಟಿಗಿಳಿಯಿತು. ಮತ್ತು ಮಾರ್ಚ್ 31, 2002 ರ ವೇಳೆಗೆ 2.733 ಕೋಟಿಗಳಿಯಿತು. ಅಂದರೆ ಒಂದೇ ವರ್ಷದಲ್ಲಿ 4 ಲಕ್ಷ 20 ಸಾವಿರ ಸಾರ್ವಜನಿಕ ವಲಯದ ಕಾರ್ಮಿಕರು ಹೊರಗೆಸೆಯಲ್ಪಟ್ಟರು. ಇದಕ್ಕಿಂತಲೂ ಆತಂಕಕಾರಿ ಅಂಕೆ-ಸಂಖೆಗಳು ಡಾ. ಎಸ್.ಪಿ. ಗುಪ್ತಾರ ನೇತೃತ್ವದ ಹತ್ತನೇ ಯೋಜನೆಯ ಅವಧಿಯಲ್ಲಿ ಉದ್ಯೋಗ ಕುರಿತ ವಿಶೇಷ ಗುಂಪಿನ ವರದಿಯಿಂದ ಕಂಡುಬಂದಿದೆ. ಕೇವಲ ಹತ್ತನೇ ಯೋಜನೆಯ ಅವಧಿಯಲ್ಲೇ ಸಾರ್ವಜನಿಕ ವಲಯ ಮತ್ತು ಸರಕಾರಿ ವಲಯದಿಂದ ಇನ್ನೂ 40 ಲಕ್ಷ ಉದ್ಯೋಗಗಳ ಕಡಿತವಾಗಲಿದೆ ಎಂದು ಆ ವರದಿ ಅಂದಾಜು ಮಾಡಿದೆ. ಆರ್ಥಿಕದಲ್ಲಿ ಇನ್ನಷ್ಟು ವಿಕೃತಿಗಳನ್ನು ನಾವು ನಿರೀಕ್ಷಿಸಬಹುದು. ಏಕೆಂದರೆ ಸೆಪ್ಟೆಂಬರ್ 10 ರಿಂದ 14 ರ ವರೆಗೆ ಮೆಕ್ಸಿಕೊದ ಕಾಂಕುನ್‌ನಲ್ಲಿ ಡಬ್ಲ್ಯುಟಿಓ ದ ಮಂತ್ರಿಮಟ್ಟದ ಸಭೆ ನಡೆಯಲಿದೆ. ಈ ಸಭೆ ಕೃಷಿಯಲ್ಲಿ ವ್ಯಾಪಾರದ ಇನ್ನಷ್ಟು ಉದಾರೀಕರಣ, ಹೂಡಿಕೆ ವ್ಯವಸ್ಥೆ ಮತ್ತಿತರ ಹಲವಾರು ವಿಷಯಗಳನ್ನು ಚರ್ಚಿಸಲಿದೆ. ಇವೆಲ್ಲಾ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಹಿತಾಸಕ್ತಿಗಳನ್ನು ಕೆಲವೇ ಶ್ರೀಮಂತ ದೇಶಗಳ/ ಹಿತಾಸಕ್ತಿಗಳ ಅಡಿಯಾಳಾಗಿಸುವ ಗುರಿ ಹೊಂದಿರುವ ವಿಷಯಗಳು.

ಈಗಾಗಲೇ ಎನಡಿಎ ಸರ್ಕಾರ ಹಲವು ರಾಜಕೀಯ ಮತ್ತು ಆರ್ಥಿಕ ವಿಷಯಗಳಲ್ಲಿ ಸಾಮ್ರಾಜ್ಯಶಾಹಿ ಶಕ್ತಿಗಳ ಎದುರು ತಲೆಬಾಗುತ್ತಿರುವುದನ್ನು ನೋಡುವಾಗ ಈ ಮಂತ್ರಿಮಟ್ಟದ ಸಭೆಯಲ್ಲಿ ಅದು ತಾನಾಗಿಯೇ ಭಾರತದ ಜನರ ಹಿತಾಸಕ್ತಿಗಳನ್ನು ರಕ್ಷಿಸುತ್ತದೆ ಎಂದು ನಿರೀಕ್ಷಿಸುವಂತಿಲ್ಲ. ಈ ರಾಷ್ಟ್ರ-ವಿರೋಧಿ ಸರ್ಕಾರ ರಾಷ್ಟ್ರೀಯ ಹಿತಾಸಕ್ತಿಗಳನ್ನು ಇನ್ನಷ್ಟು ಬಿಟ್ಟುಕೊಡದಂತೆ ತಡೆಯುವುದು ಜನಗಳ ಒತ್ತಡವಿಲ್ಲದೆ ಸಾಧ್ಯವಿಲ್ಲ. ಈಗಾಗಲೇ ಭಾರತದ ಗೃಹಮಂತ್ರಿಗಳು ಮುಂಬರುವ ಡಬ್ಲ್ಯುಟಿಓ ಸಭೆಯಲ್ಲಿ ಅಮೆರಿಕಾದೊಂದಿಗೆ ಸಹಕರಿಸುವುದಾಗಿ ತನ್ನ ಇತ್ತೀಚಿನ ಅಮೆರಿಕಾ ಭೇಟಿಕಾಲದಲ್ಲಿ ಅಮೆರಿಕನ್ ಅಧ್ಯಕ್ಷರಿಗೆ ಹೇಳಿ ಬಂದಿದ್ದಾರೆ. ಜತೆಗೆ ಅಮೆರಿಕದ ಮಾಹಿತಿ ತಂತ್ರಜ್ಞಾನದ ಉದ್ಯೋಗಗಳನ್ನು ಭಾರತೀಯ ಮಾರುಕಟ್ಟೆಯಿಂದ ಪಡೆಯುವುದನ್ನು ಮುಂದುವರೆಸಬೇಕು ಎಂದು ಮನವಿ ಮಾಡಿದ್ದಾರೆ. ಅಮೆರಿಕನ್ ಕಾರ್ಮಿಕ ಆಂದೋಲನ ಇದನ್ನು ವಿರೋಧಿಸುತ್ತಿದೆ.

ಖಾಸಗೀಕರಣ


ಲಾಭದಾಯಕವಾದ ಸಾರ್ವಜನಿಕ ವಲಯದ ಘಟಕಗಳನ್ನು ನೇರವಾಗಿ ಮಾರಾಟ ಮಾಡಿಬಿಡುವ ಮೂಲಕ ಎನ್‌ಡಿಎ ಸರ್ಕಾರ ಶೇರು ಮಾರಾಟದ ಧೋರಣೆಯನ್ನು ಸಂಪೂರ್ಣವಾಗಿ ಖಾಸಗೀಕರಣದ ಧೋರಣೆಯಾಗಿಸಿಬಿಟ್ಟಿದೆ. 2000-01 ರ ಬಜೆಟ್ ಮಂಡಿಸುವಾಗ ಹಣಕಾಸು ಮಂತ್ರಿಗಳು ಒಂದು ಹೊಸ ಶೇರು ಹಿಂಪಡಿಕೆ ಇಲಾಖೆಯನ್ನು ಸ್ಥಾಪಿಸುವುದಾಗಿ, ನಿರ್ದಿಷ್ಟ ಸಾರ್ವಜನಿಕ ವಲಯದ ಘಟಕಗಳನ್ನು ಮಾರುವುದರ ಮೇಲೆ ಹೆಚ್ಚು ಒತ್ತು ನೀಡುವುದಾಗಿ ತಿಳಿಸಿದರು. ಅಂದಿನಿಂದ 34 ಸಾರ್ವಜನಿಕ ವಲಯದ ಘಟಕಗಳನ್ನು ಈ ರೀತಿ ಮಾರಲಾಗಿದೆ. ಈ ಮೂಲಕ ಸರ್ಕಾರ 11344 ಕೋಟಿ ರೂ.ಗಳಷ್ಟು ಗಳಿಸಿದೆ. ಐಟಿಡಿಸಿ ಮತ್ತು ಹೆಚ್‌ಸಿಐನ ಹೋಟೆಲುಗಳಲ್ಲದೆ, ಎಂ.ಎಫ್.ಐ.ಎಲ್., ಬಾಲ್ಕೊ, ಸಿಎಂಸಿ, ಹೆಚ್‌ಟಿಎಲ್, ಐಬಿಸಿ, ವಿಎಸ್‌ಎನ್‌ಎಲ್, ಪಿಪಿಎಲ್, ಎಸ್‌ಟಿಸಿ, ಎಂಎಂಟಿಸಿ, ಹೆಚ್.ಝಡ್.ಎಲ್., ಮಾರುತಿ ಉದ್ಯೋಗ್ ಮತ್ತು ಐಪಿಸಿಎಲ್‌ಗಳನ್ನು ಈ ರೀತಿ ಖಾಸಗಿಯವರಿಗೆ ವಹಿಸಿಕೊಡಲಾಗಿದೆ.

ಈಗ ಆರ್ಥಿಕದಲ್ಲಿ ಆಯಕಟ್ಟಿನ ಸ್ಥಾನದಲ್ಲಿರುವ ಲಾಭ ಮಾಡುತ್ತಿರುವ ಸಾರ್ವಜನಿಕ ವಲಯದ ಘಟಕಗಳನ್ನು ಮಾರುವ ತರಾತುರಿಯಲ್ಲಿ ಈ ಸರಕಾರವಿದೆ. ಅದು ಮಾರಾಟ ಮಾಡಬಯಸುವ ಇಂತಹ ಘಟಕಗಳೆಂದರೆ ಹೆಚ್‌ಪಿಸಿಎಲ್, ಬಿಪಿಸಿಎಲ್, ಶಿಪ್ಪಿಂಗ್ ಕಾರ್ಪೊರೇಷನ್, ನಾಲ್ಕೊ, ಬಂದರು-ಹಡಗುಕಟ್ಟೆ, ಭಾರತದ ವಿಮಾನ ನಿಲ್ದಾಣ ಪ್ರಾಧಿಕಾರ ಹಾಗೂಸಿಐಎಲ್.

ಸಾರ್ವಜನಿಕ ವಲಯದ ಘಟಕಗಳು 2000-01 ರಲ್ಲಿ ಗಳಿಸಿದ ನಿವ್ವಳ ಲಾಭ 15653 ಕೋಟಿ ರೂ. 2001-02 ಇದು 26045 ಕೋಟಿ ರೂ. ಗೇರಿತು. ಅಂದರೆ ಶೇ 66 ಹೆಚ್ಚಳ. ಲಾಭ, ಬಡ್ಡಿ, ಡಿಪ್ರಿಸಿಯೇಷನ್, ತೆರಿಗೆ ಪಾವತಿ 2000-01 ಒಟ್ಟು 69287 ಕೋಟಿ ರೂ. ಇದ್ದದ್ದು 2001 ರಲ್ಲಿ 98619 ಕೋಟಿ ರೂ. ಗೇರಿತು. ಅಂದರೆ ಶೇ 29.34 ಹೆಚ್ಚಳವಾಯಿತು. ಇಕ್ವಿಟಿ ಬಂಡವಾಳದ ಮೇಲೆ ಸರ್ಕಾರಕ್ಕೆ ದೊರೆತ ಪ್ರತಿಫಲ 2001-02 ರಲ್ಲಿ ಶೇ 24.58 ತೆರಿಗೆ ನೀಡುವ ಮೊದಲ ನಿವ್ವಳ ಲಾಭ ಹಿಂದಿನವರ್ಷ

ಪುಟ 8 ಕ್ಕೆ





ಇದು ಧಾಳಿ. ಜನತೆಯ ಮೂಲಭೂತ ಹಕ್ಕಿನ ಮೇಲಿನ ನಗ್ನ ಧಾಳಿ. ಮುಷ್ಕರ ಹೂಡುವ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಎತ್ತಿ ಹಿಡಿಯಬೇಕಾದ ಉಚ್ಛ ನ್ಯಾಯಾಲಯವೇ ಆ ಹಕ್ಕುಗಳನ್ನು ದಮನಿಸಹೊರಟಿದೆ. ಈ ಮೂಲಕ ಭಾರತದ ದೇಶದ ಇತಿಹಾಸದಲ್ಲಿ ಕರಾಳ ಅಧ್ಯಾಯ ಬರೆಯಲು ಹೊರಟಿದೆ. ಜಾಗತೀಕರಣ, ಉದಾರೀಕರಣದ ಸಿದ್ಧಾಂತದ ವಿಷಗಾಳಿ ಎಲ್ಲೆಡೆ ಪಸರಿಸುತ್ತಿರುವಾಗ ಮುಷ್ಕರ ಹೂಡುವ ಸಂವಿಧಾನದತ್ತ ಹಕ್ಕೇ ಇಲ್ಲವೆಂದೂ ವಾದಿಸಲಾಗುತ್ತಿದೆ? ನಿಜ ಸಂಗತಿ ಏನು? ತೀರ್ಪಿನ ಪರಿಣಾಮ-ಅದರ ಪೂರ್ವಾಪರಗಳ ಬಗ್ಗೆ ವಿಶ್ಲೇಷಿಸಿದ್ದಾರೆ ಅಖಿಲ ಭಾರತ ಸರ್ಕಾರಿ ನೌಕರರ ಸಂಘಟನೆಯ ರಾಷ್ಟ್ರ ಪ್ರಧಾನ ಕಾರ್ಯದರ್ಶಿ, ಮಾಜಿ ಸಂಸತ್ ಸದಸ್ಯರಾದ ಸಂಗಾತಿ ಸುಕೋಮಲ್ ಸೇನ್‌ರವರು

ಸುಪ್ರೀಂ ಕೋರ್ಟ್ ತೀರ್ಪು: ಮುಷ್ಕರದ ಹಕ್ಕು ಇಲ್ಲವೇ?

ಲೆನಿನ್‌ರವರು ಬಹಳಷ್ಟು ಹಿಂದೆಯೇ ತಮ್ಮ ಹೆಸರಾಂತ ಕೃತಿ ಪ್ರಭುತ್ವ ಮತ್ತು ಕ್ರಾಂತಿಯಲ್ಲಿ, ಬೂರ್ಜ್ವಾ ಪ್ರಭುತ್ವ ಯಾವ ರೀತಿಯಲ್ಲಿ ಕಾರ್ಮಿಕ ವರ್ಗದ ಬಗ್ಗೆ ಅಂತರ್ಗತವಾದ ವರ್ಗದ್ವೇಷವನ್ನು ಬೆಳೆಸಿಕೊಳ್ಳುತ್ತದೆ ಎಂಬುದನ್ನು ಸ್ಪಷ್ಟವಾಗಿ ಎತ್ತಿ ತೋರಿಸಿದ್ದಾರೆ. ಬೂರ್ಜ್ವಾ ಪ್ರಭುತ್ವದ ಶೋಷಣೆಯ ಹವಣಿಕೆಗಳ ವಿರುದ್ಧವಾಗಿ ಕಾರ್ಮಿಕ ವರ್ಗದ ಪ್ರತಿರೋಧ ಸವಾಲಾಗಿ ಬಂದಾಗ, ಈ ವರ್ಗ ದ್ವೇಷ ಅಧಿಕಾಧಿಕ ಪ್ರಮುಖವಾಗಿ ಮತ್ತು ಹಿಂಸಾತ್ಮಕವಾಗಿ ಹೊರಹೊಮ್ಮುತ್ತದೆ.

ಲೆನಿನ್‌ರವರು ಮತ್ತೂ ಮುಂದುವರಿದು, ಯಾವ ರೀತಿಯಲ್ಲಿ ಬೂರ್ಜ್ವಾ ವ್ಯವಸ್ಥೆ ತನ್ನ ಪ್ರಭುತ್ವದ ಮೂರು ಅಂಗಗಳಾದ. ಅಧಿಕಾರಶಾಹಿ, ಪೊಲೀಸು ಹಾಗೂ ಸೇವೆ ಮತ್ತು ನ್ಯಾಯಂಗ ಇವುಗಳನ್ನು ಕಾರ್ಮಿಕ ವರ್ಗ ಮತ್ತಿತರ ದುಡಿಯುವ ವಿಭಾಗಗಳ ವಿರುದ್ಧವಾಗಿ ಬಳಸಿಕೊಳ್ಳುತ್ತದೆ ಎಂಬುದನ್ನು ವಿವರಿಸುತ್ತಾರೆ. ಶೋಷಿತರ ಬಗ್ಗೆ ಅವರಿಗಿರುವ ವರ್ಗದ್ವೇಷ ಎಳ್ಳಷ್ಟೂ ಕುಂದುವುದಿಲ್ಲ. ತಾವು ಪಕ್ಷಪಾತರಹಿತರು ಎನ್ನುವ ಅವರವಾದ ಬರಿಯ ಬೂಟಾಟಿಕೆ ಮಾತ್ರ.

ಇತ್ತೀಚೆಗೆ 12 ಲಕ್ಷಜನ ರಾಜ್ಯ ಸರ್ಕಾರೀ ನೌಕರರು ಮತ್ತು ಅಧ್ಯಾಪಕರು ಮಾತುಕತೆಗಳ ಮೂಲಕ ಸಮಸ್ಯೆಯನ್ನು ಪರಿಹರಿಸುವ ತಮ್ಮ ಪ್ರಯತ್ನಗಳು ವಿಫಲವಾದ ನಂತರ ಜುಲೈ 2 ರಿಂದ ಅನಿರ್ದಿಷ್ಟಾವಧಿಯ ಐಕ್ಯ ಮುಷ್ಕರ ನಡೆಸಿದ ತಮಿಳುನಾಡಿನ ಪ್ರಸಂಗ, ಬೂರ್ಜ್ವಾ ಪ್ರಭುತ್ವದ ಎಲ್ಲಾ ಅಂಗಗಳ ತೀವ್ರ ವರ್ಗದ್ವೇಷದ ಒಂದು ಉಜ್ವಲ ಉದಾಹರಣೆ.

ಸರ್ವೋಚ್ಛ ನ್ಯಾಯಾಲಯದತೀರ್ಪು :

ಇಡೀ ಕಾರ್ಮಿಕ ಚಳುವಳಿ ಮತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿರುವ ಜನವಿಭಾಗಕ್ಕೆ, 12 ಲಕ್ಷ ರಾಜ್ಯ ಸರ್ಕಾರಿ ನೌಕರರು ಮತ್ತು ಅಧ್ಯಾಪಕರ ಮೇಲೆ ರಾಜ್ಯ ಸರ್ಕಾರ ನಡೆಸಿದ ಕ್ರೂರ ದೌರ್ಜನ್ಯ, ತೀವ್ರ ಆಘಾತ ತಂದಿದೆ. ಅದುವರೆಗೂ ಲಭ್ಯವಾಗಿದ್ದ ನಿವೃತ್ತವೇತನದ ಸೌಲಭ್ಯಗಳು ಮತ್ತಿತರ ಸವಲತ್ತುಗಳಲ್ಲಿ ಸರ್ಕಾರ ಮಾಡಿದ್ದ ತೀವ್ರ ಕಡಿತವನ್ನು ವಿರೋಧಿಸಿ ಈ ಅನಿರ್ದಿಷ್ಟ ಮುಷ್ಕರ ನಡೆದಿತ್ತು.

ತನ್ನ ಜುಲೈ 21 ಮತ್ತು ನಂತರದ ತೀರ್ಪುಗಳ ಮೂಲಕ ಸರ್ವೋಚ್ಚ ನ್ಯಾಯಾಲಯದ ವಿಭಾಗೀಯ ಪೀಠವೊಂದು, ಮುಷ್ಕರವಿರುವಲ್ಲಿ ಸುಮಾರು 2 ಲಕ್ಷ ಜನ ಸರ್ಕಾರಿ ನೌಕರರು ಹಾಗೂ

ಸುಕೋಮಲ್ ಸೇನ್


ಅಧ್ಯಾಪಕರನ್ನು ವಜಾಮಾಡಿದ ರಾಜ್ಯ ಸರ್ಕಾರದ ಬರ್ಬರ ಕ್ರಮವನ್ನು ಎತ್ತಿ ಹಿಡಿದಿರುವುದು, ಅತ್ಯಂತ ಕಳವಳಕಾರಿ ಮತ್ತು ಖಂಡನೀಯ. ಅಷ್ಟೇ ಅಲ್ಲ, ರಾಜ್ಯ ಸರ್ಕಾರದ ನಿರಂಕುಶವರ್ತನೆಯ ದಮನಕಾರೀ ಕ್ರಮಗಳನ್ನು ನ್ಯಾಯಾಲಯ ಸಂಪೂರ್ಣವಾಗಿ ಪುಷ್ಟೀಕರಿಸಿದೆ. ಮುಷ್ಕರವನ್ನು ಕಾನೂನು ಬಾಹಿರ ಎಂದು ಪರಿಗಣಿಸಿದ ನ್ಯಾಯಾಲಯ 'ಜಯಲಲಿತಾ ಸರ್ಕಾರ ಈ ರೀತಿಯ ಕೆಟ್ಟ ಕಾರುಬಾರಿನ ವಿರುದ್ಧ ದೃಢವಾಗಿ ಸಂದೇಶವನ್ನೇ ನೀಡಿದೆ ಎಂದೂ ಸಾರಿದೆ. ನವ ಉದಾರವಾದೀ ಜಾಗತೀಕರಣ ತಮ್ಮ ಆರ್ಥಿಕ ಸವಲತ್ತುಗಳು ಮತ್ತು ಸೌಲಭ್ಯಗಳಲ್ಲಿ ತೀವ್ರ ಕಡಿತದ ರೂಪದಲ್ಲಿ ತಂದೊಡ್ಡಿರುವ ಆರ್ಥಿಕ ಸಂಕಷ್ಟಗಳಿಂದ ತತ್ತರಿಸುತ್ತಿರುವ ನೌಕರರು ಮತ್ತು ಕಾರ್ಮಿಕರು ನಡೆಸುವ ಯಾವುದೇ ಮುಷ್ಕರ ಅಥವಾ ಪ್ರತಿಭಟನೆಯನ್ನು ಭಂಡಧೈರ್ಯದಿಂದ ಬಗ್ಗುಬಡಿಯಲು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮತ್ತು ಎಲ್ಲಾ ಮಾಲೀಕವರ್ಗಕ್ಕೆ ಉಚ್ಚನ್ಯಾಯಾಲಯದ ಈ ಸಂದೇಶ ಇಂಬುಗೊಡುತ್ತದೆ.

ಎಲ್ಲಕ್ಕಿಂತ ಹೆಚ್ಚಾಗಿ, ಜಯಲಲಿತಾ ಸರ್ಕಾರದ ಪ್ರತೀಕಾರದ ಮನೋಭಾವ ಎಷ್ಟಿದೆಯೆಂದರೆ ವಜಾಗೊಳಿಸಲ್ಪಟ್ಟ ನೌಕರರನ್ನು ಪುನರ್‌ನೇಮಕ ಗೊಳಿಸುವಂತೆ ಅದಕ್ಕೆ ಸರ್ವೋಚ್ಚ ನ್ಯಾಯಾಲಯ ಆದೇಶಿಸಿದ (ಅತ್ಯಂತ ಅವಹೇಳನಕಾರಿ ತಪ್ಪೊಪ್ಪಿಗೆಯ ಷರತ್ತನ್ನು ವಿಧಿಸುವ ಮೂಲಕ) ಸಹ, ಮುಷ್ಕರ ಹಿಂತೆಗೆದು ಕೆಲವು ದಿನಗಳ ಬಳಿಕ ಜುಲೈ 25 ರಂದು ಸುಮಾರು 30000 ನೌಕರರು ಮತ್ತು ಅಧ್ಯಾಪಕರ ವಿರುದ್ಧ ದುರುದ್ದೇಶಪೂರಿತವಾದ ಪ್ರಥಮ ಮಾಹಿತಿ ವರದಿ (ಎಫ್.ಐ.ಆರ್.) ಅನ್ನು ಸಲ್ಲಿಸಿತು. ಅಲ್ಲದೆ ಈ 30,000 ಜನ ಕೆಲಸಕ್ಕೆ ಹಾಜರಾಗಲು ಬಿಡಲಿಲ್ಲ.

ರಾಜ್ಯ ವಿಧಾನಸಭೆಯ ಅಧಿವೇಶನ ನಡೆಯುತ್ತಿದ್ದಾಗಲೇ, ಆಘಾತಕಾರೀ ಅಂಶವೆಂದರೆ ರಾಜ್ಯ ವಿಧಾನಸಭಾ ಅಧಿವೇಶನ ನಡೆಯುತ್ತಿದ್ದಾಗಲೇ, ತಮಿಳು ನಾಡು ಅಗತ್ಯ ಸೇವಾ ಸಂರಕ್ಷಣಾ ಕಾನೂನು 2002ನ್ನು ಸ್ವೇಚ್ಛಾನುಸಾರ ತಿದ್ದುಪಡಿ ಮಾಡಿ ತಮಿಳುನಾಡು ಸರ್ಕಾರ ಹೊರಡಿಸಿದ ಸುಗ್ರೀವಾಜ್ಞೆಯನ್ನು ಮದರಾಸಿನ ಉಚ್ಚ ನ್ಯಾಯಾಲಯ ಕೂಡ ರದ್ದು ಮಾಡಲಿಲ್ಲ. ಆ ವಿಷಯದ ಬಗ್ಗೆ ನ್ಯಾಯಾಲಯ ಮೌನ ತಾಳಿದ್ದು ಮಾತ್ರವಲ್ಲ, ಮುಷ್ಕರನಿರತ ನೌಕರರು ಮತ್ತು ಅಧ್ಯಾಪಕರಿಗೆ ಸೂಕ್ತ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಉದ್ಯುಕ್ತವಾಗಲಿಲ್ಲ.

ಸರ್ವೋಚ್ಚ ನ್ಯಾಯಾಲಯವಂತೂ ಎರಡು ಲಕ್ಷಕ್ಕೂ ಮೀರಿ ನೌಕರರನ್ನು ಮತ್ತು ಅಧ್ಯಾಪಕರನ್ನು ವಜಾಗೊಳಿಸಿದ ಹಾಗೂ ಸುಮಾರು 2500 ಜನರ ಮೇಲೆ, ಹಿಂಸಾಚಾರದ ನೆಪದಲ್ಲಿ ಮೊಕದ್ದಮೆಗಳನ್ನು ಹೂಡಿದ ತಮಿಳುನಾಡು ಸರ್ಕಾರದ ಕ್ರಮವನ್ನು ಸಮರ್ಥಿಸಿತು. ಅದಲ್ಲದೆ, ಉರಿವ ಗಾಯಕ್ಕೆ ಉಪ್ಪು ಸವರಿದಂತೆ, ಮೊಕದ್ದಮೆಗಳಿಗೊಳಗಾದವರನ್ನು ಬಿಟ್ಟು, ಉಳಿದ ವಜಾ ಆದ ನೌಕರರನ್ನು ಪುನರ್ನೇಮಕ ಮಾಡುವಂತೆ ತಮಿಳುನಾಡು ಸರ್ಕಾರಕ್ಕೆ ಮನವಿಮಾಡಿತು. ಆದರೆ ನೌಕರರು ಇದಕ್ಕಾಗಿ ತಪ್ಪೊಪ್ಪಿಗೆ ಪತ್ರ ಮತ್ತು ಇನ್ನು ಮುಂದೆ ಯಾವುದೇ ಮುಷ್ಕರ ಹೂಡುವುದಿಲ್ಲ ಎಂದು ದೃಢೀಕರಣ ಪತ್ರ ಬರೆದುಕೊಡಬೇಕೆಂದು ವಿಧಿಸಿತು ಕೂಡಾ. ಇದೆಲ್ಲವೂ ನೌಕರರನ್ನು ತೀವ್ರವಾಗಿ ತೇಜೋವಧೆಗೊಳಿಸುವ ಕ್ರಮಗಳಲ್ಲದೆ ಬೇರೇನೂ ಅಲ್ಲ. ಇದು ಕೇವಲ ತಮಿಳುನಾಡಿನ ನೌಕರರಲ್ಲದೆ ಬದಲಾಗಿ ಇಡೀ ದೇಶದ ಸಮಸ್ತ ಕಾರ್ಮಿಕ ವರ್ಗದ ಮಾನವೀಯ ಹಿರಿಮೆಗ[illegible] ಘಾಸಿಯುಂಟುಮಾಡಿದೆ.

ಬಾರತದ ಸಂವಿಧಾನ ಸರ್ಕಾರಿ ನೌಕರರಿಗ[illegible] ಮುಷ್ಕರ ಹೂಡುವ ಹಕ್ಕನ್ನು ಕೊಡಮಾಡಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ಪ್ರತಿಪಾದನೆ ಸಂಪೂರ್ಣವಾಗಿ ಗೊಂದಲಕಾರಿಯಾಗಿದೆ.



'ಮುಷ್ಕರದ ಹಕ್ಕು ಸಂವಿಧಾನ ಬದ್ಧ' - ಜ್ಯೋತಿಬಸು

26 ವರ್ಷಗಳ ದೀರ್ಘಕಾಲ ಪಶ್ಚಿಮ ಬಂಗಾಳದ ಮುಖ್ಯಮಂತ್ರಿಯಾಗಿದ್ದ[illegible] ಹೇಳಿಕೆ ನೀಡಿ, 'ರಾಜ್ಯ ಸರ್ಕಾರಿ ನೌಕರರಿ[illegible] ಇರಲೇಬೇಕು. ತಮ್ಮ ನ್ಯಾಯಯುತ ಜೀ[illegible] ಅಸ್ತ್ರವಾಗಿ ಅವರು ಅದನ್ನು ಬಳಸುತ್ತಾರೆ. ಪಶ್ಚಿ[illegible] ಬ್ರಿಟಿಷರ ಕಾಲದ ಕಾನೂನಿಗೆ ತಿದ್ದುಪಡಿ ತಂ[illegible] ಹಕ್ಕು ನೀಡಿದೆ. ತಮಿಳುನಾಡು ಸರ್ಕಾ[illegible] ಕಿತ್ತುಕೊಂಡಿರುವುದು ಸಂವಿಧಾನದ ಆಶಯ[illegible] ಎಂದು ಜ್ಯೋತಿಬಸು ಹೇಳಿದ್ದಾರೆ.

ಮುಷ್ಕರದ ಹಕ್ಕು ಇಲ್ಲವೆ?

ಬ್ರಿಟಿಷರು ಜ್ಯಾರಿಗೆ ತಂದ 1935ರ ಭಾ[illegible] ಸರ್ಕಾರದ ಕಾನೂನು ಮತ್ತು ಆ ಕಾನೂನಿನ[illegible] ರೂಪಿಸಿದ ನಡತೆ ನಿಯಮಾವಳಿಗಳು ಭಾರ[illegible] ಸರ್ಕಾರೀ ನೌಕರರನ್ನು ಹೆಚ್ಚುಕಡಿ[illegible] ಗುಲಾಮರಂತೆಯೇ ಪರಿಗಣಿಸುತ್ತಿದ್ದ[illegible] ಸಾಮ್ರಾಜ್ಯಶಾಹಿಗಳು ಭಾರತದಲ್ಲಿ ಈ [illegible] ನಡೆದುಕೊಳ್ಳುತ್ತಿದ್ದ ಸಂದರ್ಭದಲ್ಲೇ, ಅದರ [illegible] ನಾಡಾದ ಬ್ರಿಟನ್ನಿನಲ್ಲಿ ಸರ್ಕಾರಿ ನೌಕ[illegible] ಮುಷ್ಕರದ ಹಕ್ಕನ್ನು ಹೊಂದಿದ್ದರು ಮಾ[illegible] ಕೆಲವೊಂದು ನಿಬಂಧನೆಗೊಳ[illegible] ಚುನಾವಣೆಗಳಲ್ಲಿ ಸಹ ಅ[illegible] ಸ್ಪರ್ಧಿಸಬಹುದಾಗಿತ್ತು. ಅಲ್ಲದೆ, ಭಾ[illegible] ಸಂವಿಧಾನ ಯಾವುದೇ ವಿಭಾಗದ ಕಾ[illegible] ಮುಷ್ಕರ ನಡೆಸುವ ಹಕ್ಕಿನ ಬಗ್ಗೆ ವಿ[illegible] ಹೇಳುವುದಿಲ್ಲ. 19ನೇ ವಿಧಿ ಎಲ್ಲಾ ನಾಗ[illegible] ಮೂಲಭೂತ ಹಕ್ಕುಗಳನ್ನು ಖಾತರಿಪಡಿ[illegible] ಮತ್ತು 19(2)ನೇ ವಿಧಿ ಕೇಂದ್ರ ಹಾಗೂ [illegible] ಸರ್ಕಾರಗಳು ಪರ್ಯಾಲೋಚಿಸಿ ನಿ[illegible] ಬಹುದಾದ ನ್ಯಾಯ ಸಮ್ಮತ ನಿರ್ಭಂಧಗ[illegible] ಹೇಳುತ್ತದೆ. ಸಂವಿಧಾನದ 309ನೇ [illegible] ಅನುಸಾರ, ಶಾಸಕಾಂಗದ ಮೂಲಕ ತಮ್ಮ[illegible] ಸೇವಾ ನಿಯಮಗಳನ್ನು ರೂಪಿಸುವ [illegible] ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗಿದೆ[illegible] ನಾಚಿಕೆಗೇಡಿನ ಸಂಗತಿಯೆಂದರೆ, ಕೇಂದ್ರ[illegible] ರಾಜ್ಯ ಸರ್ಕಾರಗಳು ಬ್ರಿಟಿಷರು ರ[illegible] ನಿಯಮಾವಳಿಗಳನ್ನೇ ನಕಲು ಮಾಡಿದ ರಿ[illegible] ಸರ್ಕಾರಿ ನೌಕರರ ನಡೆತೆ ನಿಯಮಾ[illegible] ರೂಪಿಸಿವೆ. ಅದರ ಮೂಲಕ ಸರ್ಕಾರಿ [illegible] ತಮ್ಮ ಕಾರ್ಮಿಕ ಹಾಗೂ ರಾಜಕೀಯ ಹ[illegible] ಪೂರ್ಣವಾಗಿ ಚಲಾಯಿಸಲು ನಿರ್ಭ[illegible] ಪ್ರಯತ್ನ ಮಾಡಿವೆ. ಪಶ್ಚಿಮ ಬಂಗಾಳದ [illegible] ಸರ್ಕಾರ ಮಾತ್ರ ಈ ನಿಯಮಾವ[illegible] ಬದಲಾಯಿಸಿದೆ. ಆದರೆ, ಮುಷ್ಕರ[illegible]

ಸರಕಾರಿ ನೌಕರರ ಮುಷ್ಕರ : ಪ್ರತಿಗಾಮಿ ತೀರ್ಪು

ಸರ್ಕಾರಿ ನೌಕರರಿಗೆ ಮುಷ್ಕರ ಹೂಡಲು ಯಾವುದೇ ಮೂಲಭೂತ, ಕಾನೂನಿನ ಹಾಗೂ ನೈತಿಕ ಹಕ್ಕಿಲ್ಲ ಎಂದು ಸರ್ವೋಚ್ಚ ನ್ಯಾಯಾಲಯದ ದ್ವಿಸದಸ್ಯ ಪೀಠವು ತೀರ್ಪು ನೀಡಿದೆ. ಇದೊಂದು ಪೂರ್ವನಿದರ್ಶನವಿಲ್ಲದ ಅತ್ಯಂತ ಪ್ರತಿಗಾಮಿ ತೀರ್ಪು. ಇದರಿಂದ ಲಕ್ಷಾಂತರ ಸರ್ಕಾರಿ ನೌಕರರು ಸಂಘಟಿತರಾಗುವ ಮತ್ತು ಮುಷ್ಕರ ಹೂಡುವ ಮೂಲಭೂತ ಹಕ್ಕಿನಿಂದ ವಂಚಿತರಾಗಲಿದ್ದಾರೆ. ಇದು ಸಂವಿಧಾನಾತ್ಮಕ ಮೂಲಭೂತ ಹಕ್ಕುಗಳ ನಿರಾಕರಣೆಯಾಗಿದೆ. ಅಲ್ಲದೆ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐಎಲ್‌ಓ)ಯ ಆಶಯ, ಸಂಪ್ರದಾಯಗಳ ವಿರೋಧಿಯಾಗಿದೆ.

ರಾಜಕೀಯ ಪಕ್ಷಗಳನ್ನು ಅನಗತ್ಯವಾಗಿ ಈ ವಿವಾದದೊಳಗೆ ಎಳೆದು ತರಲಾಗಿದೆ. ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ದಮನಕ್ಕೆ ಒಳಗಾದ ಜನರ ಪರವಾಗಿ ಪ್ರತಿಭಟನಾ ಧ್ವನಿ ಎತ್ತುವುದು ಜನಪರ ಸಂಘಟನೆಗಳ ಜವಾಬ್ದಾರಿಯಾಗಿರುವಾಗ, ಜನತೆಯ ಹಕ್ಕುಗಳಿಗೆ ರಕ್ಷಣೆ ನೀಡುವ ಬದಲು ತಮಿಳುನಾಡು ಅಗತ್ಯ ಸೇವಾ ಕಾಯ್ದೆಯ ತಿದ್ದುಪಡಿಗಾಗಿ ಹೊರಡಿಸಲಾದ ಕರಾಳ ಸುಗ್ರೀವಾಜ್ಞೆಯನ್ನು ಅನುಮೋದಿಸಿದಂತಾಗಿದೆ.

ಸರ್ಕಾರಗಳ ನಿರಂಕುಶ ಕ್ರಮಗಳಿಗೆ ಕಡಿವಾಣ ಹಾಕಿ ಜನತೆಯ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ರಕ್ಷಣೆ ಒದಗಿಸಬೇಕಾದ ದೇಶದ ಸರ್ವೋಚ್ಚ ನ್ಯಾಯಾಲಯವೇ ಇಂತಹ ಪ್ರತಿಗಾಮಿ ತೀರ್ಪು ನೀಡಿರುವುದು ದುರದೃಷ್ಟಕರವಾಗಿದೆ.

ಈ ದೇಶದ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಈ ತೀರ್ಪನ್ನು ಒಪ್ಪಿಕೊಳ್ಳಲು ಸಾಧ್ಯವಾಗದು. ಮೂಲಭೂತ ಹಕ್ಕುಗಳ ಮೇಲಿನ ಈ ದಾಳಿಯನ್ನು ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳು ವಿರೋಧಿಸಬೇಕಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಕನ ಒಂದು ಮೂಲಭೂತ ಹಕ್ಕಾಗಿದೆ ಮತ್ತು ರ ಭಾರತೀಯ ಕಾರ್ಮಿಕ ಸಂಘ ಕಾನೂನು 1947ರ ಕೈಗಾರಿಕಾ ವಿವಾದ ಕಾನೂನು ಡೂ ಕಾರ್ಮಿಕರು ಸಂಘ ರಚಿಸಿಕೊಳ್ಳುವ ಸಾಮೂಹಿಕ ಚೌಕಾಶಿ ಮಾಡುವ ಳನ್ನು ಪ್ರತಿಪಾದಿಸುತ್ತವೆ.

ಸಂದರ್ಭದಲ್ಲಿ ರೈಲ್ವೇ ನೌಕರರ 1974ರ ಕ ಮುಷ್ಕರ ಮತ್ತು ಆ ನಂತರ ನಡೆದ ಕ ಸಿಬ್ಬಂದಿಯ ಮುಷ್ಕರದ ಬೆನ್ನಲ್ಲೇ ರು ರೈಲ್ವೇ ನೌಕರರು ನಿಯಮ 14(ಬಿ)ರ ಾರೆ ಸೇವೆಯಿಂದ ವಜಾಗೊಳಿಸಲ್ಪಟ್ಟದ್ದನ್ನು ಸ್ಮರಿಸಬಹುದಾಗಿದೆ.

ಾರ್ವಜನಿಕ ಹಿತ'ದ ಆಧಾರದಲ್ಲಿ ಸರ್ಕಾರಿ ರನ್ನು ಸ್ವರಕ್ಷಣೆಗೆ ಯಾವುದೇ ಅವಕಾಶ ೆ ಸೇವೆಯಿಂದ ವಜಾಗೊಳಿಸುವ ಈ ಯಮ, ಸಂವಿಧಾನದ 311(2) ಸಿ. ಮತ್ತು . ವಿಧಿಯಿಂದ ಪ್ರೇರಿತವಾದದ್ದು. ಆದರೂ ಆಗ ಸರ್ವೋಚ್ಚ ನ್ಯಾಯಾಲಯ ಸರ್ಕಾರೀ ನೌಕರರಿಗೆ ಮುಷ್ಕರದ ಹಕ್ಕು ಇಲ್ಲವೆಂದಾಗಲೀ ಅಥವಾ ಮುಷ್ಕರ ಕಾನೂನು ಬಾಹಿರ ಎಂದಾಗಲೀ ಆದೇಶಿಸಿರಲಿಲ್ಲ. ಮಾತ್ರವಲ್ಲ, ಸೇವೆಯಲ್ಲಿ ಪುನರ್ನೇಮಕವಾಗುವ ಸಲುವಾಗಿ ಗುಲಾಮೀ ದೃಢೀಕರಣ ಪತ್ರವನ್ನಾಗಲೀ ತಪ್ಪೊಪ್ಪಿಗೆಯನ್ನಾಗಲೀ ಸರ್ವೋಚ್ಚ ನ್ಯಾಯಾಲಯ ಕೇಳಿರಲಿಲ್ಲ. 1992ರ ವೇಳೆಗೆ ಹೆಚ್ಚುಕಡಿಮೆ ಎಲ್ಲಾ ವಜಾಗೊಳಿಸಲ್ಪಟ್ಟ ನೌಕರರು ಸೇವೆಯಲ್ಲಿ ಪುನರ್ನೇಮಕವಾಗಿದ್ದರು. ನ್ಯಾಯಾಲಯದ ತೀರ್ಪಿನ ಹಿನ್ನಲೆಯಲ್ಲಿ ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ 1986ರ ಮೊದಲಲ್ಲಿ ಸಂವಿಧಾನದ 311(2) ಬಿ. ಮತ್ತು ಸಿ. ವಿಧಿಗಳನ್ನು ಕಿತ್ತುಹಾಕುವಂತೆ ಒತ್ತಾಯಿಸಿ ದೇಶದ್ಯಾಂತ ಯಶಸ್ವೀ ಮುಷ್ಕರ .

ರೆ ಇದೀಗ ಸರ್ವೋಚ್ಚ ನ್ಯಾಯಾಲಯದ ಯ ಪೀಠವೊಂದು ಪ್ರಪ್ರಥಮವಾಗಿ ವಿಚಿತ್ರ ಆದೇಶವನ್ನು ನೀಡಿದೆ.

ರತದಲ್ಲಿ ಮಾತ್ರವಲ್ಲ, ಇಡೀ ದ್ಯಂತ, ಕಾರ್ಮಿಕರು ತಮ್ಮ ಹಕ್ಕುಗಳನ್ನು ಟ ಮತ್ತು ಬಲಿದಾನಗಳ ಮೂಲಕ ಕೊಂಡಿದ್ದಾರೆಯೆ ಹೊರತು ಯಾರದೇ ಕ್ಷದಿಂದಲ್ಲ. ಕೈಗಾರಿಕಾ ಕಾರ್ಮಿಕ ಗಲೀ ಅಥವಾ ಸರ್ಕಾರಿ ನೌಕರರೇ ಆಗಲೀ ೂ ತಮ್ಮ ನ್ಯಾಯ ಬದ್ಧ ಹಿತಾಸಕ್ತಿಗಳ ದ್ಧಿಗಾಗಿ, ಮುಷ್ಕರದ ಹಕ್ಕನ್ನೂ ಡಂತೆ ತಮ್ಮ ಸಾಮೂಹಿಕ ಚೌಕಾಶಿಯ ಯಾವುದೇ ಸಂದರ್ಭದಲ್ಲಿಯೂ ಡಲ್ಲಾರರು. ತಮಿಳುನಾಡಿನ ಪ್ರಸಕ್ತ ಲ್ಲಿ, ಮುಷ್ಕರ ನಡೆದದ್ದು ಪರಿಸ್ಥಿತಿಯ ಂದಾಗಿ. ಯಾವುದೇ ಅಂಕಿಯಿಲ್ಲದೆ ತಮ್ಮ ಸೌಲಭ್ಯಗಳನ್ನು ಕಡಿತಗೊಳಿಸಿದ್ದರ ವಾಗಿ ನಿಂತ ನೌಕರರು ಅಂತಹ ಗಳನ್ನು ಮರುಕಳಿಸುವಂತೆ ಸುತ್ತಿದ್ದರು. ಆದರೆ ರಾಜ್ಯ ಸರ್ಕಾರ, ನಡೆಯುತ್ತಿದ್ದ ಸಂದರ್ಭದಲ್ಲೇ ತಂದ ಜ್ಞೆಯ ಮೂಲಕ ತಿದ್ದುಪಡಿ ಮಾಡಿದೆ. ಳುನಾಡು ಅಗತ್ಯ ಸೇವಾ ಸಂರಕ್ಷಣಾ 2002 ರ ನಿಯಮ 22ನ್ನು ಬಳಸಿ, ನ್ನು ಅತ್ಯಂತ ಬರ್ಬರವಾಗಿ ಹತ್ತಿಕ್ಕಿತು ಯಾವುದೇ ಪೂರ್ವಸೂಚನೆಯಿಲ್ಲದೆ ಸೇವೆಯಿಂದ ವಜಾ ಮಾಡಿತು. ವ್ಯವಸ್ಥೆಯ ಒಂದು ತ್ರಿಪಕ್ಷೀಯ ರುವ ಅಂತರ್ರಾಷ್ಟ್ರೀಯ ಕಾರ್ಮಿಕ (ಐ.ಎಲ್.ಓ) ತನ್ನ 87, 98, 151 4ನೇ ಅಧಿನಿರ್ಣಯ ಈ ಹಕ್ಕುಗಳನ್ನು ಾಡಿದೆ. ಸಾರ್ವಜನಿಕ ಸೇವಾಕ್ಷೇತ್ರಕ್ಕೆ ವಾದ 151ನೇ ಅದಿನಿರ್ಣಯ

ಪುಟ 8 ಕ್ಕೆ

ಸುಪ್ರೀಂಕೋರ್ಟ್ ತೀರ್ಪಿಗೆ ವಿರೋಧ

ತಮಿಳುನಾಡು ಸರಕಾರಿ ನೌಕರರ ಚಳುವಳಿಯ ಕುರಿತು ತೀರ್ಪು ನೀಡಿದ ಸರ್ವೋಚ್ಚ ನ್ಯಾಯಾಲಯವು 'ರಾಜ್ಯ ಸರ್ಕಾರಿ ನೌಕರರಿಗೆ ಮುಷ್ಕರ ಮಾಡುವ ಯಾವುದೇ ಮೂಲಭೂತ, ಕಾನೂನುಬದ್ಧ ಹಾಗೂ ನೈತಿಕ ಹಕ್ಕಿಲ್ಲ' ಎಂದು ಹೇಳಿ 'ರಾಜಕೀಯ ಪಕ್ಷಗಳು ಮತ್ತು ಸಂಘಟನೆಗಳೂ ಕೂಡಾ ಇದಕ್ಕೆ ಹೊರತಾಗಿಲ್ಲ' ಎಂದು ಹೇಳಿದೆ.

ಈ ತೀರ್ಪಿನ ವಿರುದ್ಧ ದೇಶದೆಲ್ಲೆಡೆ ಪ್ರತಿಭಟನೆಗಳು ನಡೆದಿವೆ.ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ದ ಕಾರ್ಯಕರ್ತರು ಬೆಂಗಳೂರಿನ ಮೈಸೂರು ಬ್ಯಾಂಕ್ ವೃತ್ತದಲ್ಲಿ ತೀವ್ರ ಪ್ರತಿಭಟನೆ ನಡೆಸಿ, ತೀರ್ಪನ್ನು ಪುನರ್‌ಪರಿಶೀಲನೆ ನಡೆಸಬೇಕೆಂದು ಒತ್ತಾಯಿಸಿದರು.

ಜನತೆಗೆ ಅನ್ಯಾಯವೆಸಗುತ್ತಿವೆ. ಇಂತಹ ತೀರ್ಪುಗಳಿಂದ ನ್ಯಾಯಾಂಗದಲ್ಲೂ ಉಖಾಜಾ(ಉದಾರೀಕರಣ, ಖಾಸಗೀಕರಣ, ಜಾಗತೀಕರಣ) ಜನ ವಿರೋಧಿ ನೀತಿಗಳು ತೂರುತ್ತಿರಬಹುದೆಂಬ ಅನುಮಾನ ಬರುವಂತಾಗಿದೆ" ಎಂದರು.

ನಡೆಸಿದರು. ಉಡುಪಿ, ಬೆಳ್ತಂಗಡಿಗಳಲ್ಲಿ ಪ್ರತಿಭಟನೆ ನಡೆದ ವರದಿಯಾಗಿದೆ.

ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕು ಕೇಂದ್ರದಲ್ಲಿ 150 ಕ್ಕೂ ಹೆಚ್ಚು ಕಾರ್ಮಿಕರು ಪ್ರತಿಭಟನೆ ನಡೆಸಿದರು. ಬಳ್ಳಾರಿ ಜಿಲ್ಲಾ ಕೇಂದ್ರ ಹಾಗೂ ಹೊಸಪೇಟೆ ತಾಲ್ಲೂಕು ಕೇಂದ್ರಗಳಲ್ಲಿ

ಮುಷ್ಕರದ ಹಕ್ಕಿಗಾಗಿ ಎಲ್ಲೆಡೆ ಪ್ರತಿಭಟನೆ

ಕರ್ನಾಟಕಕ್ಕೆ ಸಂಬಂಧಪಟ್ಟಂತೆ ಸಿಇಟಿ ಕುರಿತಂತೆ ಸುಪ್ರೀಂಕೋರ್ಟ್ ನೀಡಿದ ತೀರ್ಪು ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಅನುಕೂಲವಾಗಿದ್ದು ಸಾಮಾನ್ಯ, ಅರ್ಹ ವಿದ್ಯಾರ್ಥಿಗಳಿಗೆ ಭವಿಷ್ಯಕ್ಕೆ ಧಕ್ಕೆಯಾಗಿದೆ ಎಂದು ಸಿಪಿಐ(ಎಂ) ಬೆಂಗಳೂರು



ಬೆಂಗಳೂರಿನಲ್ಲಿ ಪ್ರತಿಭಟನೆ

ಈ ಸಂದರ್ಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯ ಹಾಗೂ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್ ಮಾತನಾಡಿ 60 ರ ದಶಕದಲ್ಲಿ ತಮಿಳುನಾಡಿನಲ್ಲಿ ಅಂಚೆ ನೌಕರರು ಮುಷ್ಕರ ಮಾಡಿದಾಗ ಇದೇ ರೀತಿ ತೀರ್ಪು ಬಂದಿತ್ತು. ಆದರೂ ಕೂಡಾ ನೌಕರರು ಮುಷ್ಕರ ಮಾಡಿದ್ದಾರೆ. ಇಂದು ಸಾವಿರಾರು ಕಾರ್ಖಾನೆಗಳು ಮುಚ್ಚಿ, ಕಾರ್ಮಿಕರು ಕೆಲಸವಿಲ್ಲದೆ ಅಲೆಯುತ್ತಿರುವಾಗ, ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ನೀತಿಗಳು ಜನರನ್ನು ದಿನೇದಿನೇ ಬಾಧಿಸುತ್ತಿರುವಾಗ ಪ್ರತಿಭಟಿಸುವ ಹಕ್ಕನ್ನು ಕಸಿಯುವುದು ಸರಿಯಲ್ಲ ಎಂದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ನಿತ್ಯಾನಂದ ಸ್ವಾಮಿ "ನಮ್ಮ ದೇಶದ ಮೂರು ಪ್ರಮುಖ ಅಂಗಗಳಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗ ಈಗಾಗಲೇ ಸಾಮ್ರಾಜ್ಯಶಾಹಿಗಳ ಪ್ರಭಾವಕ್ಕೆ ಒಳಗಾಗಿ

ಜಿಲ್ಲಾ ಕಾರ್ಯದರ್ಶಿ ಕೆ.ಪ್ರಕಾಶ್ ಉದಾಹರಣೆ ನೀಡಿದರು.

ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ.ಗುರುಶಾಂತ್ ಮತ್ತಿತರರು ಭಾಗವಹಿಸಿದ ಈ ಪ್ರತಿಭಟನೆಯಲ್ಲಿ ವಿವಿಧ ಕಾರ್ಮಿಕ ಸಂಘಟನೆ, ಸಾಮೂಹಿಕ ಸಂಘಟನೆಯ ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಕೋಲಾರದಲ್ಲಿ ಬೆಳಿಗ್ಗೆ 10 ಗಂಟೆಗೆ ಹಲವಾರು ಕಾರ್ಯಕರ್ತರು ದಿಡೀರ್ ರಸ್ತೆ ತಡೆ ನಡೆಸಿ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು. **ತುಮಕೂರಿನಲ್ಲಿ** ಟೌನ್‌ಹಾಲ್‌ನಿಂದ ಜಿಲ್ಲಾಧಿಕಾರಿಗಳ ಕಛೇರಿಗೆ ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರನ್ನು ಉದ್ದೇಶಿಸಿ, ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಕೊಳಗೇರಿ ನಿವಾಸಿಗಳ ಸಂಘಧ ಉಪಾಧ್ಯಕ್ಷ ಅಲ್ತಾಫ್ ಮೊದಲಾದವರು ಮಾತನಾಡಿದರು.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 150 ಕ್ಕೂ ಹೆಚ್ಚು ಕಾರ್ಮಿಕರು, ಸುರಿವ ಮಳೆಯನ್ನು ಲೆಕ್ಕಿಸದೆ, ತಾಲ್ಲೂಕು ಕಚೇರಿಯ ಮುಂದೆ ಪ್ರತಿಭಟನೆ

ಪ್ರತಿಭಟನೆ ನಡೆದ ವರದಿಯಾಗಿದೆ.

ಗುಲ್ಬರ್ಗಾದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಮಾರುತಿ ಮಾನ್ಪಡೆ ಮತ್ತಿತರರ ನೇತೃತ್ವದಲ್ಲಿ ಧರಣಿ ಸತ್ಯಾಗ್ರಹ ನಡೆದ ವರದಿ ಬಂದಿದ್ದು, ಬಿಜಾಪುರದಲ್ಲಿ ನಡೆದ ಪ್ರತಿಭಟನೆಯಲ್ಲಿ ಭೀಮಸಿ ಕಲಾದಗಿ ಮತ್ತು ಎಐಟಿಯುಸಿ ಮುಖಂಡರು ಭಾಗವಹಿಸಿದ್ದರು. ಮೈಸೂರು, ಹುಬ್ಬಳ್ಳಿ, ಧಾರವಾಡ, ಸಿಂಧನೂರು ಮೊದಲಾದ ಪ್ರದೇಶಗಳಲ್ಲಿಯೂ ದಿಢೀರ್ ಪ್ರತಿಭಟನೆ ನಡೆದಿದೆ.

ದೆಹಲಿ ವರದಿ: ಮುಷ್ಕರದ ಹಕ್ಕು ಇಲ್ಲ ಎಂದು ತೀರ್ಪು ನೀಡಿದ ಸುಪ್ರೀಂಕೋರ್ಟ್ ಎದುರು, ಲೋಕಸಭೆಯಲ್ಲಿ ಸಿಪಿಐ(ಎಂ) ನಾಯಕರಾಗಿರುವ ಸೋಮನಾಥ ಚಟರ್ಜಿಯವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ನಡೆದಿದೆ. 'ಸರಕಾರಿ ನೌಕರರ ಸವಲತ್ತುಗಳನ್ನು ಹಿಂತೆಗೆದುಕೊಂಡ ತಮಿಳುನಾಡು ಸರ್ಕಾರದ ವಿರುದ್ಧ ಒಂದು ಮಾತನ್ನು ಹೇಳದ ಸುಪ್ರೀಂಕೋರ್ಟ್ (ಬದಲಾಗಿ ಜಯಲಲಿತಾ ಸರ್ಕಾರಕ್ಕೆ ಶಹಬ್ಬಾಸ್ ಗಿರಿ ಕೊಟ್ಟಿದೆ) ಅನ್ಯಾಯವನ್ನು ಪ್ರತಿಭಟಿಸಿದವರ ಹಕ್ಕನ್ನು ಕಸಿದುಕೊಂಡಂತಾಗಿದೆ' ಎಂದರು.

ಸಾಮೂಹಿಕ ಚೌಕಾಸಿಗಳ ಮೂಲಕ ಮುಷ್ಕರದ ಹಕ್ಕನ್ನು ಗಳಿಸಿಕೊಂಡಿದ್ದು, ಇದಕ್ಕಾಗಿ ತೀವ್ರ ಹೋರಾಟವನ್ನು ನಡೆಸಲಾಗಿತ್ತು ಎಂದು ನೆನಪಿಸಿದ ಸೋಮನಾಥ ಚಟರ್ಜಿ ಕೇಂದ್ರ ಸರ್ಕಾರ ಮತ್ತು ಅದರ ಮೈತ್ರಿ ಪಕ್ಷಗಳು ಮೌನ ವಹಿಸಿರುವುದೇಕೆ? ಎಂದು ಪ್ರಶ್ನಿಸಿದರು.

ಪಶ್ಚಿಮ ಬಂಗಾಳದಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳು ಹಾಗೂ ರಾಜ್ಯ ಸರಕಾರಿ ನೌಕರರು ಸುಪ್ರೀಂಕೋರ್ಟ್ ತೀರ್ಪಿನ ವಿರುದ್ಧ ರಾಜ್ಯಾದ್ಯಂತ ಆಗಸ್ಟ್ 7 ರಂದು ಬೃಹತ್ ಪ್ರತಿಭಟನೆ ನಡೆಸಿದರು. ಪಶ್ಚಿಮ ಬಂಗಾಳದಕಾರ್ಮಿಕ ಮಂತ್ರಿ ಮಹಮದ್ ಅಮಿನ್ ವರದಿಗಾರರೊಂದಿಗೆ ಮಾತನಾಡುತ್ತಾ ನೌಕರರ ಮುಷ್ಕರದ ಹಕ್ಕನ್ನು ಯಾರಿಂದಲೂ ಕಸಿಯುವುದು ಸಾಧ್ಯವಿಲ್ಲ ಎಂದು ಘೋಷಿಸಿದರು.

ತೀರ್ಪು ಹೊರಬಂದ ಮರುದಿನವೇ ನಡೆದ ಪ್ರತಿಭಟನೆ ವ್ಯಾಪಕತೆ ಬಹಳ ಮಹತ್ವದ ಬೆಳವಣಿಗೆ. ಇದು ಜನತೆ ತಮ್ಮ ಪ್ರಜಾಸತ್ತಾತ್ಮಕ ಹಕ್ಕಿನ ರಕ್ಷಣೆಗೆ ಬದ್ಧರಾದುದನ್ನು, ಅದನ್ನು ಬಿಟ್ಟುಕೊಡುವುದಿಲ್ಲವೆಂಬುದನ್ನು ತೋರಿಸುತ್ತದೆ.



ಕುಂದಾಪುರದಲ್ಲಿ..

ಮುಷ್ಕರ ನಿಷೇಧ.....

ಪುಟ 7 ರಿಂದ

ನಿರ್ದಿಷ್ಟವಾಗಿ ಆದೇಶಿಸುತ್ತದೆ "ತಮ್ಮ ಸ್ಥಾನಮಾನ ಮತ್ತು ಕರ್ತವ್ಯ ನಿರ್ವಹಣೆಯ ಸ್ವರೂಪಗಳಿಂದಾಗಿ ಉದ್ಭವಿಸುವ ಬಾಧ್ಯತೆಗಳಿಗೆ ಮಾತ್ರ ಒಳಪಟ್ಟಂತೆ, ಸಾರ್ವಜನಿಕ ನೌಕರರು, ಇತರ ನೌಕರರಂತೆಯೇ ಸಂಘಟನೆಯ ಸ್ವಾತಂತ್ರ್ಯವನ್ನು ಸಹಜವಾಗಿ ಚಲಾಯಿಸಲು ಅತ್ಯಂತ ಅವಶ್ಯಕವಾಗಿರುವ ನಾಗರಿಕ ಮತ್ತು ರಾಜಕೀಯ ಹಕ್ಕುಗಳನ್ನು ಹೊಂದತಕ್ಕದ್ದು".

ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ 151 ನೇ ಅಧಿನಿರ್ಣಯ ತ್ರಿಪಕ್ಷೀಯ ನಿರ್ಧಾರವಾಗಿರುವುದರಿಂದಾಗಿ, ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಸ್ಥಾಪಕ ಸದಸ್ಯರಲ್ಲಿ ಒಂದಾಗಿರುವ ಭಾರತ ಸರ್ಕಾರ, ನೈತಿಕವಾಗಿ ಅದನ್ನು ಕಡೆಗಾಣಿಸಲಾಗದು. ಭಾರತ ಸರ್ಕಾರ ಈ ಅಧಿ ನಿರ್ಣಯಗಳನ್ನು ಅನುಮೋದಿಸಿದೆಯೇ ಇಲ್ಲವೋ ಎಂಬುದು ಬೇರೆಯೇ ವಿಚಾರ. ಕಾರ್ಮಿಕ ಸಂಘಗಳ ಚಳುವಳಿ ಲಾಗಾಯ್ತಿನಿಂದಲೂ ಈ ಅಧಿ ನಿರ್ಣಯಗಳ ಅನುಮೋದನೆ ಗಾಗಿ ಒತ್ತಾಯಿಸುತ್ತಲೇ ಇದೆ ಮತ್ತು ಈ ಹಕ್ಕುಗಳ ಪ್ರತಿಪಾದನೆಗಾಗಿ ಮುನ್ನಡೆಯುವಂತೆ ದುಡಿಯುವ ಜನರನ್ನು ಹುರಿದುಂಬಿಸಿದೆ.

ಆಗಸ್ಟ್ 13 ಸರ್ಕಾರಿ ನೌಕರರು - ಕಾರ್ಮಿಕರ ದೇಶವ್ಯಾಪಿ ಪ್ರತಿಭಟನೆ

ತಮಿಳುನಾಡು ಸರ್ಕಾರ ನೌಕರರು ಮತ್ತು ಅಧ್ಯಾಪಕರ ಮೇಲೆ ನಡೆಸಿದ ಬರ್ಬರ ಧಾಳಿ ಭಾರತದ ಕಾರ್ಮಿಕ ಚಳುವಳಿಯ ಇತಿಹಾಸದಲ್ಲಿ ಹಿಂದೆಂದೂ ನಡೆದಿಲ್ಲ.

ದೇಶಾದ್ಯಂತ ಪ್ರತಿಭಟನೆ ಮತ್ತು ಅರಿವು


ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ಎಲ್ಲಾ ತೆರನ ಸೇಡಿನ, ದಬ್ಬಾಳಿಕೆಯ ಮತ್ತು ವಜಾ ಕ್ರಮಗಳನ್ನು ಬೇಷರತ್ತಾಗಿ ಹಿಂತೆಗೆದುಕೊಳ್ಳುವಂತೆ ಮತ್ತು ಸ್ವೇಚ್ಛಾನುಸಾರವಾಗಿ ಕಡಿತಗೊಳಿಸಿದ ನಿವೃತ್ತಿವೇತನ ಹಾಗೂ ಇತರ ಸೌಲಭ್ಯಗಳನ್ನು ಮರುಕಳಿಸುವಂತೆ ತಮಿಳುನಾಡು ಸರ್ಕಾರವನ್ನು ಬಲವಾಗಿ ಆಗ್ರಹಪಡಿಸಿದೆ.

ಅಖಿಲ ಭಾರತ ರಾಜ್ಯ ಸರ್ಕಾರಿ ನೌಕರರ ಒಕ್ಕೂಟ ದೇಶದ ಎಲ್ಲಾ ಕಾರ್ಮಿಕ ಸಂಘಟನೆಗಳು ನೌಕರರು ಮತ್ತು ಅಧ್ಯಾಪಕರ ಹಕ್ಕುಗಳ ಮೇಲಿನ ಇಂತಹ ಕ್ರೂರ ದಾಳಿಯ ವಿರುದ್ಧವಾಗಿ ಹಾಗೂ ಕಸಿದುಕೊಳ್ಳಲಾಗಿರುವ ಆರ್ಥಿಕ ಸೌಲಭ್ಯಗಳನ್ನು ಮರಳಿ ದೊರಕಿಸಿಕೊಡಲು ಸಿಡಿದೇಳುವಂತೆ ಆಗ್ರಹಪಡಿಸಿದೆ. ಈ ಕಸಿದುಕೊಳ್ಳುವಿಕೆ, ವಿಶ್ವಬ್ಯಾಂಕ್ ಮತ್ತು ಅಂತರ್ರಾಷ್ಟ್ರೀಯ ಹಣಕಾಸು ನಿಧಿ ಪ್ರೇರಿತ ನವ ಉದಾರವಾದಿ ಆರ್ಥಿಕ ನೀತಿಗಳ ಅನುಷ್ಠಾನದಲ್ಲೇ ಉದ್ಭವಿಸಿದೆ. ಮೇಲಾಗಿ, ಕಾರ್ಮಿಕರು ಮತ್ತು ನೌಕರರ ಸಂಘಟನಾ ಹಕ್ಕುಗಳಿಗೆ ವ್ಯತಿರಿಕ್ತವಾಗಿರುವ ಹಾಗೂ ಸರ್ಕಾರದ ಅಮಾನುಷ ಹಾಗೂ ಹಿಂದೆಂದೂ ಕೇಳದಂತಹ ದಬ್ಬಾಳಿಕೆಯನ್ನು ಸಮರ್ಥಿಸುವ ನ್ಯಾಯಾಲಯದ ತೀರ್ಪಿನ ವಿರುದ್ಧ ಎಲ್ಲಾ ಕಾರ್ಮಿಕ ಸಂಘಟನೆಗಳು ಐಕ್ಯತೆಯಿಂದ ಪ್ರತಿಭಟಿಸಬೇಕಾಗಿದೆ.

ಈ ನಡುವೆ ಅಖಿಲ ಭಾರತ ರಾಜ್ಯ ಸರ್ಕಾರೀ ನೌಕರರ ಒಕ್ಕೂಟ ಹಾಗೂ ಕೇಂದ್ರ ಸರ್ಕಾರೀ ನೌಕರರ ಒಕ್ಕೂಟ ಆಗಸ್ಟ್ 13 ರಂದು ಪ್ರತಿಭಟನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಕಾರ್ಮಿಕರು ಮತ್ತು ಪ್ರಜಾಪ್ರಭುತ್ವದಲ್ಲಿ ನಂಬಿಕೆಯುಳ್ಳ ಜನಸಮೂಹ, ಕಾರ್ಮಿಕ ವರ್ಗದ ಮೇಲಿನ ಇಂತಹ ಬರ್ಬರ ಧಾಳಿಗಳಿಗೆ ಪ್ರತಿರೋಧ ಒಡ್ಡಲು ಮುಂದಾಗಬೇಕೆಂಬ ನಿಟ್ಟಿನಲ್ಲಿ ಈ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಸರ್ಕಾರಿ ನೌಕರರು ಮತ್ತು ಇಡೀ ಕಾರ್ಮಿಕ ಚಳುವಳಿ ತಮಿಳುನಾಡಿನ ಘಟನಾವಳಿಗಳು ಹಾಗು ನ್ಯಾಯಾಂಗದ ಮನೋಭಾವಗಳಿಂದ ಸೂಕ್ತ ಪಾಠಗಳನ್ನು ಕಲಿಯಬೇಕಾಗಿದೆ. ವಿಶ್ವಬ್ಯಾಂಕ್ ಅಂತರ್ರಾಷ್ಟ್ರೀಯ ಹಣಕಾಸು ನಿಧಿಗಳಿಂದ ಪ್ರೇರಿತವಾದ ಅನರ್ಥಕಾರೀ ಆರ್ಥಿಕ ನೀತಿಗಳನ್ನು ಭಾರತ ಸರ್ಕಾರ ಅನುಸರಿಸುತ್ತಿರುವ ಹಿನ್ನಲೆಯಲ್ಲಿ ಇಂತಹ ಇನ್ನೂ ಹಲವು ಧಾಳಿ ದಬ್ಬಾಳಿಕೆಗಳು ಕಾರ್ಮಿಕ ವರ್ಗ ಮತ್ತು ಇತರ ದುಡಿಯುವ ವಿಭಾಗಗಳ ಮೇಲೆ ಎರಗಲಿವೆ ಎಂಬುದನ್ನು ಮನನ ಮಾಡಿಕೊಳ್ಳಬೇಕಾಗಿದೆ. ಸರ್ಕಾರ ಹಾಗೂ ಬಂಡವಾಳಶಾಹಿಗಳ ಕಠಿಣ ಆರ್ಥಿಕ ಆಕ್ರಮಣಗಳ ವಿರುದ್ಧ ಬೆಳೆದು ಬರುತ್ತಿರುವ ಕಾರ್ಮಿಕ, ನೌಕರರ ಮತ್ತು ಇತರ ದುಡಿಯುವ ವಿಭಾಗಗಳ ಸಮರಶೀಲ ಕಾರ್ಯಕ್ರಮಗಳನ್ನು ನಿರ್ಧಯವಾಗಿ ಮತ್ತು ದಬ್ಬಾಳಿಕೆಯಿಂದ ದಮನಮಾಡುವ ಕಾರ್ಯವನ್ನು ಕೇಂದ್ರ ಸರ್ಕಾರ ಮಾತ್ರವಲ್ಲ, ಹಲವಾರು ರಾಜ್ಯ ಸರ್ಕಾರಗಳು ಹಾಗೂ ಬಂಡವಾಳಷಾಹಿಗಳು ನಿಸ್ಸಂಶಯವಾಗಿಯೂ ತೀವ್ರಗೊಳಿಸಲಿದ್ದಾರೆ.

ಸಮಸ್ತ ಕಾರ್ಮಿಕ ಚಳುವಳಿ ತಮಿಳುನಾಡಿನ ನೌಕರರು ಮತ್ತು ಅಧ್ಯಾಪಕರ ಮೇಲೆ ನಡೆದ ಇತ್ತೀಚಿನ ಅತ್ಯಂತ ಕ್ರೂರ ಹಾಗೂ ಇದುವರೆಗೆ ನಡೆದಿಲ್ಲದ ದಾಳಿಯ ಬಗ್ಗೆ ವಿಮರ್ಶಿಸಿ, ಪಾಠಗಳನ್ನು ಕಲಿಯಬೇಕಾಗಿದೆ. ಹಿರಿಯ ಬಂಡವಾಳಶಾಹಿ ನೇತೃತ್ವವಿರುವ ದೇಶದಲ್ಲಿ, ಅದೊಂದು ಅಪರೂಪದ ಪ್ರಸಂಗವಾಗಿ ಉಳಿಯಲಾರದು. ಭಾರತದ ಪ್ರಭುತ್ವ ತನ್ನ ಆರ್ಥಿಕ ಆಕ್ರಮಣಗಳ ವಿರುದ್ಧ ಯಾವುದೇ ಪ್ರತಿಭಟನೆಯನ್ನು ಸಹಿಸಲಾರದ ಮಟ್ಟಕ್ಕೆ ತಲುಪಿದೆ. ತಮಿಳುನಾಡಿನ ತೆರದಲ್ಲಿಯೇ ಹೋರಾಟನಿರತ ಕಾರ್ಮಿಕರ ಮೇಲೆ ಅದು ತೀವ್ರದಾಳಿ ನಡೆಸುತ್ತದೆ.



ಬಂಡವಾಳಶಾಹಿಗಳ ಹಿತಾಸಕ್ತಿಗಳ ರಕ್ಷಿಸುವಲ್ಲಿ ಅದರ ಅತೀವ ವರ್ಗ ಪಕ್ಷಪಾತ ಇನ್ನಷ್ಟು ಪ್ರಖರವಾಗಿ ಮೂಡಿಬರಲಿದೆ. ಈ ಪ್ರಭುತ್ವದ ಯಾವುದೇ ಅಂಗದಿಂದ ನಿಷ್ಪಕ್ಷಪಾತ ವರ್ತನೆಯನ್ನು ಯಾರೂ ನಿರೀಕ್ಷಿಸಲಾಗದು.

ಈ ಪರಿಸ್ಥಿತಿಯಲ್ಲಿ ಅಗತ್ಯವಾಗಿರುವುದೇನು? ವರ್ಗ ಪ್ರಜ್ಞೆಯನ್ನು ಇನ್ನಷ್ಟು ತೀಕ್ಷ್ಣಗೊಳಿಸಿಕೊಂಡ ಕಾರ್ಮಿಕ ವರ್ಗ ಮತ್ತು ಇತರ ದುಡಿಯುವ ಜನವಿಭಾಗ, ಪರಿಸ್ಥಿತಿಯನ್ನು ಸರಿಯಾಗಿ ಅಂದಾಜಿಸಿ, ಅತ್ಯಂತ ಹೆಚ್ಚು ವಿಸ್ತಾರವಾದ ಐಕ್ಯತೆಯೊಂದಿಗೆ ಕಾರ್ಯ ಪ್ರವೃತ್ತರಾಗುವುದು. ಯಾವುದೇ ಸಂದರ್ಭದಲ್ಲೂ, ಕಾರ್ಮಿಕ ವರ್ಗ ತನ್ನ ಕಾರ್ಮಿಕ ಹಕ್ಕುಗಳನ್ನು, ಮುಷ್ಕರದ ಹಕ್ಕು ಸೇರಿದಂತೆ, ಬಿಟ್ಟುಕೊಡದು.

ಕನ್ನಡಕ್ಕೆ :
ರತ್ನಾಕರ ಶೆಟ್ಟಿ


ಆರ್ಥಿಕ ನೀತಿಗಳ ವಿರುದ್ಧ .....

ಪುಟ 5 ರಿಂದ

24967 ಕೋಟಿ ರೂ.ಗಳಿಂದ 38299 ಕೋಟಿ ರೂ.ಗಳಿಗೆ, ಅಂದರೆ ಶೇ. 58.40 ರಷ್ಟು ಏರಿತು. ಈ ಲಾಭ ಒಟ್ಟು ನಿವ್ವಳ ಮೌಲ್ಯದ ಶೇ 16.49 ಆಗುತ್ತದೆ. ನಿವ್ವಳ ಮೌಲ್ಯ ಶೇ 31.47 ರಷ್ಟು ಹೆಚ್ಚಿತು. ಸಾರ್ವಜನಿಕ ವಲಯದ ಘಟಕಗಳಿಂದ ಕೇಂದ್ರ ಸರ್ಕಾರದ ಖಜಾನೆಗೆ ಅಬಕಾರಿ ಸುಂಕ, ಸೀಮಾ ಸುಂಕ, ಕಂಪನಿ ತೆರಿಗೆ, ಕೇಂದ್ರ ಸರ್ಕಾರ ಸಾಲದ ಮೇಲಿನ ಬಡ್ಡಿ, ಡಿವಿಡೆಂಡ್ ಮತ್ತಿತರ ತೆರಿಗೆ, ಸುಂಕಗಳಿಂದ ಬಂದ ಕೊಡಗೆ 2000-01 ರಲ್ಲಿ 61037 ಕೋಟಿ ರೂ., 2001-02 ರಲ್ಲಿ 62753 ಕೋಟಿ ರೂ. ಅಂದರೆ 1716 ಕೋಟಿ ರೂ. ನ ಹೆಚ್ಚಳ. ಇವೆಲ್ಲಾ 2001-02 ರ ಸಾರ್ವಜನಿಕ ವಲಯದ ಘಟಕಗಳ ಸರ್ವೆಯಿಂದ ದೊರೆತ ಅಂಕಿ ಅಂಶಗಳು

ಈಗ ಎರಡು ಪ್ರಮುಖ ತೈಲ ಕಂಪನಿಗಳಾದ ಬಿಪಿಸಿಎಲ್ ಮತ್ತು ಹೆಚ್‌ಪಿಸಿಎಲ್‌ಗಳನ್ನು ಈಗ ಖಾಸಗೀಕರಣದ ಕರಿಮೋಡ ಆವರಿಸಿದೆ. ಇವೆರಡೂ ಉತ್ತಮ ಕಾರ್ಯನಿರ್ವಹಣೆ ತೋರಿಸಿದ ಸಂಸ್ಥೆಗಳು. ಕಳೆದ ಕೆಲವು ವರ್ಷಗಳಲ್ಲಿ ಬಿಪಿಸಿಎಲ್ ನ ವಹಿವಾಟು 42294 ಕೋಟಿ ರೂ., ತೆತ್ತ ಅಬಕಾರಿ ಸುಂಕ 10513 ಕೋಟಿ ರೂ. ಹೆಚ್‌ಪಿಸಿಎಲ್‌ನ ವಹಿವಾಟು 45286 ಕೋಟಿ ರೂ., ತೆತ್ತ ಅಬಕಾರಿ ಸುಂಕ 11246 ಕೋಟಿ ರೂ. ಅಂದರೆ ಒಟ್ಟು 87580 ಕೋಟಿ ರೂ.ಗಳ ವಹಿವಾಟು ಹಾಗೂ 21759 ಕೋಟಿ ರೂ.ಗಳಷ್ಟು ಅಬಕಾರಿ ಸುಂಕಗಳನ್ನು ತೆರುವ ಈ ಎರಡು ಕಂಪನಿಗಳನ್ನು ಖಾಸಗಿಯವರಿಗೆ ಕೊಡುವ ಹುನ್ನಾರ ನಡೆದಿದೆ.

ಖಾಸಗೀಕರಣದ ನಂತರ ಪರಿಸ್ಥಿತಿಯ ಬಗ್ಗೆ ಒಂದು ಆಘಾತಕಾರಿ ಅಂಶ ಈಗ ಬೆಳಕಿಗೆ ಬಂದಿದೆ. ಇದನ್ನು ತಿಳಿಸಿರುವುದು ಶಕ್ತಿಶಾಲಿ ಪ್ರಧಾನ ಮಂತ್ರಿಗಳ ಕಛೇರಿ ಕಳೆದ ವರ್ಷ ನೇಮಿಸಿರುವ ಒಂದು ಸಮಿತಿ. ಕೆಲವು ಘಟಕಗಳ ಖಾಸಗೀಕರಣದ ನಂತರದ ಸ್ಥಿತಿಯನ್ನು ಅಧ್ಯಯನ ಮಾಡಲು ಈ ಸಮಿತಿಯನ್ನು ನೇಮಿಸಲಾಗಿತ್ತು. ಈ ಸಮಿತಿ ಬಾಲ್ಕೊ ಮತ್ತು ಮಾಡರ್ನ್ ಫುಡ್‌ನಲ್ಲಿನ ಪರಿಸ್ಥಿತಿಗಳನ್ನು ಪರಿಶೀಲಿಸಲು ಆ ಘಟಕಗಳಿಗೆ ಭೇಟಿ ನೀಡಿತು. ಬಾಲ್ಕೊವನ್ನು ವಹಿಸಿಕೊಂಡ 'ಸ್ಟೆರ್ಲೈಟ್ ನೌಕರರಿಗೆ ಸ್ವಯಂನಿವೃತ್ತಿ ಯೋಜನೆಯನ್ನು ಹೇರಿ ಹಣವನ್ನು ಐದು ಕಂತುಗಳಲ್ಲಿ ನೀಡುವುದಾಗಿ ತಿಳಿಸಿತು.... ಇದ[illegible] ಒಪ್ಪದವರಿಗೆ ವರ್ಗಾವಣೆಯ ತೊಂದರ[illegible] ಕೊಡಲಾಯಿತು" ಎಂದು ಈ ಸಮಿತಿ ಹೇಳಿದ[illegible] ಮಾಡರ್ನ್ ಫುಡ್ ಬಗ್ಗೆ ಹೇಳುತ್ತಾ ಕೇವಲ ಎರಡ[illegible] ವರ್ಷಗಳಲ್ಲಿ ಹಿಂದೂಸ್ತಾನ್ ಲೀವರ್ ಲಿಮಿಟೆಡ[illegible] ಸಿಬ್ಬಂದಿ ಸಂಖ್ಯೆಯನ್ನು 1650 ರಿಂದ 850 [illegible] ಇಳಿಸಿತು ಎಂಬುದು ನಂಬಲಾಗದ ಸಂಗತಿ. [illegible]



ಪ್ರಕ್ರಿಯೆಯಲ್ಲಿ ದಿಲ್ಲಿಯ ಯಂತ್ರಗಳನ್ನು ಜಯಪು[illegible] ಸಾಗಿಸಲಾಯಿತು. ಫರಿದಾಬಾದ್ ಘಟಕವ[illegible] ಈಗಾಗಲೇ ಮುಚ್ಚಲಾಗಿದೆ" ಎಂದಿದೆ.

ಸಾಮೂಹಿಕ ಹೋರಾಟಗಳು

ಇಂತಹ ಎಲ್ಲಾ ಧೋರಣೆಗಳ[illegible] ಬದಲಿಸುವಂತೆ ಮಾಡಲು ಸಿಪಿಐ(ಎಂ) ನೇತೃ[illegible] ಎಲ್ಲಾ ಸಾಮೂಹಿಕ ಸಂಘಟನೆಗಳು, ಕಾ[illegible] ಸಂಘಟನೆಗಳು ಒಂದು ದೇಶವ[illegible] ಹೋರಾಟದಲ್ಲಿ ಭಾಗವಹಿಸುವಂತೆ ಮಾಡ[illegible] ವಿವಿಧ ಜನವಿಭಾಗಗಳನ್ನು ಸ್ಥಿರಗೊಳಿಸಬೇಕಾ[illegible] ಈ ಅವಧಿಯಲ್ಲಿ ಭಾರತ ಸರ್ಕಾರದ ಆ[illegible] ಧೋರಣೆಗಳ ವಿರುದ್ಧ ಒಂದು ತೀವ್ರ ಪ್ರ[illegible] ನಡೆಸಬೇಕು. ವಿಶ್ವಸಂಸ್ಥೆಯ ಯುಎನ್‌ಡಿ[illegible] ಅಂಕಿ-ಅಂಶಗಳು ಭಾರತದ ಆರ್ಥಿಕ 'ತ್ವರಿತ' [illegible] ಸಾಧಿಸಿದೆ ಎಂಬ ಎನ್‌ಡಿಎ ಭಾಗಿದಾರರ [illegible] ಹೇಳಿಕೆಗಳನ್ನು ಈಗಾಗಲೇ ಬಯಲಿಗೆಳೆದಿದೆ. [illegible] ತ್ವರಿತ ಪ್ರಗತಿಯು ಎನ್‌ಡಿಸಿ ಮಾನವ ಅಭಿ[illegible] ಸೂಚ್ಯಂಕಗಳ ಪ್ರಕಾರ ಭಾರತದ ಸ್ಥಾನವನ್ನು [illegible] ದೇಶಗಳಲ್ಲಿ 124 ರಿಂದ 127 ಕ್ಕೆ ಇಳಿ[illegible] ಸದ್ಯದಲ್ಲೇ ಬರಲಿರುವ ರಾಷ್ಟ್ರವ[illegible] ಹೋರಾಟದಲ್ಲಿ ಹೆಚ್ಚೆಚ್ಚು ಜನಗಳನ್ನು ಆಕರ್ಷಿ[illegible] ಭಾರತದ ಶ್ರಮಜೀವಿಗಳ ಬಗ್ಗೆ ಒಂದು ದ[illegible] ಪ್ರಚಾರ ನಡೆಸಬೇಕಾಗಿದೆ.

ಅಂಕಿ ಸಂಖ್ಯಾ

ಸರಾಸರಿ ಆಹಾರ ಸೇವನೆ ಪ್ರಮಾಣ ಕುಸಿ[illegible]

ಸಾಮಾನ್ಯವಾಗಿ ಎಲ್ಲರೂ ಹೇಳುವುದು 'ದೇಶ ಅಭಿ[illegible] ಹೊಂದುತ್ತಿದೆ. ಜನರ ಆದಾಯ ಹೆಚ್ಚಾಗುತ್ತಿದೆ. ಎಂದು ಜ[illegible] ಆದಾಯ ಹೆಚ್ಚುತ್ತಿದ್ದರೆ ಜನರು ತಿನ್ನುವ ಆಹಾರದ ಪ್ರಮಾ[illegible] ಹೆಚ್ಚಾಗಬೇಕಾಗಿತ್ತು. ಆದರೆ ಈ ಪ್ರಮಾಣ ತೀ[illegible] ಕಡಿಮೆಯಾಗುತ್ತಿದೆ. (ಕೆಳಗಿನ ಅಂಕಿ ಅಂಶಗಳನ್ನು ನೋ[illegible] 1972-73ರಲ್ಲಿ ಪ್ರತಿಯೊಬ್ಬ ವ್ಯಕ್ತಿ 175 ಕೆ.ಜಿ. ಆಹಾರ ಸೇವಿಸುತ್ತಿದ್ದರೆ, 1999-2000 ದಲ್ಲಿ [illegible] ಕೆ.ಜಿ.ಗೆ ಇಳಿದಿದೆ.

ವರ್ಷ	ಪ್ರತಿಯೊಬ್ಬ ವ್ಯಕ್ತಿ ಪ್ರತಿವರ್ಷ ಬಳಸುತ್ತಿದ್ದ ಆಹಾರ.
1972-73	175 ಕೆ.ಜಿ
1982-83	170 ಕೆ.ಜಿ
1987-88	166 ಕೆ.ಜಿ
1990-91	154 ಕೆ.ಜಿ
1999-2000	147 ಕೆ.ಜಿ

ಆಶ್ಚರ್ಯದ ಸಂಗತಿ ಎಂದರೆ, 1972-73ರಿಂದ 1990-91ರ ಅವಧಿಯಲ್ಲಿ ಆಹಾರದ ಸರಾ[illegible] ಉತ್ಪಾದನಾ ಪ್ರಮಾಣ ಪ್ರತಿಯೊಬ್ಬ ವ್ಯಕ್ತಿಗೆ ಪ್ರತಿ ವರ್ಷಕ್ಕೆ 135 ಕೆ.ಜಿ. ಇದ್ದುದು 165 [illegible] ಆಗಿದೆ. ಜಾಗತೀಕರಣದ ಪ್ರಕ್ರಿಯೆ ನಂತರ (1991) ಉತ್ಪಾದನೆಯೂ ಕುಂಠಿತಗೊಂಡಿದೆ. ಅ[illegible] ಬಡಜನರ ಕೂಲಿ ಕಡಿತ, ಕೆಲಸದ ಕಡಿತ ಆಗಿರುವುದರಿಂದ ಅವರು ಬಳಸುವ ಆಹಾರ ಪ್ರಮಾ[illegible] ತೀವ್ರ ಕುಸಿತ ಉಂಟಾಗಿದೆ. ಆದ್ದರಿಂದಲೇ ಗೋದಾಮುಗಳಲ್ಲಿ ಆಹಾರ ಧಾನ್ಯ[illegible] ಕೊಳೆಯುತ್ತಿರುವುದು. ಇತ್ತ ಬಡಜನರು ಆಹಾರವಿಲ್ಲದೆ, ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದ[illegible]

ದಕ್ಷಿಣ ಕನ್ನಡ: ಬಿಜೆಪಿಯ ಭೂಗತ ನಂಟು

ಪೋಲೀಸ್ ಇಲಾಖೆಯ ಸಕಾಲಿಕ ಮಧ್ಯಪ್ರವೇಶದಿಂದಾಗಿ ಭೀಕರ ಕೊಲೆಗಳ ಸಂಚೊಂದು ವಿಫಲವಾಯಿತು. ಕೊಲೆಪಾತಕಿಗಳನ್ನು ಮಾರಕಾಸ್ತ್ರಗಳ ಸಮೇತ ಚಾಣಾಕ್ಷತನದಲ್ಲಿ ಬಂಧಿಸಲಾಯಿತು. ವಿಚಾರಿಸಿದಾಗ ಈ ಪಾತಕಿಗಳಿಗೂ, ಬಿಜೆಪಿ ನಾಯಕರಿಗೂ ಇರುವ ನಿಕಟ ಸಂಬಂಧ ಬಟ್ಟಬಯಲಾಯಿತು. ಇದರಿಂದ ಕುಪಿತರಾದ ದೇಶಭಕ್ತ, ಧರ್ಮಬೀರುಗಳು ಕೊಳಕು ಮುಚ್ಚಿಕೊಳ್ಳಲು ಪೊಲೀಸ್ ಅಧಿಕಾರಿಗಳ ಮೇಲೆ ಧಾಳಿ ಆರಂಭಿಸಿದ್ದಾರೆ. ಆದರೆ ಆಳುವ ಕಾಂಗ್ರೆಸ್ ಈಗ ಮೌನವಹಿಸಿದೆಯೇಕೆ? ಈಗ ಸಮಾಜದಲ್ಲಿ ಶಾಂತಿ, ಕೋಮುಸೌಹಾರ್ದತೆಗಾಗಿ ತುಡಿವ ಜನತೆ ಕ್ರಿಯಾಶೀಲರಾಗಬೇಕಾದ ಕಾಲವಿದು. ಕಲ್ಲಡ್ಕ ಘಟನೆ ಸುತ್ತಮುತ್ತ....

ಜುಲೈ ತಿಂಗಳ 19 ರ ಶನಿವಾರ, ದ.ಕ ಜಿಲ್ಲೆಯ ಇತಿಹಾಸದಲ್ಲಿ ರಕ್ತಸಿಕ್ತ ರಾಜಕೀಯ ಕೊಲೆಗಳೆರಡರ ದಿನವಾಗುವುದು ಸ್ವಲ್ಪದರಲ್ಲೇ ಪೋಲೀಸರ ಮಧ್ಯ ಪ್ರವೇಶದಿಂದ ತಪ್ಪಿಹೋಯಿತು. ಕಲ್ಲಡ್ಕದಲ್ಲಿ ಸಂಘ ಪರಿವಾರದ 'ಬ್ಯಾಲೆನ್ಸ್‌ಶೀಟ್' ನಲ್ಲಿ ಈಗಾಗಲೇ ಎರಡು ಕೊಲೆಗಳ ಲೆಕ್ಕಾಚಾರಕ್ಕೆ ಮತ್ತೆ ಎರಡು ಸೇರ್ಪಡೆಗೊಂಡು ಅದು ನಾಲ್ಕಾಗುತ್ತಿತ್ತು. ಶನಿವಾರ ಮುಂಜಾನೆ 5.00 ಗಂಟೆಗೆ 'ರೌಡಿ ನಿಗ್ರಹ ದಳ'ದ ಇನ್ಸ್‌ಪೆಕ್ಟರ್ ವಿನಯ್ ಗಾಂವ್ಕರ್‌ರವರ ನೇತೃತ್ವದಲ್ಲಿ ಮನೆಯೊಂದರಲ್ಲಿ ಅಡಗಿ ಕುಳಿತ್ತಿದ್ದ ಆರು ಮಂದಿಯ ತಂಡವನ್ನು ಭಾರಿ ಭಯಾನಕ ಆಯುಧಗಳೊಂದಿಗೆ ಬಂಧಿಸಿದ್ದಾರೆ. ಇದರಿಂದ ಶಾಂತಿಪ್ರಿಯರಲ್ಲಿ ಪೋಲೀಸರ ಬಗ್ಗೆ ಅಭಿಮಾನ ಉಂಟಾಗಿದೆ. ಇವರೆಲ್ಲರೂ ಪೊಲೀಸ್ ತನಿಖೆಯಲ್ಲಿ ಸ್ಥಳೀಯ ಬಿಜೆಪಿ ನಾಯಕರಿಂದ ಹಣಕಾಸು ನೆರವು ಪಡೆದು ಕೃತ್ಯಕ್ಕೆ ಹೊಂಚು ಹಾಕಿರುವುದಾಗಿ ಹೇಳಿದ್ದಾರೆ. ಇದೇ ಪ್ರಕರಣಕ್ಕೆ ಸಂಬಂಧಿಸಿ ಬಿಜೆಪಿಯ ಏಕೈಕ ಜಿಲ್ಲಾ ಪಂಚಾಯತ ಸದಸ್ಯ ಪದ್ಮನಾಭ ಕೊಟ್ಟಾರಿ ಸೇರಿದಂತೆ, ಶಿಕ್ಷಕ ರಾಧಾಕೃಷ್ಣ ಅಡ್ಯಂತಾಯರೂ ಸೇರಿದಂತೆ ಇತರ ಇಬ್ಬರ ಮೇಲೂ ಅಕ್ರಮ ಶಸ್ತ್ರಾಸ್ತ್ರ ಕಾಯಿದೆಯಡಿಯಲ್ಲಿ ಕೇಸು ದಾಖಲಾಗಿದೆ.

ದಿಕ್ಕುತಪ್ಪಿಸುವ ತಂತ್ರಗಳು

ಕೊಲೆ ಆರೋಪದಲ್ಲಿ ಬಂಧಿತರಾದ ಸಂಗತಿ ತಿಳಿದುಬಂದ ಕೂಡಲೇ ಬಿಜೆಪಿಯ ನಾಯಕರ ಗಢಾಣ ತನ್ನ 'ಕೊಲೆ ರಾಜಕೀಯದ ಬಣ್ಣ' ಬಯಲಾಗುವುದನ್ನು ತಪ್ಪಿಸಲು ಏನೆಲ್ಲಾ ತಂತ್ರ, ಪ್ರತಿತಂತ್ರ, ಪ್ರಚಾರ ಪ್ರಕ್ಷೋಭೆ ಸಾಧ್ಯವೋ ಅದೆಲ್ಲವನ್ನೂ ಮಾಡಿ ಪೋಲೀಸರ ತನಿಖೆಯ ದಾರಿ ತಪ್ಪಿಸಲು ಒತ್ತಡ ಹೇರಲು ಪ್ರಯತ್ನಿಸಿದೆ. ಆದರೆ ಎಸ್ಪಿ ಸೀಮಂತ್ ಸಿಂಗರವರು ಯಾವುದಕ್ಕೂ ಹೆದರದೆ ನೇರವಾಗಿ ಕಾನೂನು ಕ್ರಮ ಮುಂದುವರಿಸಿದ್ದಾರೆ. ಸಂಘಪರಿವಾರದ 'ಭಂಗ' ತರುವ ಈ ಪ್ರಕ್ರಿಯೆಯಲ್ಲಿ ಮಾಧ್ಯಮಗಳ ಪಾಲು ಪಡೆದುಕೊಂಡಿರುವುದು ಕೋಮುವಾದಿಗಳಿಗೆ ಸಂತೋಷ ತಂದಿದೆ.


ಕ್ರಿಮಿನಲ್ ಕೃತ್ಯದ ವೈಭವೀಕರಣ

ಅಂದಿನಿಂದಲೇ (19 ಜುಲೈ) ಇದನ್ನೇ ರಾಜಕೀಯ ಮಾಡುತ್ತಿರುವ ಬಿಜೆಪಿ ಹಾಗೂ ಮಂತ್ರಿ ಪರಿವಾರ ನಿರಂತರ ಕಾರ್ಯಕ್ರಮ ಹಮ್ಮಿಕೊಂಡು 'ತಾನು ನಿರಪರಾಧಿ' ಎಂದು ಜನರನ್ನು ನಂಬಿಸಲು ಪ್ರಯತ್ನಿಸುತ್ತಿದೆ. ಮಹಿಳೆಯರಿಂದ ಜಿಲ್ಲಾ ಕೇಂದ್ರದಲ್ಲಿ ಪ್ರತ್ಯೇಕ ಧರಣಿ ಸಂಘಟಿಸಿದೆ. ಜಾಮೀನನಲ್ಲಿ ಬಿಡುಗಡೆಗೊಂಡ ಬಂಧಿತರನ್ನು - ಹೂಹಾರ ಹಾಕಿ ಸ್ವಾಗತಿಸಿ ಮೆರವಣಿಗೆ ನಡೆಸಿ ಕ್ರಿಮಿನಲ್ ಕೃತ್ಯವನ್ನು ವೈಭವೀಕರಿಸುತ್ತಿದೆ. ವಿಧಾನಸಭೆಯಲ್ಲಿ ಜಿಲ್ಲಾ ಎಸ್ಪಿಯವರ ಬದಲಾವಣೆಗೆ ರಂಪಾಟ ಎಬ್ಬಿಸಿದೆ. ಮತ್ತೆ ಆಗಸ್ಟ್ 14 ರಂದು ಸಾವಿರಾರು ಸಂಖ್ಯೆಯಲ್ಲಿ ಪ್ರತಿಭಟನೆ ನಡೆಸಲು ತಯಾರಿ ಸಾಗುತ್ತಿದೆ. ಈ ಪ್ರಕರಣವನ್ನು ಕಲ್ಲಡ್ಕ ದೌರ್ಜನ್ಯ ಪ್ರಕರಣ ಎಂದು ಮಾಧ್ಯಮದಲ್ಲಿ ಮಾಮೂಲೀಕರಿಸಿ ಅದರ ನಿಜ ಸ್ವರೂಪವನ್ನು ಜನರಿಗೆ ತಿಳಿಸದೆ ತನ್ನ ತಿರುಚಿದ ವ್ಯಾಖ್ಯಾನವನ್ನು ತನ್ನ ಜನರಿಗೆ ಉಣಬಡಿಸುತ್ತಿದೆ. ಬಹುಶಃ ಕಲ್ಲಡ್ಕ ಪ್ರಕರಣ ಚುನಾವಣೆ ತನಕ ಮುಂದುವರಿಯಲೂಬಹುದು.

ರಾಜಕೀಯ ತಂತ್ರ

ಇತ್ತ ತನ್ನ ಸ್ಥಳೀಯ ನಾಯಕರನ್ನು ಮುಗಿಸಲು ಸ್ಕೆಚ್ ಹಾಕಿರುವ ಬಿಜೆಪಿಯ ತಂತ್ರದ ಬಗ್ಗೆ ಅವರು ಪೋಲೀಸ್‌ರ ಮೇಲೆ ಹರಿಹಾಯುತ್ತಿರುವ ಸನ್ನಿವೇಶದಲ್ಲಿ ಕಾಂಗ್ರೆಸ್ಸು ಸಹಜವಾಗಿಯೇ ಮೌನವಹಿಸಿದೆ. ಉಸ್ತುವಾರಿ ಮಂತ್ರಿ ರೈ ಯವರು ಪತ್ರಿಕಾಗೋಷ್ಠಿಯಲ್ಲಿ ನೀಡಿರುವ ಹೇಳಿಕೆ ಕೇವಲ ಹಿಂದೂ ಓಟು ಬ್ಯಾಂಕ್ ರಾಜಕೀಯವೇ ಹೊರತು ಬಿಜೆಪಿಯ ಕೊಲೆ ರಾಜಕೀಯ ಹೂರಣವನ್ನು ಬಯಲು ಮಾಡುವುದಿಲ್ಲ. ಮಾನವತಾ ವೇದಿಕೆ ಮತ್ತು ಇತರ ಕೆಲ ಸಂಘಟನೆಗಳು ತಡವಾಗಿಯಾದರೂ ವಸ್ತುನಿಷ್ಠ ಆಧಾರದ ಮೇಲೆ ಪ್ರತಿಕ್ರಿಯೆ ನೀಡುತ್ತಿವೆ. ಒಂದರ್ಥದಲ್ಲಿ ಪೊಲೀಸ್ ಮೆಷಿನರಿ ಏಕ ದಾಳಿಗೆ ತುತ್ತಾಗಿದೆ. ಬಿಜೆಪಿ ಈ ರೀತಿ ತೀವ್ರ ಸ್ವರೂಪದ ದಾಳಿ ಎಬ್ಬಿಸಿ ಪೊಲೀಸರನ್ನು, ಜಾತ್ಯಾತೀತರನ್ನು ನಿಷ್ಕ್ರಿಯಗೊಳಿಸಿ ಅವರ ಉಸಾಬರಿಗೆ ಹೋಗದೆ ಕೋಮು ರಾಜಕೀಯ ಮಾಡಲು ವೇದಿಕೆ ನಿರ್ಮಾಣದ ತಂತ್ರಗಾರಿಕೆಯೂ ಇದೆ. ಒಟ್ಟಿನಲ್ಲಿ ಮಂಗಳೂರಿನ ಸುತ್ತ ಏಳೆಂಟು ವಿಧಾನಸಭಾ ಕ್ಷೇತ್ರಕ್ಕೆ ಗೆಲ್ಲಲು ಬೇಕಾಗುವಷ್ಟು 'ಕೋಮು ಸಂಧಿಗ್ಧತೆಯ ವಿಷ ಸಿಂಪರಣೆ' ಏನೆಂದೂ ಅಡೆತಡೆಯಿಲ್ಲದೆ ಮುಂದುವರೆಯುವ ಸಾಧ್ಯತೆ ಹೆಚ್ಚಾಗಿದೆ.

■ ಅವಭೃತಕುಮಾರ್



ಕಾಂಗ್ರೆಸ್ ಮೌನದ ಅರ್ಥವೇನು?

ಮೇ ತಿಂಗಳಲ್ಲಿ ಒಂದು ಕೊನೆಯ ಶುಕ್ರವಾರ ಮಧ್ಯಾಹ್ನದ ನಮಾಜಿಗೆಂದು ಮಸೀದಿಗೆ ತೆರಳಿದ್ದ ಮಂಗಳೂರು ತಾಲೂಕು ಪಂಚಾಯತ್ ಅಧ್ಯಕ್ಷ, ಕಾಂಗ್ರೆಸ್ಸು ಪಕ್ಷದ ಜನಪ್ರಿಯ ಅಲ್ಪ ಸಂಖ್ಯಾತ ಸಮುದಾಯದ ಮುಂದಾಳು ಎಂ.ಡಿ. ಜಬ್ಬಾರ್‌ರವರನ್ನು ಎಂಟು ಮಂದಿಯ ತಂಡ ಹೆಂಡತಿ ಮತ್ತು ಮಗಳ ಕಣ್ಣ ಮುಂದೆ ತಾಲೂಕು ಪಂಚಾಯತ್ ಕಛೇರಿಯ ಮುಂಭಾಗದಲ್ಲಿ ಬರ್ಬರವಾಗಿ ಹತ್ಯೆ ಮಾಡಿ ಪರಾರಿಯಾಯಿತು. ಗುರುಪುರ ಪ್ರದೇಶದಲ್ಲಿ ಇದಕ್ಕಿಂತ ಮೊದಲೇ ಎರಡೂ ಅಲ್ಪ ಸಂಖ್ಯಾತ ಯುವಕರನ್ನು ಕೊಲೆ ಮಾಡಿದ ಭಜರಂಗ ದಳದವರ ಕೃತ್ಯವೇ ಇದಾಗಿದೆ ಎಂಬ ಸಂದೇಹ ಅಲ್ಪ ಸಂಖ್ಯಾತರ ಮಧ್ಯೆ ಮತ್ತು ಜನರ ಸಾಮಾನ್ಯರ ಮದ್ಯೆ ಬೆಳೆದು ಬಂತು. ಸಹಜವಾಗಿಯೇ ಭಜರಂಗದಳದ ಯೋಜನಾ ಬದ್ಧ ಕೃತ್ಯ ಇದೆಂಬುದು ಹತ್ಯೆಯಲ್ಲಿ ಭಾಗಿಯಾದವರ ಪೂರ್ವಾಪರ ಹಿನ್ನೆಲೆ ಮತ್ತು ಕೋರ್ಟು ವ್ಯವಹಾರಗಳ ಹಿನ್ನೆಲೆಯಿಂದ ಖಾತ್ರಿಗೊಂಡಿದೆ. ಬಜರಂಗದಳದ ಪಾಂಡೇಶ್ವರ ಪ್ರದೇಶದ ನಾಯಕ ಶಿವಾನಂದ ಮೆಂಡನ್ ಸ್ಕೆಚ್ ರೂಪಣೆಯಲ್ಲಿ ಪ್ರಮುಖ ಪಾತ್ರವಹಿಸಿ ಈಗ ಕಂಬಿ ಎಣಿಸುತ್ತಿದ್ದಾನೆ.

ಜಿಲ್ಲೆಯ ರಾಜಕೀಯ ವಲಯದಲ್ಲಿ ಬಹುಶಃ ಇದೊಂದು ಅತೀ ದೊಡ್ಡ ರಾಜಕೀಯ ಕೊಲೆಯಾಗಿದೆ. ಈತನಕ ಯಾವುದೇ ಪಕ್ಷದ ಪ್ರಮುಖ ನಾಯಕನ ಹತ್ಯೆಯಾಗಿಲ್ಲ. ಎಂ.ಡಿ. ಜಬ್ಬಾರ್ ಜನಪ್ರಿಯ ವ್ಯಕ್ತಿ ಮಾತ್ರವಲ್ಲ, ದ.ಕ. ಜಿಲ್ಲಾ ಉಸ್ತುವಾರಿ ಸಚಿವರಾದ ರಮಾನಾಥ ರೈ ಯವರ ಆಪ್ತ ವಲಯದಲ್ಲಿ ಪ್ರಮುಖರಾಗಿ ಗುರುತಿಸಿ ಕೊಂಡವರಾಗಿದ್ದರು. ಬಹುದೊಡ್ಡ ಅಲ್ಪ ಸಂಖ್ಯಾತ ಸಮುದಾಯವನ್ನು ಕಾಂಗ್ರೆಸ್ಸು ಪಕ್ಷದ ಪಕ್ಷ ಅಣಿನೆರೆಸುತ್ತಿದ್ದ ವ್ಯಕ್ತಿ. ಇಂತಹ ಪ್ರಮುಖ ನಾಯಕನ ಹತ್ಯೆಯನ್ನು ಕಾಂಗ್ರೆಸ್ಸು 'ರಾಜಕೀಯ ಹತ್ಯೆ' ಎಂದು ಪರಿಗಣಿಸಲ್ಪಡಲಿಲ್ಲ ಮಾತ್ರವಲ್ಲ ಇದರ ಹಿಂದಿರುವ ಕೋಮುವಾದಿ ಸಂಘಟನೆಗಳ ಶಡ್ಯಂತ್ರವನ್ನು ಅಪ್ಪಿತಪ್ಪಿಯೂ ಜನತೆಗೆ ತಿಳಿಸುವ ಕೆಲಸ ಮಾಡಲಿಲ್ಲ. ಪೊಲೀಸ್ ಇಲಾಖೆಯಂತೂ ತನ್ನ ಮಾಮೂಲಿ ಧಾಟಿಯಲ್ಲಿ ಹಳೆ ವೈಷಮ್ಯಕ್ಕಾಗಿ ಕೊಲೆ ನಡೆದಿದೆ ಎಂದು ಹೇಳಿ ತನ್ನ ಶಾಸ್ತ್ರ ಮುಗಿಸಿ ಕೈ ತೊಳೆದುಕೊಂಡಿದೆ. ಅನಂತರದ ದಿನಗಳಲ್ಲಿ ಕೊಲೆಯಾದ ಸ್ಥಳದಲ್ಲಿ ದೊರೆತ ಪಿಸ್ತೂಲೊಂದನ್ನು ನೆಪಮಾಡಿ ಮಾಧ್ಯಮಗಳಲ್ಲಿ ಮತ್ತು ಜಿಲ್ಲಾ ಕ್ರೈಂ ಪತ್ರಿಕೆಗಳಲ್ಲಿ ಎಂ.ಡಿ. ಜಬ್ಬಾರ್‌ರವರನ್ನು ಸಹ ಓರ್ವ ಕ್ರಿಮಿನಲ್ ಎಂದು ಚಿತ್ರಿಸಿ ನಂಬಿಸಲಾಯಿತು. ಕೆಲವರಿಂದ 'ನರಸತ್ತ' ಎಂಬ ಪದವಿಯನ್ನು ಪಡೆದುಕೊಂಡ ಕಾಂಗ್ರೆಸ್ ಈ ಬಗ್ಗೆ ಸ್ಪಷ್ಟನೆಯಾಗಲೀ ಸತ್ಯಾಂಶವನ್ನಾಗಲೀ ತಿಳಿಸದೆ ಅತ್ಯುತ್ತಮ ಓಟಿನ ಜಾಣ್ಮೆ ತೋರಿಸಿದೆ.

ಈ ಹತ್ಯೆಯ ಬಗ್ಗೆ ಜಿಲ್ಲೆಯ ಜನರಿಗೆ ನಿಜಾಂಶವನ್ನು ತಿಳಿಸಬೇಕಾದ ಕಾಂಗ್ರೆಸ್ಸು ಪಕ್ಷ 'ಉದ್ದೇಶ ಪೂರ್ವಕ'ವಾಗಿ ಹಿಂದೂ ಮತ ರಾಜಕೀಯವನ್ನು ಬಳಸಿಕೊಂಡಿದೆ. ಈ ಕೊಲೆಯ ಬಗ್ಗೆ ಒಂದೇ ಒಂದು ರಾಜಕೀಯ ನಿರ್ಣಯವಾಗಲೀ, ಹೇಳಿಕೆಯಾಗಲೀ ನೀಡಿಲ್ಲ. ಬದಲಾಗಿ ಒಂದು ವಾಕ್ಯದ ಸಂತಾಪ ಹೇಳಿಕೆಯೊಂದನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿ ಆ ಹೇಳಿಕೆಗೆ ಐವತ್ತು ಅರವತ್ತು ಮಂದಿಯ ಹೆಸರನ್ನು ಸೇರಿಸಿ ಮರುದಿನದ ಪತ್ರಿಕೆಗಳನ್ನು ರಾಶಿ ಹಾಕಿ ಯಾರೆಲ್ಲ ನಾಯಕರ ಹೆಸರು ಬಂದಿದೆ, ಯಾರೆಲ್ಲ ಹೆಸರು ಬಂದಿಲ್ಲ ಎಂಬ 'ಪತ್ತೆದಾರಿ' ಕೆಲಸ ಮಾಡಿ ಕೀಳು ಮನೋಭಾವ ಪ್ರದರ್ಶಿಸಿದೆ. ಇದರ ಹೊರತು ಆ ನಾಯಕನನ್ನು ಗೌರವ ಪೂರ್ವಕವಾಗಿ ಗೌರವಿಸಲಿಲ್ಲ.

ಕಾಂಗ್ರೆಸ್ ಪಕ್ಷ ಹತ್ಯೆ ಖಂಡಿಸಿ ಒಂದೇ ಒಂದು ಸಾರ್ವಜನಿಕ ಸಭೆ ನಡೆಸಿಲ್ಲ. ಅದೇ ವಾರದ ನಂತರ ವಿವಿಧ ಕಡೆಗಳಲ್ಲಿ ನಡೆದ ಕಾಂಗ್ರೆಸ್ಸು ಸಮಾವೇಶಗಳಲ್ಲಿ ಕನಿಷ್ಟ ಸಂತಾಪವನ್ನು ಕೊಡಲಿಲ್ಲ. ಇಂತಹ ಸಮಾವೇಶಗಳಲ್ಲಿ ಕ್ವಿಜ್ ಮಾಸ್ಟರ್ ಬಿ. ಜನಾರ್ಧನ್ ಪೂಜಾರಿಯುವರಿಗೆ ಕಾರ್ಯಕರ್ತರಿಗೆ ಕ್ವಿಜ್ ನಡೆಸಲು ಸಾಕಷ್ಟು ಸಮಯಾವಕಾಶವಿತ್ತು. ಆದರೆ ಶ್ರದ್ಧಾಂಜಲಿ ಕೊಡಲು ಮಾತ್ರ ಸಮಯವಿರಲಿಲ್ಲ.

ಈ ಹತ್ಯೆ ಜಿಲ್ಲೆಯ ರಾಜಕೀಯದಲ್ಲಿ ತೀವ್ರ ಚರ್ಚೆಗೆ ಒಳಗಾಗಿ ರಕ್ತ ಸಿಕ್ತ ಕೋಮುವಾದಿ ಸಂಘಟನೆಯ ನಿಜ ಹುನ್ನಾರವನ್ನು ಬಯಲಿಗೆಳೆದು ಜನರನ್ನು ಎಚ್ಚರಿಸಬೇಕಿತ್ತು. ಆದರೆ ಹಾಗಾಗಲಿಲ್ಲ. ಕೃತ್ಯದಿಂದ ಕೋಮುವಾದಿಗಳು ಪುಲಕಿತಗೊಂಡಿದ್ದಾರೆ. ಕೋರ್ಟು ವಿಚಾರಣೆ ಸಂದರ್ಭದಲ್ಲಿ ನೂರಾರು ಸಂಖ್ಯೆಯಲ್ಲಿ ಭಜರಂಗ ದಳದ ಕಾರ್ಯಕರ್ತರು ಜಮಾಯಿಸಿ ಆರೋಪಿಗಳನ್ನು ಮತ್ತಷ್ಟೂ ಪ್ರೋತ್ಸಾಹಿಸುತ್ತಿದ್ದರೆ, ಇತ್ತ ಕಾಂಗ್ರೆಸ್ ಪರ ಕೇಳುವವರೇ ಇಲ್ಲದಾಗಿದೆ. ಆದುದರಿಂದ ಕಾಂಗ್ರೆಸ್ ಪಕ್ಷ ತನ್ನ ಕಾರ್ಯಕರ್ತರ ಜೀವ ಬಲಿದಾನವನ್ನು ಯಾವ ರೀತಿ ಮುರಾಬಟ್ಟೆ ಮಾಡುವುದೆಂಬುದು ಸ್ಪಷ್ಟವಾಗಿ ಗೊತ್ತಾಗಿದೆ.

ಗ್ಲೂಕೋಸ್ ತಗೊಂಡ್ರೆ ಗ್ಲೂಕೋಸ್ ಕಂಪನಿಗೆ ಲಾಭ



ಸುಸ್ತು ಎಂಬ ಸಾಮಾನ್ಯ ತೊಂದರೆಗೆ ಗ್ಲೂಕೋಸ್ ರಾಮಬಾಣ ಎಂಬ ವಿಷಯವನ್ನು ಗ್ಲೂಕೋಸ್ ತಯಾರಿಸುವ ಕಂಪನಿಗಳು, (ಬಹುರಾಷ್ಟ್ರೀಯ ಗ್ಲೂಕೋಸ್ ಕಂಪನಿ) ಟಿ.ವಿ. ಪರದೆ ಮೇಲೆ ಪದೇ ಪದೇ ತೋರಿಸುತ್ತವೆ. ಸೆಕೆಂಡುಗಳಲ್ಲಿ ಶಕ್ತಿ ಹೆಚ್ಚುತ್ತದೆ! ಅದಲ್ಲದೆ ಕಾಮಾಲೆ ರೋಗಿಗಳಿಗೆ ಗ್ಲೂಕೋಸ್ ಆದೇಶಿಸಲಾಗುತ್ತದೆ. ಒಂದು ಕೆ.ಜೆ. ಸಕ್ಕರೆಗೆ ಹಾಗೂ ಒಂದು ಕೆ.ಜಿ. ಗ್ಲೂಕೋಸಿಗೆ ಇರುವ ವ್ಯತ್ಯಾಸ 115.ರೂ. ಇದು ಕಂಪನಿಯ ಲಾಭ..

ಗ್ಲೂಕೋಸ್ ಹಾಗೂ ಸಕ್ಕರೆಯಲ್ಲೇನೂ ವ್ಯತ್ಯಾಸವಿಲ್ಲ. ಗ್ಲೂಕೋಸ್ ಕಾಮಾಲೆ ರೋಗಿಗಳಿಗೆ ಬೇಕೆ ಬೇಕೆಂಬ ನಿಯಮವೇನಿಲ್ಲ. ಆದರೆ ಔಷದಿ ಕಂಪನಿಗಳು ಗ್ಲೂಕೋಸ್ ತಯಾರಿಸಿ ಲಾಭ ಗಳಿಸಲು ಮುಂದಾಗಿವೆ. ಈ ಪ್ರಯತ್ನದಲ್ಲಿ ಜನರಿಗಿರುವ ನಿಶ್ಶಕ್ತಿ, ಸುಸ್ತು, ಕಾಮಾಲೆ ಹಾಗೂ ಇನ್ನೂ ಇತರೆ ತೊಂದರೆಗಳು ಔಷಧಿ ಕಂಪನಿಗಳಿಗೆಲಾಭದಾಯಕವಾಗಿವೆ. ಇಂದು ಕೆಲ ವೈದ್ಯರೂ ಗ್ಲೂಕೋಸ್ ತೆಗೆದುಕೊಳ್ಳಿ ಎಂದು ಆದೇಶಿಸುತ್ತಾರೆ. ಔಷಧಿ ಕಂಪನಿಗಳಿಗೆ ಇದು ವರವಾಗಿ ಪರಿಣಮಿಸಿದೆ.

ಯಾವುದೇ ವೈದ್ಯಕೀಯ ಪುಸ್ತಕಗಳಲ್ಲಿ ಗ್ಲೂಕೋಸ್ ಕೊಡಲು ಆದೇಶವಿಲ್ಲ ಆದರೂ ವೈದ್ಯರೇಕೆ ಈ ರೀತಿ ಆದೇಶಿಸುತ್ತಾರೆ?

ಬಿಸಿಯೂಟದ ಅಡುಗೆಯವರು ಸಂಘಟನೆಯತ್ತ

ಗೌರವಧನ ನೀಡಿಕೆಯಲ್ಲಿ ಭ್ರಷ್ಟಾಚಾರ

ಬಿಸಿಯೂಟದ ಸಫಲ-ವಿಫಲತೆಗಳ ಬಗ್ಗೆ ಬಿಸಿಯೇರಿದ ಚರ್ಚೆ ನಡೆಯಿತು. ಇಂತಹ ಅಡಿಗೆ ಮಾಡುವವರ ನೈಜ ಪರಿಸ್ಥಿತಿಯೇನು? ಸಾಮಾಜಿಕ ಒತ್ತಡಗಳೇನು ಎಂಬುದರತ್ತ ಬಹುತೇಕ ಜನರ ಗಮನವಿಲ್ಲ. ಅದರತ್ತ ಬೆಳಕು ಚೆಲ್ಲುವ ಈ ಲೇಖನವಿಲ್ಲಿದೆ. ಅಡುಗೆ ಮಾಡುವವರನ್ನು ಮೊಟ್ಟಮೊದಲು ಶಹಪುರದಲ್ಲಿ ಸಂಘಟಿಸಿ ಸಮಸ್ಯೆಗಳ ವಿರುದ್ಧ ಹೋರಾಟ ನಡೆಸಿದ ವಿವರ ಇಲ್ಲಿದೆ.


ಬಿಸಿಯೂಟ ಮಾಡಿದ ಶಾಲಾ ಮಕ್ಕಳ ಅಸ್ವಸ್ತತೆಗೆ ಕಳಪೆ ದಾನ್ಯ ಪೂರೈಕೆ, ಅಡಿಗೆ ತಯಾರಿಸಿದ ಪಾತ್ರೆಗಳು, ತಯಾರಿಸುವ ವಿಧಾನ ಪರಿಸರವೇ ಕಾರಣ. ಇಂತಹ ಸುದ್ದಿಗಳು ದಿನನಿತ್ಯದ ಪತ್ರಿಕೆಗಳಲ್ಲಿ ವರದಿಯಾಗುತ್ತಲೇ ಇವೆ. ಸಂಘಸಂಸ್ಥೆಗಳು, ವಿರೋಧ ಪಕ್ಷಗಳು ಈ ಅವ್ಯವಸ್ಥೆಗಳ ಬಗ್ಗೆ ಧ್ವನಿ ಎತ್ತಿವೆ. ಆದರೆ ಬಿಸಿ ಊಟದ ಅಡುಗೆಯವರ ಗೋಳನ್ನು ಕೇಳುವವರು ಯಾರೂ ಇಲ್ಲ. ಅವರ ಮೇಲಿರುವ ಸಾಮಾಜಿಕ ಒತ್ತಡಗಳೇನು? ಇವರಿಗೆ ವೇತನದ ಬದಲಾಗಿ ಗೌರವಧನ ನೀಡಲಾಗುತ್ತದೆ. ಮುಖ್ಯ ಅಡುಗೆಯವರಿಗೆ 650 ರೂ., ಅಡುಗೆಯವರಿಗೆ 450 ರೂ. ಸಹಾಯಕರಿಗೆ 300 ರೂ. ಮಾತ್ರ ನೀಡಲಾಗುತ್ತದೆ. ಅದೂ ಹಲವೆಡೆ ಗ್ರಾಮಪಂಚಾಯತಿ ಕಾರ್ಯದರ್ಶಿ ಮತ್ತು ಸ್ಥಳೀಯ ರಾಜಕಾರಣಿಗಳ ಭ್ರಷ್ಟಾಚಾರದಿಂದಾಗಿ ಗೌರವ ಧನದ ಪೂರ್ತಿ ಹಣ ಅಡುಗೆ ಯವರಿಗೆ ಸಿಗುವುದಿಲ್ಲ ಯಾವುದಾದರೂ ನೆಪ ಹೇಳಿ ಅದರಲ್ಲೂ ಸ್ವಲ್ಪ ಭಾಗವನ್ನು ಕಸಿದುಕೊಳ್ಳುತ್ತಾರೆ. ಶಾಲಾ ರಜಾ ದಿನಗಳ ವೇತನವೂ ಕಡಿತ! ಗೌರವಧನವನ್ನು ಬ್ಯಾಂಕಿನ ಮೂಲಕ ಮಾತ್ರ ಪಾವತಿ ಮಾಡಬೇಕೆಂಬ ನಿಯಮವಿದ್ದರೂ ಅದನ್ನು ಉಲ್ಲಂಘಿಸಿ ಪಂಚಾಯತಿ ಕಾರ್ಯದರ್ಶಿಯೇ ಹಣ ತಂದು ಕೊಡುತ್ತಾರೆ. ಅದೂ ಕೆಲವೆಡೆ 4 ತಿಂಗಳಿಗೊಮ್ಮೆ ಈ ಗೌರವಧನ ಸಿಗುತ್ತದೆ. ಈ ಬಗ್ಗೆ ಪ್ರಶ್ನಿಸಿದರೆ ಕೆಲಸದಿಂದ ತೆಗೆದುಹಾಕುವ ಅಧಿಕಾರ ಪಂಚಾಯ್ತಿಗೆ ಇದೆ ಎಂಬ ಬೆದರಿಕೆ.

ಇದು ಒಂದೆಡೆಯಾದರೆ ಅಡುಗೆ ತಯಾರಿಸಲು ಅವಶ್ಯವಾದಷ್ಟು ಪಾತ್ರೆಗಳನ್ನು ಇನ್ನೂ ಹಲವೆಡೆ ಒದಗಿಸಿಲ್ಲ. ಅಡುಗೆ ಕೋಣೆ ಇಲ್ಲದೆ, ಹಲವು ಶಾಲೆಗಳಲ್ಲಿ ಮಕ್ಕಳಿಗೆ ಪಾಠ ಹೇಳಿಕೊಡುವ ಕೊಠಡಿಗಳ ಒಳಗೇ ಅಡುಗೆ ಮಾಡಬೇಕಾದ ಅನಿವಾರ್ಯತೆ ಇದೆ. ಮತ್ತೆ ಕೆಲವೆಡೆ ಶಾಲೆಯ ಹೊರಗೆ ಅಡುಗೆ ಮಾಡಲಾಗುತ್ತದೆ. ಗ್ಯಾಸ್ ಸಿಲಿಂಡರ್ ಅಥವಾ ಸೌದೆಯನ್ನು ಸಮಯಕ್ಕೆ ಸರಿಯಾಗಿ ಒದಗಿಸುತ್ತಿಲ್ಲ. ಸಂಬಾರ ಪದಾರ್ಥಗಳನ್ನು ಪ್ರತಿ ತಿಂಗಳೂ ಕೊಡುವುದಿಲ್ಲ. ಯಾವುದಾದರೊಂದು ಅಡುಗೆ ಸಾಮಗ್ರಿ ಇಲ್ಲದೆ ಅಡುಗೆ ಮಾಡಲಾಗದಿದ್ದರೆ. ಅಡುಗೆಯವರ ಅಂದಿನ ವೇತನವನ್ನು ಕೊಡುವುದಿಲ್ಲ. ಹಾಗೆಂದು ಬೇರೆ ಕಡೆ ಕೂಲಿಗೆ ಹೋಗಲು ಸಾಧ್ಯವಿಲ್ಲ. ಅಡುಗೆ ಕೆಲಸಕ್ಕೆ ನೇಮಕ ಮಾಡಿಕೊಂಡಿರುವ ದಲಿತ ಮಹಿಳೆಯರ ಬಗ್ಗೆ ಮೇಲ್ಜಾತಿ ಜನ ಕೀಳು ಭಾವನೆಯಿಂದ ನೋಡಲಾಗುತ್ತದೆ.

ಈ ಸಮಸ್ಯೆಗಳ ಬಗ್ಗೆ ಅಲ್ಲಿನ ಮುಖ್ಯೋಪಾಧ್ಯಾಯರು, ಪಂಚಾಯತಿ ಕಾರ್ಯದರ್ಶಿ ಅಥವಾ ಎಸ್‌ಡಿಎಂಸಿ ಅಧ್ಯಕ್ಷರು ದೂರಿದರೆ, ಇದು ನಮಗೆ ಸಂಬಂಧಿಸಿದ್ದಲ್ಲವೆಂದು ಹೇಳಿ ತಮ್ಮ ಜವಾಬ್ದಾರಿಯಿಂದ ನುಣುಚಿ ಕೊಳ್ಳುತ್ತಾರೆ.

ಸಂಘಟನೆ ರಚನೆ

ರಾಜ್ಯದ ಕೆಲವೆಡೆ ಬಿಸಿಯೂಟದ ಅಡುಗೆಯವರು ತಮ್ಮ ಸಮಸ್ಯೆಗಳ ವಿರುದ್ಧ ಧ್ವನಿ ಎತ್ತಲು ಆರಂಭಿಸಿದ್ದಾರೆ. ಗುಲ್ಬರ್ಗಾ ಜಿಲ್ಲೆಯ ಶಾಪುರ ತಾಲ್ಲೂಕಿನಲ್ಲಿ ಸಿಐಟಿಯು ನೇತೃತ್ವದಲ್ಲಿ ಈಗಾಗಲೇ ಬಿಸಿಯೂಟದ ಅಡುಗೆಯವರ ಸಂಘ ರಚಿಸಿಕೊಂಡು ಹೋರಾಟಕ್ಕೆ ಮುಂದಾಗಿದ್ದಾರೆ.



ನಗರವಲಯ, ದೋರನಹಳ್ಳಿ, ಖಾನಾಪುರ, ವಡಿಗೇರಿ, ಹಯಾಳ ವಲಯಗಳು ಸೇರಿ ತಾಲ್ಲೂಕು ಸಮಿತಿ ರಚಿಸಲಾಗಿದೆ. ಸಮಿತಿಯ ಅಧ್ಯಕ್ಷೆ ಶ್ರೀಮತಿ ಸಿದ್ದಮ್ಮ ಎಂ ಕುಂಬಾ, ಸಿಐಟಿಯು ನಾಯಕ ದಾವಲಸಾಬ್ ನದಾಫರವರ ನೇತೃತ್ವದಲ್ಲಿ ಕೆಲಸ ಮಾಡುವ ವ್ಯಾಪ್ತಿಗೆ ಬರುವ ಪಂಚಾಯ ಕಛೇರಿ ಮುಂದೆ ಧರಣಿ ನಡೆಸಿ, ತಹಶೀಲ್ದಾರ ರವರ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದ್ದಾರೆ. ಅಡುಗೆಗೆ ಮೂಲ ಸೌಕರ್ಯ ಒದಗಿಸಬೇಕು ಗೌರವಧನ ನೀಡುವಲ್ಲಿನ ಭ್ರಷ್ಟಾಚಾರ ತಡೆಗಟ್ಟ ಬೇಕು, ದಲಿತ ಅಡುಗೆಯವರಿಗೆ ರಕ್ಷಣೆ ಒದಗಿಸಬೇಕೆಂಬ ಬೇಡಿಕೆ ಸೇರಿದಂತೆ ಹಲವ ಬೇಡಿಕೆಗಳನ್ನು ಸರ್ಕಾರದ ಮುಂದಿಡಲಾಗಿದೆ.

ರಾಜ್ಯಾದ್ಯಂತ ಸಂಘಟನೆಯನ್ನು ಬಲಿಷ್ಟಗೊಳಿ ಹೋರಾಟವನ್ನು ತೀವ್ರಗೊಳಿಸಲು ಬಿಸಿಯೂಟ ಅಡುಗೆಯವರ ಸಂಘ ಸಿದ್ಧತೆ ನಡೆಸಿದೆ.

ಸಿಐಟಿಯು ದಾವಲ ಸಾಬ ನದಾಫ್, ಪ್ರಾಂ ಕೃಷಿ ಕೂಲಿಕಾರರ ಸಂಘದ ಸಿದ್ದಯ್ಯ ಹಿರೇಮಠ ಸಿದ್ದಯ್ಯ ಎಂ.ಕುಂಬಾರ, ಈರಮ್ಮ ರೇಣುಕ ಮಹೇಶ್ವರಿ ಮುಂತಾದವರು ಈ ಸಂಘ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ದಾವಲಸಾಬ, ಶಹಾ

ಸಿದ್ದಯ್ಯ, ಬೆಂಗಳೂ

ಇನ್ನು ಪ್ರಾಣಿ ಚಿಕಿತ್ಸೆಗೆ ಕಕ್ಕಬೇಕು ರೊಕ್ಕ

ಜಾನುವಾರು-ಸಾಕು ಪ್ರಾಣಿಗಳ ಚಿಕಿತ್ಸೆಗೆ ಇನ್ನೂ ನಿಗದಿತ ಶುಲ್ಕವನ್ನು ಕಡ್ಡಾಯವಾಗಿ ತೆರಲೇಬೇಕೆಂಬ ಆಜ್ಞೆಯನ್ನು ಕರ್ನಾಟಕ ಸರ್ಕಾರ ಹೊರಡಿಸಿದೆ. ಈಗಾಗಲೇ ಬರಗಾಲ, ಬೆಳೆಹಾನಿಯಂತಹ ಸಂಕಷ್ಟದಲ್ಲಿರುವ ಗ್ರಾಮೀಣ ಜನರಿಗೆ ಗಾಯದ ಮೇಲೆ ಎಳೆದ ಬರೆಯಿದು. ಕೃಷಿ ಪ್ರಾಧಾನ್ಯವಾದ ಭಾರತದಲ್ಲಿ ಈ ನೀತಿಗಳು ತರುವ ಪರಿಪಾಟಲುಗಳೇನು? ಅದರತ್ತ ಒಂದು ನೋಟ

ಸರ್ಕಾರಿ ಆದೇಶ ಸಂಖ್ಯೆ : 57 ಪಪಾಯೋ : 2003 ಬೆಂಗಳೂರು ದಿನಾಂಕ ; 8-5-2003 ಪ್ರಕಾರವಾಗಿ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ನೀಡುತ್ತಿರುವ ಸೇವೆಗಳಿಗೆ ಇನ್ನೂ ಮುಂದೆ ಸೇವಾ ಶುಲ್ಕ ನಿಗದಿಗೊಳಿಸಿದೆ. ಸದರಿ ಸೇವಾ ಶುಲ್ಕವು ನಗರ ಪಾಲಿಕೆ ಮತ್ತು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಮಿತಿಗೊಳಿಸಿದ್ದು, ಆದೇಶವು 2003-04ರ ಅವಧಿಯವರೆಗೆ ಜಾರಿಯಲ್ಲಿರುತ್ತದೆ. ಭೀಕರ ಬರಗಾಲದಲ್ಲಿ ರೈತರಿಗೆ ಬರೆಯ ಮೇಲೆ ಬರೆ ಎನ್ನುವಂತೆ ನೀರಿಳಿಯದ ಗಂಟಲೋಳಕಡಬು ತುರುಕಿದಂತೆ' ಆದೇಶವು ಹೊರಡಿಸಿದೆ. ಈ ನೀತಿಯನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಪ್ರಾಂತ ರೈತ ಸಂಘಟನೆಗಳು ಬಲವಾಗಿ ಖಂಡಿಸಿವೆ.

ಕೃಷಿ ಪ್ರಧಾನವಾದ ಭಾರತೀಯ ಸಮಾಜದಲ್ಲಿ ಹೈನುಗಾರಿಕೆಯನ್ನೆ ನಂಬಿ ಒಂದೆರಡು ಆಕಳು, ಎಮ್ಮೆ ಇಟ್ಟುಕೊಂಡೇ ಜೀವನಾಧಾರವಾಗಿಸಿಕೊಂಡ ಜನರೇ ಅತ್ಯಧಿಕ ಇನ್ನೂಳಿದ ಜಮೀನ್ದಾರರು ಉಪಕಸುಬಾಗಿ ಜಾನುವಾರಗಳನ್ನು ಸಾಕುತ್ತಾರೆ. ಹೋರಿ, ಎತ್ತುಗಳಿಂದ ಒಂಟೆತ್ತಿನ ಬಂಡಿಯನ್ನೇ ನಂಬಿ ನಗರವಾಸಿಯಾಗಿ ಬದುಕುತ್ತಿರುವ ಶ್ರಮಿಕವರ್ಗ, ನಗರ ಪ್ರದೇಶಗಳಿಗೆ ಒಳಪಡದ ಹತ್ತಿರ ಗ್ರಾಮದ ನೇಗಿಲಯೋಗಿಯೂ ಕೂಡಾ ವೈದ್ಯಕೀಯ ಸೌಲಭ್ಯ ಮಾತ್ರ ಪಟ್ಟಣ ಪ್ರದೇಶಗಳಿಂದ ಪಡೆಯುತ್ತಿರುತ್ತಾನೆ. ಇನ್ನೂಳಿದ ವರ್ಗವೆಂದರೆ, ಶ್ರೀಮಂತ ವರ್ಗ ಇದರಲ್ಲಿ ದೊಡ್ಡ ಜಮೀನ್ದಾರ್ರು, ವಾಣಿಜ್ಯೋದ್ಯಮಿಗಳು, ಭ್ರಷ್ಟ ಅಧಿಕಾರಿಗಳು ಬರುತ್ತಾರೆ. ಇದರಲ್ಲಿ ಜಮೀನ್ದಾರರನ್ನು ಹೊರತುಪಡಿಸಿ ಉಳಿದವರಾರು ಬದುಕಿಗೆ ಅವಲಂಬನೆಯಾದ ಜಾನುವಾರುಗಳನ್ನು ಸಾಕುವುದಿಲ್ಲ. ಅವರೆಲ್ಲಾ ಸಾಕುವುದು ಅವರ ಪ್ರೀತಿಯ ಪ್ರಜೆಗಳಾದ ನಾಯಿ, ಕುರಿ, ನರಿ, ಇತ್ಯಾದಿಯಾದರೂ ಹೆಚ್ಚಿನ ಪ್ರಮಾಣದಲ್ಲಿ ನಾಯಿಗಳನ್ನು ಸಾಕುತ್ತಾರೆ.

ಸ್ವಚ್ಛಂದವಾದ ಆಕಾಶದಲ್ಲಿ ಹಾರಾಡಬೇಕಾದ ಗಿಳಿ, ಪಾರಿವಾಳಗಳನ್ನು ತಮ್ಮ ಸಂತೋಷಕ್ಕಾಗಿ ಹಿಡಿದಿಟ್ಟುಕೊಂಡಿರುತ್ತಾರೆ. ಬಾಯಿಯಿಂದ ಭಾವನೆಗಳನ್ನು ವ್ಯಕ್ತಿಪಡಿಸಲು ಬಾರದ ಮುದ್ದು ಸಾಕು ಪ್ರಾಣಿ, ಪಕ್ಷಿಗಳ ಪೇಚು ಹೇಳತೀರದಷ್ಟಿರುತ್ತದೆ. ಆದರೆ ಈ ರೀತಿಯ ಶ್ರೀಮಂತ ವರ್ಗಕ್ಕೆ ಇಂತಹ ಸರಕಾರಿ ಆದೇಶಗಳು ಭಾರವೆನಿಸುವದಿಲ್ಲ. ಹಾಗೂ ಬಡವರ ಗಾಯದ ಮೇಲೆ ಬರೆ ಬೀಳುವ ಇಂತಹ ಆದೇಶಗಳಿಗೆ ಅವರು ತಲೆ ಕೆಡಿಸಿಕೊಳ್ಳುವುದಿಲ್ಲ.

ಕಾಲ ಕಾಲಕ್ಕೆ ಮಳೆ ಬೆಳೆ ಚೆನ್ನಾಗಿಯಾದರೂ ಕೂಡ ಹೊಟ್ಟೆ ತುಂಬಿಸಿಕೊಳ್ಳಲು ಸಾಕಷ್ಟು ಪರದಾಡಬೇಕಾಗಿರುತ್ತದೆ. ಎಲ್ಲಾ ದುಡಿಯುವ ವರ್ಗಕ್ಕೆ ಸರಿಯಾದ ಕೆಲಸವಿಲ್ಲ, ಕೆಲಸವಿದ್ದರೂ ಸರಿಯಾದ ವೇತನವಿಲ್ಲಾ. ಕಾರ್ಮಿಕ ಕಾನೂನು ಹೇಳಿದಂತೆ ಈ ನನ್ನ ಮಕ್ಕಳಿಗೆ ಸೋಕ್ಕು ಬಂದಿದೆ ಎಂದು ವದರುತ್ತಾರೆ!


ಮೇಲಿಂದ ಮೇಲೆ ಉಂಟಾಗುತ್ತಿರುವ ಬರಗಾಲದಿಂದ ರೈತಾಪಿ ವರ್ಗದ ಶಕ್ತಿ ಕುಗ್ಗಿ ಹೋಗಿದೆ. ನರನಾಡಿಗಳಲ್ಲಿ ಶಕ್ತಿಯಿಲ್ಲ, ಒಂದೊತ್ತಿಗೆ ಕೂಳಿಗೂ ಗತಿಯಿಲ್ಲ, ಜಾನುವಾರುಗಳಿಗೆ ಮೇವಿನ ನೀರಿನ ಕೊರತೆಯಿಂದ ಕಟುಕರೂ ಕೂಡಾ ಕೇಳಲಾರದಂತಹ ಸ್ಥಿತಿ ಬಂದೊದಗಿದೆ. ರೈತ ದಿನಾಲು ಆಕಾಶ ನೋಡುತ್ತಿರುತ್ತಾನೆ. ಮುಂಗಾರು ಮಳೆ ಸಂಪೂರ್ಣವಾಗಿ ವಿಫಲವಾಗಿದೆ. ಬರಕಾಮಗಾರಿಯುಡಿ ಭಾರಿ ಅವ್ಯವಹಾರ, ಬರಗಾಲ ಬಂತೆಂದು ಅಧಿಕಾರಿ ಮತ್ತು ಆಳುವ ವರ್ಗಕ್ಕೆ ಸುಗ್ಗಿಯೇ ಸುಗ್ಗಿ. ಕೃಷಿ ಪಂಪಸೆಟ್ಟುಗಳಿಗೆ ಮೀಟರ್ ಅಳವಡಿಕೆ, ಉದಾರೀಕರಣ ಮತ್ತು ಖಾಸಗೀಕರಣಗಳ ನೆಪದಲ್ಲಿ ಈ ದೇಶವನ್ನು ಮತ್ತಷ್ಟು ದಾರಿದ್ರದೆಡೆಗೆ ತಳ್ಳುತ್ತಿದ್ದಾರೆ. ಮೀಸಲಾತಿ ನಿಯಮಗಳು ಗಾಳಿಗೆ ತೂರುತ್ತಿದ್ದಾರೆ. ಖಾಸಗೀ ಒಡೆತನದ ಮಾಲೀಕರು ಕೆಲಸಕ್ಕಾಗಿ ತಮ್ಮ ಜಾತಿಯ ಜನರನ್ನೇ ಭರ್ತಿ ಮಾಡಿಕೊಳ್ಳುತ್ತಿದ್ದಾರೆ. ಈ ದೇಶದಲ್ಲಿರುವ ಶ್ರೀಮಂತರು ಮತ್ತಷ್ಟು ಶ್ರೀಮಂತರಾಗಿ ಮುಂದುವರಿಯುತ್ತಿದ್ದು, ಬಡವರು ಮತ್ತಷ್ಟು ದಾರಿದ್ರತೆಗೆ ತಳ್ಳಲ್ಪಡುತ್ತಿದ್ದಾರೆ. ಶೋ ಹಾಗೆಯೇ ಇದೆ. ಅಸ್ಪೃಶ್ಯತೆ ಸಂಪೂರ್ಣ ನಿವಾರಣೆಯಾಗಿಲ್ಲ. ಹೀಗೆ ಒಂದಲ್ಲ ಎರಡಲ್ಲ ಹಲವಾರು ಸಮಸ್ಯೆಗಳಿಂದ ರೈತರ ಕಣ್ಣಲ್ಲಿಯ ಕೂಡಾ ಬತ್ತಿ ಹೋಗಿದೆ. ಆಹಾರ ವಿಲ್ಲದೆ ಹೋಗುತ್ತಿರುವ ಜನರ ಸಾವುಗಳು ದೇಶ ಸುದ್ದಿಯಾಗುತ್ತಿದೆ. ಇಂತಹ ಪರಿಸ್ಥಿತಿ ಜಾನುವಾರು ಚಿಕಿತ್ಸೆಗಾಗಿ ಶುಲ್ಕ ನಿಗದಿಗ ಸರಕಾರ ಆದೇಶ ಹೊರಡಿಸಿದೆ.

ಈ ಹಿಂದೆ ಸುಮಾರು ಆರೇಳು ವರ್ಷಗ ಕೃತಕ ಗರ್ಭದಾರಣೆಗಾಗಿ ಸೇವಾ ನಿಗದಿಗೊಳಿಸಿದೆ. ಆ ಶುಲ್ಕ ಅಷ್ಟ ಭಾರವೆನಿಸದಿದ್ದರೂ ಮತ್ತೇ ಸುಮಾರು ವರ್ಷದಿಂದ ಜಾನುವಾರುಗಳಿಗೆ ಬ ರೋಗಗಳಾದ ಗಂಟಲು ಬೇನೆ, ಬೇನೆಯಂತಹ ಹಲವಾರು ರೋಗಗಳಿಗೂ ಮಟ್ಟದ ಶುಲ್ಕ ನಿಗದಿಗೊಳಿಸಿದ್ದು, ಈಗ ಜಾನುವಾರು ಚಿಕಿತ್ಸೆಗೆ ಐದು ರೂಪಾಯಿ ಐನೂರು ರೂಪಾಯಿಗಳವರೆಗೆ ಸೇವಾ ನಿಗದಿಗೊಳಿಸಿರುವುದರಿಂದ ಬಡ ಜಾನುವಾರು ಸಾಕಣೆದಾರರಿಗೆ ಬಹ ತೊಂದರೆಯಾಗಿದೆ.

ಸರಕಾರ ಈ ಕೂಡಲೇ ಜಾನು ಚಿಕಿತ್ಸೆಯ, ಲಸಿಕೆಯ ಹಾಗೂ ಗರ್ಭಧಾರಣೆಯ ಸೇವಾ ಶುಲ್ಕಗಳನ್ನು ರದ್ದು ಆದೇಶವನ್ನು ಹಿಂದೆ ಪಡೆಯಬೇಕು.

ಜಿ. ನಾಗ

ಲಿಂಗಪ್ಪ ಹ




ಕುರುಡು ಕಾಂಚಾಣ

ಜಿ.ಎಸ್.ಮಣಿ

ನಾವು ಹೈನು ಉಣ್ಣೋಕೆ ಬಂದೇವಾ

ಇದನ್ನು ಹೇಳುತ್ತಿರುವುದು ಜಾಗತೀಕ ಹೈನು ಕಂಪನಿಗಳು. ಾರತ ಇಂದು ಜಗತ್ತಿನಲ್ಲೇ ಅತ್ಯಂತ ಹೆಚ್ಚು ಹಾಲು ುತ್ಪಾದಿಸುತ್ತಿರುವ ದೇಶ. ಹೈನು ಕ್ಷೇತ್ರದಲ್ಲಿ ಬೆಳವಣಿಗೆಯ ದರವೂ ೀ. 5 ಕ್ಕಿಂತ ಹೆಚ್ಚಿಗೆ ಇದೆ. ಇದಲ್ಲದೆ ಹಲವು ಮೌಲ್ಯವರ್ಧಿತ ುತ್ಪನ್ನಗಳನ್ನು ಉತ್ಪಾದಿಸುವ ಅವಕಾಶ ಇಲ್ಲಿದೆ.

ಹೀಗಿರುವಾಗ ಲಾಭಕ್ಕಾಗಿ ಬಾಯ್ಬಿಡುತ್ತಿರುವ ಈ ಜಾಗತೀಕ ೈನು ಕಂಪನಿಗಳು ಸುಮ್ಮನೆ ಕುಳಿತಾವೆ? ಅವರು ಭಾರತಕ್ಕೆ ಬರಲು ುದಿಗಾಲ ಮೇಲೆ ನಿಂತಿವೆ. ಉದಾರೀಕರಣದ ಅರ್ಥಿಕ ಮಿತಿಗಳು ಅವರಿಗೆ ಅನುಕೂಲ ಾಡಿಕೊಡುತ್ತವೆ. ದ್ದರಿಂದಲೇ ಭಾರತ ಅವರ ುರಿ.



ಜಗತ್ತಿನ ಬೇರೆ ಪ್ರೌಢ ಾರುಕಟ್ಟೆಗಳಲ್ಲಿ ಭಾರತ ಲ್ಲಿರುವಷ್ಟು ಅವಕಾಶಗಳೂ ಇಲ್ಲ.

ಇವರು ಬಂದರೆ ತಪ್ಪೇನು, ಎಂದು ೀವು ಕೇಳಬಹುದು. ನಮಗೆ ಗಿಣ್ಣು ಣ್ಣೆ, ತುಪ್ಪ, ಐಸ್‌ಕ್ರೀಮ್, ಇತ್ಯಾದಿಗಳು ೊರೆಯುವುದಾದರೆ ಒಳ್ಳೆಯದಲ್ಲವೆ? ಹೌದು ಈ ಎಲ್ಲ ವಸ್ತುಗಳು ಲ್ಲದೆ ಬೇರೆ ವಸ್ತುಗಳೂ ನಮಗೆ ದೊರೆಯಬಹುದು. ಆದರೆ ವುಗಳಿಗೆ ದೊಡ್ಡ ಬೆಲೆಯನ್ನು ನಾವು ತೆರಬೇಕಾಗುತ್ತದೆ.

ಈ ಕಂಪನಿಗಳು ಭಾರತದಲ್ಲಿ ಹೈನುಗಾರಿಕೆ ಅಭಿವೃದ್ಧಿ ಮಾಡುವಲ್ಲಿ ರವು ನೀಡಲಿಲ್ಲ. ನಮ್ಮಲ್ಲಿನ ಸಹಕಾರಿ ಹೈನುಗಾರಿಕೆ ಈ ಕ್ಷೇತ್ರವನ್ನು ಷ್ಟು ದೊಡ್ಡದಾಗಿ ಬೆಳೆಸುವಲ್ಲಿ ನೆರವಾಯಿತು. ಇಂದು ಈ ಂಪನಿಗಳು ಬಂದರೆ ಅವು ತಮ್ಮ ಲಾಭದತ್ತವೇ ಗಮನವನ್ನು ಟ್ಟುಕೊಂಡಿರುತ್ತವೆ. ಹೊರತು ದೇಶದ ಅಗತ್ಯಗಳನ್ನಲ್ಲ.

ಭಾರತದಲ್ಲಿ ಅತ್ಯಂತ ಹೆಚ್ಚು ಹೆಚ್ಚು ಹಸಿದ ಜನರಿದ್ದಾರೆ. ೌಷ್ಟಿಕಾಂಶದ ಕೊರತೆಯಿಂದ ಬಳಲುವವರಿದ್ದಾರೆ ಎಂಬುದು ನಮಗೆ ೊತ್ತು. ಇಂತಹ ಸಮಸ್ಯೆಗಳನ್ನು ಅವು ಪರಿಹರಿಸಲಾರವು ಬದಲಿಗೆ ವು ನಮ್ಮ ಸಹಕಾರಿ ನೆಲೆಗಳನ್ನು ಖಂಡಿತವಾಗಿಯೂ ಾಳುಗೆಡವುತ್ತವೆ. ಆ ಮೂಲಕ ನಮ್ಮ ದೇಶ ಮಾಡಿದ ಸಾಧನೆಯನ್ನು ಾಳುಗೆಡವುತ್ತವೆ.

ಈ ಕಂಪನಿಗಳು ಮಾತ್ರ ಲಾಭದ ಹೈನು ಉಣ್ಣುತ್ತವೆ.

'ನಾವು ಹೊಟ್ಟೆಯೊಳಗಿನ ಹುಳುಗಳನ್ನು ಸಾಯಿಸುತ್ತೇವೆ'

ಈ ಮಾತನ್ನು ಯಾವ ಡಾಕ್ಟರುಗಳು ಹೇಳಿರಬಹುದೆಂದು ತಲೆಕೆರೆದುಕೊಳ್ಳುತ್ತಿರುವಿರಾ? ಯಾವ ಡಾಕ್ಟರೂ ಈ ಮಾತನ್ನು ಹೇಳಿಲ್ಲ. ಹಾಗಾದರೆ ವಿಷಯ ಏನು ಎಂತಲೇ ನಿಮ್ಮ ಪ್ರಶ್ನೆ?

ತಂಪು ಪಾನೀಯಗಳಾದ ಪೆಪ್ಸಿ ಕೋಲಾ ಮತ್ತು ಕೋಕಾಕೋಲಾಗಳಲ್ಲಿ ಕೀಟನಾಶಕಗಳು ಕಂಡು ಬಂದಿವೆ ಎಂದು ಒಂದು ಅಧ್ಯಯನದ ವರದಿ ಹೇಳಿದೆ. ದೆಹಲಿಯ ವಿಜ್ಞಾನ ಮತ್ತು ಪರಿಸರ ಕೇಂದ್ರ ಇಂತಹ ಅಧ್ಯಯನ ನಡೆಸಿದ್ದು.

ಈ ಎರಡೂ ಬಹುರಾಷ್ಟ್ರೀಯ ಸಂಸ್ಥೆಗಳು ಮೂರನೇ ಜಗತ್ತಿನ ದೇಶಗಳಲ್ಲಿ ಏನೇನು ಮಾಡಬಲ್ಲವೆಂಬುದಕ್ಕೆ ಇದೊಂದು ಉದಾಹರಣೆ. ಭಾರತದ ವಿಶಾಲ ಮಾರುಕಟ್ಟೆಯಲ್ಲಿ ಲಾಭ ಬಾಚಿಕೊಳ್ಳಲು ಬಂದಿರುವ ಇವರಿಗೆ ಜನರ ಬಗ್ಗೆ ಎಂತಹ ಕಾಳಜಿ ಇದೆ ಎಂಬುದು ಇದರಿಂದ ಗೊತ್ತಾಗುತ್ತದೆ. ಹಿಂದೆ ಭೂಪಾಲದಲ್ಲಿ ಯೂನಿಯನ್ ಕಾರ್ಬೈಡ್ ಎಂಬ ಕಂಪನಿ ತನ್ನ ಕಾರ್ಖಾನೆಯಿಂದ ವಿಷಾನಿಲವನ್ನು ಬಿಟ್ಟು ಹತ್ತಾರು ಸಾವಿರ ಜನರನ್ನು ಸಾಯಿಸಿದ್ದು ಎಲ್ಲರಿಗೂ ನೆನಪಿದೆ.

ಈಗಾಗಲೇ ಈ ಎರಡೂ ಕಂಪನಿಗಳ ಮುಖ್ಯಸ್ಥರು ಒಟ್ಟಿಗೆ ಸೇರಿ ಈ ವರದಿ ಸುಳ್ಳು, ನಾವು ಅದನ್ನು ಸಿದ್ಧಪಡಿಸಿ ತೋರಿಸುತ್ತೇವೆ. ನಾವು ಅತ್ಯಂತ ಹೆಚ್ಚಿನ ಗುಣಮಟ್ಟವನ್ನು ಕಾಯ್ದುಕೊಂಡಿದ್ದೇವೆ. ಎಂದೆಲ್ಲ ಬಡಾಕಿ ಬಿಟ್ಟಿದ್ದಾರೆ.

ಭಾರತದಲ್ಲಿ ಉದಾರೀಕರಣ ಪ್ರಕ್ರಿಯೆ ಪ್ರಾರಂಭವಾಗಿದೆ ಮಾತ್ರ. ಉದಾರೀಕರಣವಾದಿಗಳು ಹೇಳುವಂತೆ ಇನ್ನೂ ಮಾಡಬೇಕಾದ ಉದಾರೀಕರಣ ಬೆಟ್ಟದಷ್ಟಿದೆ. ಉದಾರೀಕರಣದ ಈಹಂತದಲ್ಲೇ ಬಹುರಾಷ್ಟ್ರೀಯ ಕಂಪನಿಗಳ ನಿಜಗುಣಗಳು ಇಷ್ಟೊಂದು ಕಾಣಬಹುದಾದರೆ ಇನ್ನೂ ಹೆಚ್ಚಿನ ಉದಾರೀಕರಣವಾದರೆ ಏನಾಗಬಹುದು? ನೀವೇ ಊಹಿಸಿ!

ಅಂದ ಹಾಗೆ ಕೀಟನಾಶಕಗಳನ್ನು ಕುಡಿದರೆ (ಹೊಟ್ಟೆಯೊಳಗಿನ ಹುಳುಗಳು ಸಾಯುವ ಬದಲು) ಜನ ಸಾಯುತ್ತಾರೆ ಎಂಬುದು ಗೊತ್ತಲ್ಲ. ಅಲ್ಪ ಪ್ರಮಾಣದಲ್ಲಿ ಈ ವಿಷವಿದ್ದರೆ ನಿಧಾನವಾಗಿ ಸಾಯುತ್ತಾರೆ ಎಂದರ್ಥ!

ಭಾರತೀಯ ರಿಸರ್ವ್ ಬ್ಯಾಂಕಿಗೆ ಅವರ ಜನ

"ಅವರ ಜನ" ಎಂದರೆ ಯಾರ ಜನ ಎಂದಲ್ಲವೇ ನೀವು ಕೇಳುತ್ತಿರುವುದು? ಅವರ ಜನ ಎಂದರೆ ಐಎಂಎಫ್‌ನ ಜನ ಎಂದರ್ಥ. ಡಾ.ವೈ.ವಿ ರೆಡ್ಡಿಯವರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಗವರ್ನರ್ ಆಗಿ ಐದು ವರ್ಷಗಳ ಅವಧಿಗೆ ನೇಮಕ ಮಾಡಲಾಗಿದೆ. ಡಾ. ರೆಡ್ಡಿಯವರು ಐಎಂಎಫ್‌ನಲ್ಲಿ ಕಾರ್ಯ ನಿರ್ವಾಹಕ ನಿರ್ದೇಶಕರಾಗಿದ್ದರು. ಅದಕ್ಕೂ ಹಿಂದೆ ಅವರು ಭಾರತೀಯ ರಿಸರ್ವ್ ಬ್ಯಾಂಕಿನ ಉಪ ಗವರ್ನರ್ ಆಗಿಯೂ ಇದ್ದರು. 1964 ಸಾಲಿನ ಐಎಎಸ್ ಅಧಿಕಾರಿಯಾದ ಡಾ.ರೆಡ್ಡಿ ಬಂಡವಾಳಶಾಹಿ ಅರ್ಥಶಾಸ್ತ್ರದಲ್ಲಿ ತಜ್ಞರು ಎಂಬುದು ಅವರ ಹೆಗ್ಗಳಿಕೆ.

ಐಎಂಎಫ್ ತನ್ನ ಜನವನ್ನು ಆಯಕಟ್ಟಿನ ಸ್ಥಾನಗಳಿಗೆ ನೇಮಕ ಗೊಳ್ಳುವಂತೆ ನೋಡಿಕೊಳ್ಳುವುದು ಹೊಸದೇನಲ್ಲ. ತನ್ನ ಆರ್ಥಿಕ ನೀತಿಗಳನ್ನು ಜಾರಿಗೊಳ್ಳುವುದು ಇದರಿಂದ ಬಹಳ ಸುಲಭವಾಗುತ್ತದೆ ಎಂಬುದು ಅದಕ್ಕೆ ಗೊತ್ತು. ಈ ಹಿಂದೆ 1997 ರಲ್ಲಿ ಡಾ ಬಿಮಲ್ ಜಾಲನ್ ಅವರನ್ನು ನೇಮಕ ಮಾಡಿದಾಗಲೂ ಗೀತಕೃಷ್ಣನ್ ಎಂಬ ಐಎಂಎಫ್ ಮನುಷ್ಯನ ಹೆಸರು ಹೆಚ್ಚಾಗಿ ಕೇಳಿಬರುತ್ತಿತ್ತು. ಅಂದಿನ ರಾಜಕೀಯ ಪರಿಸ್ಥಿತಿಯಲ್ಲಿ ಡಾ ಬಿಮಲ್ ಜಾಲನ್ ನೇಮಕವಾದರು.

ಈಗ ಡಾ.ರೆಡ್ಡಿಯವರ ನೇಮಕ ಬಹುಶಃ ಐಎಂಎಫ್‌ನ ಬಯಕೆಯಂತೆ ನಡೆದಿದೆ. ಭಾರತದ ಹಣಕಾಸು ವಲಯದ ಉದಾರೀಕರಣ ದೊಡ್ಡ ಪ್ರಮಾಣದಲ್ಲಿ ನಡೆದಿದೆ ಮತ್ತು ಇನ್ನೂ ಹೆಚ್ಚಿನ ಉದಾರೀಕರಣ ಆಗಲಿ ಎಂಬುದು ಸಾಮ್ರಾಜ್ಯಶಾಹಿಗಳ ಬಯಕೆ ಎಂಬುದೂ ಗೊತ್ತಿರುವ ವಿಷಯ. ಈ ಹಿನ್ನೆಲೆಯಲ್ಲಿ ಈ ನೇಮಕಗೊಂಡಿರುವುದು. ಡಾ. ಜಾಲನ್‌ರವರ ಅವಧಿ ಅಕ್ಟೋಬರ್‌ನಲ್ಲಿ ಮುಗಿಯುತ್ತಿತ್ತು. ಅವರ ಅವಧಿ ಮುಗಿಯುವ ಮೊದಲೇ ಈ ನೇಮಕ ಮಾಡಿರುವುದಕ್ಕೆ ಏನಾದರೂ ಅರ್ಥವಿದ್ದೀತು.

ಕಾಮದೇನುಗಳ ಮಾರಾಟಕ್ಕಾಗಿ ಕಾತುರ

ಸಾರ್ವಜನಿಕ ವಲಯದ ಉದ್ದಿಮೆಗಳು ನಮ್ಮ ದೇಶದ ಕಾಮದೇನುಗಳು. ಅವುಗಳು ನಮ್ಮ ಅಧಿಕಾರಕ್ಕೆ ಸ್ವಾವಲಂಭನೆಯ ಬಲವನ್ನು ನೀಡಿವೆ.

ಕೇಂದ್ರದಲ್ಲಿನ ಎನ್‌ಡಿಎ ಸರ್ಕಾರ ಈ ಕಾಮದೇನುಗಳನ್ನು ಮೂರು ಕಾಸಿಗೆ ಮಾರಲು ಶತಾಯಗತಾಯ ಪ್ರಯತ್ನಗಳನ್ನು ನಡೆಸಿದೆ.

ಮಾರುತಿ ಉದ್ಯೋಗ್ ಎಂಬ ಕಂಪನಿಯಲ್ಲಿನ ತನ್ನ ಪಾಲನ್ನು ಸರ್ಕಾರ ವಿಶಿಷ್ಟ ರೀತಿಯಲ್ಲಿ ಕಡಿಮೆಗೊಳಿಸಿಕೊಂಡಿದೆ. ಬುಕ್ ಬಿಲ್ಡಿಂಗ್ ಎಂಬ ತಂತ್ರದ ಮೂಲಕ ಇದರ ಶೇರುಗಳನ್ನು ಇತ್ತೀಚೆಗೆ ಸಾರ್ವಜನಿಕರಿಗೆ ಮಾರಲಾಯಿತು. ಈ ಕಂಪನಿಯಿಂದ ಶೇರು ಕೊಳ್ಳಲು ನೂಕು ನುಗ್ಗಲು ಉಂಟಾಯಿತು. ಅವಶ್ಯಕ್ಕಿಂತ 8.5 ಪಟ್ಟು ಹೆಚ್ಚು ಜನ ಈ ಶೇರುಗಳನ್ನು ಕೊಳ್ಳಲು ಆಸಕ್ತಿ ತೋರಿದರು.

ಈ ಯಶಸ್ಸಿನ ಹಿನ್ನೆಲೆಯಲ್ಲಿ ಸರ್ಕಾರ ಇತರ ಉದ್ದಿಮೆಗಳಾದ ಬಾಲ್ಕೊ, ವಿಎಸ್‌ಎನ್‌ಎಲ್, ಐಪಿಸಿಎಲ್, ಸಿಎಂಸಿ ಮತ್ತು ಐಬಿಪಿಗಳಲ್ಲಿನ ತನ್ನ ಪಾಲನ್ನು ಕಡಿಮೆ ಮಾಡಿಕೊಳ್ಳುವ ಹುನ್ನಾರವನ್ನು ಮಾಡುತ್ತಿದೆ. ಮಾರುತಿಯ ಶೇರಿನಂತೆ ಈ ಶೇರುಗಳನ್ನು ಮಾರಾಟ ಮಾಡಲು ತೀವ್ರತರಹದ ಪ್ರಯತ್ನವನ್ನು ಈ ಸರ್ಕಾರ ಮಾಡುತ್ತಿದೆ.

ಇಂತಹ ಒಂದೇ ಒಂದು ಸಂಸ್ಥೆಯನ್ನು ಕಟ್ಟಿ ಬೆಳೆಸುವ ಸಾಮರ್ಥ್ಯ ತನಗಿಲ್ಲದಿದ್ದರೂ ಆಗಲೇ ಬೆಳೆದು ನಿಂತಿರುವ ಸಂಸ್ಥೆಯನ್ನು ಹಾಳುಗೆಡವಲು ಈ ಸರ್ಕಾರ ಮುಂದಾಗುತ್ತಿದೆ.

ಬಾಬ್ರಿ ಮಸೀದಿಯನ್ನು ಧ್ವಂಸಗೊಳಿಸಿದ ಬಿಜೆಪಿಯ ನೇತೃತ್ವ ಅದಕ್ಕಿದೆಯಲ್ಲವೆ?

ಹಿರಿಯ ರೈತ ನಾಯಕ ಕಾಂ. ರಾಮುಭದ್ರಯ್ಯ ಇನ್ನಿಲ್ಲ

ರೈತ ನಾಯಕ, ಸಿಪಿಐ(ಎಂ)ನ ಬೆಂಗಳೂರು ಜಿಲ್ಲಾ ಸಮಿತಿಯ ಸದಸ್ಯರಾಗಿದ್ದ ಹಿರಿಯಸಂಗಾತಿ ರಾಮುಭದ್ರಯ್ಯನವರು ಆಗಸ್ಟ್ 8 ರಂದು ದೊಡ್ಡ ಬಳ್ಳಾಪುರದಲ್ಲಿ ನಿಧನರಾದರು.

1957 ರಿಂದಲೂ ಅಖಿಲ ಭಾರತ ಕಿಸಾನ್ ಸಭಾದ ಘಟಕದ ಸಂಸ್ಥಾಪನಾ ಸಮ್ಮೇಳನದಲ್ಲಿ ಭಾಗಿಯಾದ ಅವರು ಮುಂದೆ ಹಲವಾರು ಪ್ರಮುಖ ರೈತ ಹೋರಾಟಗಳಲ್ಲಿ ಭಾಗವಹಿಸಿ ನೇತೃತ್ವದ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಚರಿತ್ರೆ ಕುರಿತು ಅವರು ಪುಸ್ತಕವನ್ನು ಬರೆದಿದ್ದಾರೆ. ಅಗಲಿದ ಸಂಗಾತಿಗೆ ಸಿಪಿಐ(ಎಂ) ರಾಜ್ಯಹಾಗೂ ಬೆಂಗಳೂರು ಜಿಲ್ಲಾಸಮಿತಿ, ಕರ್ನಾಟಕ ಪ್ರಾಂತ ರೈತಸಂಘ, ಕೂಲಿಕಾರರ ಸಂಘ ಸಂತಾಪ ಸಲ್ಲಿಸಿವೆ. ಅಂತ್ಯಕ್ರಿಯೆಯಲ್ಲಿ ಪಕ್ಷದ ಕಾರ್ಯದರ್ಶಿ ಜಿ.ಎನ್.ನಾಗರಾಜ್, ಪ್ರಾಂತ ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ.ಬಯ್ಯಾರೆಡ್ಡಿ ಪ್ರಕಾಶ್ ಮುಂತಾದವರು ಭಾಗವಹಿಸಿದ್ದರು.


'ಜಾಗೃತಿ' ಕಾದಂಬರಿಯ ಪರಿಚಯ....

ಪುಟ 12 ರಿಂದ


ತಿರುಮನ್ ಎಷ್ಟು ಅಂಗಲಾಚಿದರೂ ಕರುಣೆಯನ್ನು ತೋರದ ಧೂರ್ತರು ಕೋಟಕ್ಕೆ ನುಗ್ಗುವಾಗ ತಿರುಮನ್‌ನ ಅಸಹಾಯಕತೆ ಅನಿವಾರ್ಯವಾಗಿ ರೋಷವಾಗಿ ತಿರುಗುತ್ತದೆ. ಸದಯನ್ ಇದೇ ಕ್ಷಣಕ್ಕಾಗಿ ಕಾಯುತ್ತಿದ್ದು ಅಪ್ಪನಿಗೆ ಆಸರೆಯಾಗಿ ನಿಂತು ಮುಖಾಮುಖಿ ಹೋರಾಟದಲ್ಲಿ ಇಳಿಯುತ್ತಾನೆ. ಚಳುವಳಿಯಿಂದ ಗಾವುದ ಗಾವುದ ದೂರವಿರಬೇಕೆಂದು ಹೆದರಿಕೆಯಿಂದ ಬಾಳುತ್ತಿದ್ದ ತಿರುಮನ್ ಮತ್ತೊಂದು ಮಾರ್ಗವಿಲ್ಲದೆ ಹೋರಾಟಕ್ಕೆ ಒಡ್ಡಿಕೊಳ್ಳುವಲ್ಲಿ ಕಾದಂಬರಿ ಮುಕ್ತಾಯವಾಗುತ್ತದೆ. ದಮನಿತರ ಎದುರು ಆಯ್ಕೆಯ ಪ್ರಶ್ನೆ ಇಲ್ಲ. ಹೋರಾಟವೊಂದೇ ಅವರನ್ನು ಬಿಡುಗಡೆಗೊಳಿಸುವ ಮಾರ್ಗ ಎಂಬುದನ್ನ ಕಾದಂಬರಿ ' ತುಂಬಾ ಅರ್ಥಪೂರ್ಣವಾಗಿ ನಾಟಿಸುತ್ತದೆ.

ಹೋರಾಟವೇ ಕೃತಿಯ ಆಶಯ ಮತ್ತು ಕಾಳಜಿ. ಚಳುವಳಿಗಾರರಿಗೆ ಹೋರಾಟ ಒಂದು ಫ್ಯಾಷನ್ ಅಲ್ಲ. ಅದೊಂದು ಅಪರಿಹಾರ್ಯ ವರ್ತಮಾನ. ಚಿಂತನೆ ಮೂಲಕ ಕಟ್ಟಲ್ಪಡುವ ಸಂಘರ್ಷ ದಮನಿತರ ಬದುಕಿಗೆ ಆಶಾಕಿರಣವಾಗುತ್ತದೆ. ಹಸಿವು, ಬಡತನ, ಅಜ್ಞಾನ, ಮುಗ್ಧತೆಗಳು ದಮನಿತರ ಬದುಕಿಗೆ ಶಾಪವಾದರೆ, ಪ್ರಭುತ್ವದ ಸ್ವಾರ್ಥ ಸಾಧನೆಗೆ ಬಂಡವಾಳವಾಗುತ್ತದೆ. ಇಂಥ ಬಂಡವಾಳಶಾಹಿ ಕ್ರೂರ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ಮುನ್ನುಗ್ಗದಿದ್ದರೆ ಗತ್ಯಂತರವಿಲ್ಲ ಎಂಬುದೇ ಕಾದಂಬರಿಯ ಒಟ್ಟು ದರ್ಶನ. ವಿದ್ಯಾರ್ಥಿ ದೆಸೆಯಿಂದಲೂ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡು ದಮನಿತರ ಹಕ್ಕಿಗಾಗಿ ಬಡಿದಾಡಿದ ಚಿನ್ನಪ್ಪ ಭಾರತೀಯವರಿಗೆ ಸಾಂಘಿಕ ಶಕ್ತಿಯ ಅಪಾರ ಸಾಧ್ಯತೆಯ ಬಗ್ಗೆ ಅಚಲ ವಿಶ್ವಾಸವಿದೆ. ಅದನ್ನು ಸಾಕಾರಗೊಳಿಸಲೆಂದೆ ತಮ್ಮ ಕೃತಿಗೆ 'ಸಂಘಂ' ಎಂದು ಹೆಸರಿಸುವ ಮೂಲಕ ಸಂಘಟನೆಯ ವಿಜಯವನ್ನು ಕಥಾ ಹಂದರವಾಗಿಸುತ್ತಾರೆ. ಇಂಥ ಸಾಂಘಿಕ ಶಕ್ತಿಯ ಬಗೆಗೆ ಎಚ್ಚರ ಮೂಡಿಸುವ ಕೆಲಸವನ್ನು ಪ್ರಸ್ತುತ ಕೃತಿ ಸಾಧಿಸಿದೆ ಎಂಬುದನ್ನು ಮನಗಂಡು ಅನುವಾದಕಿ ಸುಶೀಲಾ ಅವರು ಕನ್ನಡ ಆವೃತ್ತಿಗೆ 'ಜಾಗೃತಿ' ಎಂದು ಕರೆದಿದ್ದಾರೆ. ಇದೆಲ್ಲಕ್ಕೂ ಹೆಚ್ಚಾಗಿ ಕಾದಂಬರಿಯ ಮೈಯುದ್ದಕ್ಕೂ ಹರಡಿಕೊಂಡಿರುವ ಬುಡಕಟ್ಟು ಜನಾಂಗದ ನಂಬಿಕೆ, ಆಚರಣೆ, ಸಂಸ್ಕೃತಿ ಹತ್ತು ಹಲವು ಬದುಕಿನ ವಿವರಗಳು ಚೇತೋಹಾರಿಯಾಗಿ ಓದಿಸಿಕೊಂಡು ಹೋಗುತ್ತವೆ. ಸಹಜವೆಂಬಂತೆ ಮೂಡಿ ಬಂದ ಬದುಕಿನ ಭಿತ್ತಿಗಳು ಒಂದು ಕ್ಷಣ ನಾಗರಿಕತೆಯ ಗೊಂದಲದಿಂದ ಬಿಡಿಸಿಕೊಳ್ಳುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತವೆ. ಒಟ್ಟಾರೆ ಕಾದಂಬರಿ ಗರ್ಭೀಕರಿಸಿಕೊಂಡಿರುವ ದೇಶೀ ವಿವರಗಳಿಂದಾಗಿ ಮತ್ತು ಕುತೂಹಲ ಕೆರಳಿಸುವ ಘಟನೆಗಳಿಂದಾಗಿ ಒಂದೇ ಪಟ್ಟಿಗೆ ಓದಿಸಿಕೊಂಡು ಹೋಗುತ್ತದೆ.

ಕೆ.ಚಿನ್ನಪ್ಪ ಭಾರತೀಯವರು ತಮಿಳು ಭಾಷೆಯಲ್ಲಿ "ಸಂಘಂ" ಎಂಬ ಹೆಸರಿನಿಂದ ಬರೆದ ಕಾದಂಬರಿಯ ಕನ್ನಡ ಅನುವಾದವೇ ಜಾಗೃತಿ ಕೃತಿ. ಸಂಘದ ಕಾದಂಬರಿ ತನ್ನ ವಸ್ತು ಮತ್ತು ಕಲಾತ್ಮಕತೆಯ ಕಾರಣವಾಗಿ ವ್ಯಾಪಕ ಮೆಚ್ಚುಗೆಗೆ ಪಾತ್ರವಾಗಿ 1987 ರಲ್ಲಿ ಚೆನ್ನೈನ ಪ್ರತಿಷ್ಠಿತ "ಇಳ್ಳಕ್ಕೀಯ ಚಿಂತನೈ" ಎಂಬ ಪ್ರಶಸ್ತಿಯನ್ನು ಪಡೆದುಕೊಂಡಿದೆ. ತಮಿಳಿನ ಬುಡಕಟ್ಟು ಜನಾಂಗದ ಹಕ್ಕಿನ ಹೋರಾಟದ ವೀರಕಥೆ ದೇಶೀಯತೆಯ ಸೊಗಡಿನಿಂದಾಗಿ ಇತರ ಭಾಷಿಕ ಓದುಗರಿಗೂ ಮೆಚ್ಚುಗೆಯಾಗಿದೆ. ದಮನಿತ ಜನಾಂಗದ ಅಸಹಾಯಕತೆ ಮತ್ತು ಮುಗ್ಧತೆಗಳು ಕಣ್ಣಿಗೆ ಕಟ್ಟುವಂತೆ ಚಿತ್ರಣಗೊಂಡಿರುವ ಈ ಕೃತಿ ಈಗಾಗಲೇ ತೆಲುಗು, ಮಲೆಯಾಳಂ, ಹಿಂದಿ ಮತ್ತು ಇಂಗ್ಲಿಷ್ ಭಾಷೆಗೆ ಅನುವಾದಗೊಂಡು ಒಂದಷ್ಟು ತಡವಾಗಿ ಶ್ರೀಮತಿ ಸುಶೀಲಾ ಅವರ ಪರಿಶ್ರಮ ಮತ್ತು ಚಳುವಳಿ ಬಗೆಗಿನ ಕಾಳಜಿಯಿಂದಾಗಿ ಇದೀಗ ಕನ್ನಡಿಗರ ಕೈಸೇರಿದೆ



ದಮನಿತ ಜನಾಂಗದ ಬದುಕಿನ ಅನಾವರಣ



■ ಡಾ. ಮೀನಾಕ್ಷಿ ಬಾಳಿ

ತಮಿಳುನಾಡು ಮತ್ತು ಶ್ರೀಲಂಕಾದ ಗಡಿಭಾಗಗಳಲ್ಲಿರುವ ದಟ್ಟ ಕಾನನಗಳ ನಡುವೆ ಶತಮಾನಗಳಿಂದಲೂ ಬದುಕುತ್ತಿರುವ ಬುಡಕಟ್ಟು, ಜನಾಂಗ ಪ್ರಕೃತಿ ವಿಕೋಪಗಳೊಡನೆ ಗುದ್ದಾಡುತ್ತಲೇ ಪ್ರಭುತ್ವದ ಕ್ರೂರ ಕಪಿಮುಷ್ಟಿಗಳಲ್ಲೂ ಸಿಕ್ಕು ಒದ್ದಾಡುತ್ತಿರುವ ದಾರುಣ ಚಿತ್ರಣ ಮನಕಲಕುವಂತೆ ಮೂಡಿಬಂದಿದೆ. ನಾಗರೀಕತೆಯಿಂದ ದೂರವಾಗಿಯೇ ಬದುಕುತ್ತಿರುವ ಈ ಅರಣ್ಯವಾಸಿಗಳು ತಮ್ಮದೇ ಕಾಡು ಸಂಸ್ಕೃತಿಯನ್ನು ನೆಚ್ಚಿಕೊಂಡು ಹಲವಾರು ಶ್ರದ್ಧೆ, ನಂಬಿಕೆ, ಆಚರಣೆ, ಸಂಪ್ರದಾಯಗಳಲ್ಲಿ ಹೂತುಹೋಗಿದ್ದಾರೆ. ಒಂದು ಕಡೆ ದುರ್ಗಮ್ಯ ಕಾಡು, ಸದಾ ಒಂದಿಲ್ಲೊಂದು ಅವಘಡಗಳನ್ನು ಒಡ್ಡುವ ಪ್ರತಿಕೂಲ ನಿಸರ್ಗ. ಇನ್ನೊಂದೆಡೆ ತಾವಾಗಿಯೇ ಸೃಷ್ಟಿಸಿಕೊಂಡಿರುವ ಮೌಢ್ಯ, ಕಂದಾಚಾರಗಳ ಕಪಿಮುಷ್ಟಿ. ಹೀಗಾಗಿ 'ಕೊಲ್ಲುವೆನೆಂಬ ಭಾಷೆ ದೇವನದಾದರೆ, ಗೆಲ್ಲುವೆನೆಂಬ ಭಾಷೆ ಭಕ್ತನದು' ಎಂಬಂತಾಗಿದೆ. ಈ ಎಲ್ಲ ಆತಂಕಗಳಿಗಿಂತ ಭಯಂಕರವಾಗಿ ಎರಗಿ ಬಂದದ್ದು ಸ್ವತಂತ್ರ ಭಾರತದ ಆಳುವ ವರ್ಗಗಳ ಪ್ರಭುತ್ವ ಮತ್ತು ಅದರ ಪ್ರತಿಪಾದಕರಾದ ಅಧಿಕಾರಶಾಹಿ ವ್ಯವಸ್ಥೆ ಕಾಡು-ಮೇಡುಗಳಲ್ಲಿ ಜೀವಿಸುತ್ತಿದ್ದ ನೂರಾರು ಬುಡಕಟ್ಟುಗಳು ಸ್ವಾತಂತ್ರ್ಯದ ನಂತರವೂ ನಲುಗುತ್ತಲೇ ಬಾಳುತ್ತಿರುವುದು ಇತಿಹಾಸದ ಬಹುದೊಡ್ಡ ಭಾಗವಾಗಿದೆ. ಪ್ರಸ್ತುತ ಕಾದಂಬರಿಯಲ್ಲಿ ಈ ಪ್ರಜಾಪ್ರಭುತ್ವ ವ್ಯವಸ್ಥೆಯೂ ಕೂಡ ಮುಗ್ಧ ಅಸಹಾಯಕರನ್ನು ಹೇಗೆ ನಿರ್ದಯವಾಗಿ ನಡೆಸಿಕೊಂಡಿದೆ ಎಂಬುದರ ಚಿತ್ರಣವಿದೆ.

ತಮಿಳುನಾಡಿನ ದುರ್ಗಮ ಕಾನನಗಳ ನಡುವೆ ಇರುವ ಹತ್ತಾರು ಹಾಡಿಗಳಲ್ಲಿ ಅಸಂಖ್ಯಾತ ಅರಣ್ಯವಾಸಿಗಳು ಒಲೆ ಹೊತ್ತಿಸಲೆಂದೇ ಹರಸಾಹಸ ಮಾಡುತ್ತ ಬಾಳುತ್ತಿದ್ದಾರೆ. ಅಸಾಧ್ಯವಾದ ಪ್ರಕೃತಿ ವಿಕೋಪಗಳಿಗೆ ಒಡ್ಡಿಕೊಳ್ಳುತ್ತಲೆ ಬೊಗಸೆಯಷ್ಟು ಬಯಕೆಗಳಿಗಾಗಿ ರಾತ್ರಿಗಳನ್ನು ಹಗಲು ಮಾಡಿ ದುಡಿಯುತ್ತಿದ್ದಾರೆ. ಸಾವಿ ತಿರುಮನ್‌ನ ಕುಟುಂಬವು ಎಲ್ಲ ಅರಣ್ಯವಾಸಿಗಳ ಪ್ರತಿನಿಧಿಯಂತೆ ಕೃತಿಯಲ್ಲಿ ಚಿತ್ರಿತವಾಗಿದೆ. ಅರಣ್ಯ ಸವರಿ ಕೃಷಿಯೋಗ್ಯ ಭೂಮಿ ಸಿದ್ಧಪಡಿಸಿಕೊಂಡಿರುವ ತಿರುಮನ್‌ನಿಗೆ ಅದು ತಲೆತಲಾಂತರಗಳಿಂದ ಹಿರಿಯರಿಂದ ಬಂದ ಬಳುವಳಿಯಾಗಿದೆ. ಅಂಗೈ ಅಗಲ ಭೂಮಿಯಲ್ಲಿ ತಿರುಮನ್ ಹೆಂಡತಿ ತಿರುಮಿ, ಮಗ ಸದಯನ್ ಮತ್ತು ಮಗಳು ಪಿಡರಿಯೊಂದಿಗೆ ಟೊಂಕಮಟ್ಟ ಕೆಸರಿನಲ್ಲಿ ಅವಿರತ ದುಡಿಯಬೇಕು. ಕಠಿಣ ಪರಿಶ್ರಮಕ್ಕೂ ಮುನ್ನೂರು ಅರವತ್ತೈದು ದಿನವೂ ಎರಡು ಹೊತ್ತು ಗಂಜಿ ದೊರಕಿತೆಂಬ ಗ್ಯಾರಂಟಿ ಇಲ್ಲ. ಈ ನಡುವೆ ಅರಣ್ಯ ಇಲಾಖೆಯ ಅಧಿಕಾರಿಗಳ ಕಾಟ ಇಡೀ ಹಾಡಿಗಳ ಜನತೆಯನ್ನು ತತ್ತರಿಸುವಂತೆ ಮಾಡುತ್ತದೆ. ಅರಣ್ಯ ಒತ್ತುವರಿ, ಅಕ್ರಮ ಭೂ ಕಬಳಿಕೆ ಎಂದೆಲ್ಲಾ ಹೆದರಿಸುವ ಅಧಿಕಾರಿಗಳು ರೈತರು ಕಷ್ಟಪಟ್ಟು ದುಡಿದ ದವಸಧಾನ್ಯ, ಹಣ್ಣು ಹಂಪಲು, ಜೇನು, ಹೈನು ಮುಂತಾದ ಎಲ್ಲ ಬದುಕನ್ನು ದೋಚಿಕೊಂಡು ಹೋಗುತ್ತಾರೆ. ಘಟ್ಟದ ಕೆಳಗಿನ ಲೇವಾದೇವಿಗಾರರು ಗುಡ್ಡಗಾಡು ಜನತೆಗೆ ಸಾಲ ಕೊಡುವುದನ್ನೇ ದಂಧೆ ಮಾಡಿಕೊಂಡು ಒಂದಕ್ಕೆ ನಾಲ್ಕು ಪಟ್ಟು ಬಡ್ಡಿ ಚಕ್ರಬಡ್ಡಿ ಹಚ್ಚುತ್ತಾರೆ. ಒಂದು ಸಲ ಇವರ ಬಳಿ ಸಾಲ ಪಡೆದುಕೊಂಡ ರೈತ ಅದರಿಂದ ಬಿಡುಗಡೆಯಾಗುವ ಮಾತೇ ಇಲ್ಲ. ಈ ಎಲ್ಲ ಅನ್ಯಾಯ, ಕ್ರೌರ್ಯವನ್ನು ಪ್ರತಿಭಟಿಸಬೇಕೆಂಬ ಪ್ರಶ್ನೆಯೇ ಇಲ್ಲ. ಮಳೆ, ಗಾಳಿ, ಮಹಾಪೂರ, ಕಾಡುಬೆಂಕಿಗಳಂತೆ, ಸಾಹುಕಾರರ ಸಾಲ, ಅಧಿಕಾರಿಗಳ ಲಂಚ ರುಷುವತ್ತು, ಪೋಲೀಸರ ಒದೆತ, ಮುಂತಾದವುಗಳು ಅಪರಿಹಾರ್ಯ. ಇವುಗಳನ್ನು ತಾಳಿಕೊಳ್ಳಲೆಂದೆ ಹುಟ್ಟಿದವರು ತಾವೆಂಬ ಅಚಲ ನಂಬಿಕೆ ಇವರದು.

ಸಾವಿ ತಿರುಮನ್‌ನಿಗೆ ದುಷ್ಟ ಅಧಿಕಾರಿಗಳಿಂದ ತಪ್ಪಿಸಿಕೊಂಡು ಬದುಕುವುದೇ ದೊಡ್ಡ ತಲೆ ನೋವಾಗಿ ಪರಿಣಮಿಸುತ್ತದೆ. ಮಗಳಿಗೊಂದು ಅನುರೂಪ ಗಂಡನನ್ನು ತರುವುದು ಮತ್ತು ತೆರವು ಕೊಟ್ಟು ಮಗನಿಗೊಂದು ಹೆಣ್ಣು ತಂದು ದುಡಿಯಲು ಇನ್ನೆರಡು ಕೈಗಳನ್ನು ಹೆಚ್ಚಿಸುವುದು ಬಿಟ್ಟರೆ ತಿರುಮನ್‌ನಿಗೆ ದೊಡ್ಡ ಕನಸುಗಳೇ ಇಲ್ಲ. ಹರೆಯದ ಮಗಳಿಗೊಂದು ಹೊಸ ಜೊತೆ ಬಟ್ಟೆ ತರಲು ಹೆಂಡತಿ ತಿರುಮಿ ಅತ್ಯಂತ ಪ್ರೀತಿಯಿಂದ ಸಾಕಿದ ಹತ್ತು ಹಂದಿಮರಿಗಳ ಪೈಕಿ ಮೂರನ್ನು ಅನಿವಾರ್ಯವಾಗಿ ಮಾರ ಬೇಕಾದ ಸ್ಥಿತಿ. ಈ ನಡುವೆ ಬುಡಕಟ್ಟು ಸಂಪ್ರದಾಯ ದಂತೆ ಹೊಸ ನೇಗಿಲು ಹೂಡುವ ದಿನ ತಿಳಿಯದೇ ಪೊದೆಗಳನ್ನು ಸುಟ್ಟು ತಪ್ಪು ಮಾಡಿದ್ದಕ್ಕಾಗಿ ಹಾಡಿಯ ಪಂಚರು ಜಾತಿದಂಡ ಹೊರಿಸುತ್ತಾರೆ. ಬಿತ್ತನೆಯ ಪ್ರಾರಂಭದ ದಿನ ಊರವರು ಒಲೆ ಹೊತ್ತಿಸಬಾರದು, ಪೊದೆ ಸುಡಬಾರದು ಹೀಗೆ ಹತ್ತಾರು ವಿಚಿತ್ರ ಪದ್ಧತಿಗಳನ್ನು ಬುಡಕಟ್ಟು ಜನತೆ ಆಚರಿಸಿಕೊಂಡು ಬರುತ್ತಾರೆ. (ಕಾದಂಬರಿ ಯುದ್ಧಕ್ಕೂ ಇಂಥ ತರಹೇವಾರಿ ಶ್ರದ್ಧೆ, ನಂಬಿಕೆಗಳ ವಿವರಣೆಗಳು ಹರಡಿಕೊಂಡು ಓದುಗರಿಗೆ ಹೊಸದೊಂದು ಲೋಕ ತೆರೆದಂತೆ ಭಾಸವಾಗುತ್ತದೆ) ತನ್ನದಲ್ಲದ ತಪ್ಪಿಗಾಗಿ ಇಪ್ಪತ್ತೈದು ರೂಪಾಯಿ ದಂಡ ತೆರಲು ತಿರುಮನ್ ಮತ್ತೆ ನಾಲ್ಕು ಹಂದಿ ಮರಿಗಳನ್ನು ಮಾರುತ್ತಾನೆ. ಅರಣ್ಯ ಅಧಿಕಾರಿಗಳ ಲೂಟಿಯಂತೂ ಅಬಾಧಿತವಾಗಿ ಮುಂದುವರೆದುಕೊಂಡು ಸಾಗುತ್ತಿರುವಾಗ ಬಿಸಿರಕ್ತದ ಸದಯನ್‌ನಿಗೆ ಒಳಗೊಳಗೆ ತಿಕ್ಕಾಟ ಶುರುವಾಗುತ್ತದೆ. ಅಪ್ಪನೊಂದಿಗೆ ಮೈಮುರಿದು ದುಡಿಯುವ ಸದಯನ್‌ನಿಗೆ ಹೊಟ್ಟೆ ತುಂಬುವಷ್ಟು ಗಂಜಿಯೂ ದೊರೆಯದು: ರಕ್ತ ಹೀರುವ ಅಧಿಕಾರಿಗಳು, ಕೊಟ್ಟ ಸಾಲಕ್ಕಾಗಿ ತಗಾದೆ ಹಚ್ಚುವ ವ್ಯಾಪಾರಿಗಳು, ಇವರು ಬೆಳೆದ ಮಾಲನ್ನು ಅಗ್ಗದ ಧಾರಣೆ ಖರೀದಿಸುವ ದಲಾಲರು, ಕಾರಣವಿಲ್ಲದೆ ದಂಡಿಸುವ ಪೊಲೀಸರು ಇವುಗಳಿಂದ ರೋಸಿ ಹೋಗುವ ಸದಯನ್‌ನಿಗೆ ಶ್ರೀಲಂಕಾದ ಟೀ ತೋಟಗಳಲ್ಲಿ ಕೆಲಸ ಮಡಿ ಬಂದ ಸೀರಂಗನ್ ಜೊತೆಗಾರನಾಗುತ್ತಾನೆ. ಸೀರಂಗನ್ ಟೀ ತೋಟದ ಕೃಷಿ ಕಾರ್ಮಿಕರ ಚಳುವಳಿಗಳಲ್ಲಿ ಭಾಗವಹಿಸಿ ಹೋರಾಟ ಮಾಡಿ ಬಂದವನು. ಸೀರಂಗನ್, ಸದಯನ್, ವೆಲ್ಲಾಯನ್, ಪೆರಿಸ್ವಾಮಿ ಮುಂತಾದ ತರುಣರನ್ನು ಸೇರಿಸಿಕೊಂಡು ತಮ್ಮೂರಿನಲ್ಲಿ ರೈತರೆಲ್ಲಾ ಸೇರಿ ಹೋರಾಟ ಮಾಡಿದ್ದು, ಹಕ್ಕುಗಳನ್ನು ಪಡೆಯುವಲ್ಲಿ ಯಶಸ್ವಿಯಾದುದನ್ನು ಹೇಳಲು ತೊಡಗುತ್ತಾನೆ. ಅಷ್ಟರಲ್ಲಿ ವೆಲ್ಲಾಯನ್ ಘಟ್ಟದ ಕೆಳಗಿನ ದಲ್ಲಾಲರ ಬಳಿ ಮಾಡಿದ ಸಾಲ ತೀರಿಸಲು ಸಾಧ್ಯವಾಗದಿರಲು, ಹಣ ಬರುವವರೆಗೆ ವೆಲ್ಲಾಯನ್‌ನ ಹೆಂಡತಿಯನ್ನೇ ಎಳೆದುಕೊಂಡು ಹೋದದ್ದು ತರುಣರಲ್ಲಿ ಆಕ್ರೋಶ ಮೂಡಿಸುತ್ತದೆ. ಸೀರಂಗನ್‌ನ ಪ್ರೇರಣೆಯಿಂದಾಗಿ ಮೊದಲ ಬಾರಿಗೆ ವೆಲ್ಲಾಯನ್ ತನ್ನ ಹೆಂಡತಿಯನ್ನು ಎಳೆದುಕೊಂಡು ಹೋಗಿರುವುದಾಗಿ ಪೊಲೀಸ್ ಕಂಪ್ಲೆಂಟ್ ನೀಡುತ್ತಾನೆ. ಶತಮಾನಗಳಿಂದಲೂ ಅನ್ಯಾಯದ ವಿರುದ್ಧ ಸೊಲ್ಲೆತ್ತುವುದು ಸಾಧ್ಯವೇ ಇಲ್ಲದಂತಿರುವ ಜನಾಂಗದ ಪ್ರತಿನಿಧಿಯೊಬ್ಬ

> **ಹೋರಾಟವೇ ಕೃತಿಯ ಆಶಯ ಮತ್ತು ಕಾಳಜಿ. ಚಳುವಳಿಗಾರರಿಗೆ ಹೋರಾಟ ಒಂದು ಫ್ಯಾಷನ್ ಅಲ್ಲ. ಅದೊಂದು ಅಪರಿಹಾರ್ಯ ವರ್ತಮಾನ. ಚಿಂತನೆ ಮೂಲಕ ಕಟ್ಟಲ್ಪಡುವ ಸಂಘರ್ಷ ದಮನಿತರ ಬದುಕಿಗೆ ಆಶಾಕಿರಣವಾಗುತ್ತದೆ. ಹಸಿವು, ಬಡತನ, ಅಜ್ಞಾನ, ಮುಗ್ಧತೆಗಳು ದಮನಿತರ ಬದುಕಿಗೆ ಶಾಪವಾದರೆ, ಪ್ರಭುತ್ವದ ಸ್ವಾರ್ಥ ಸಾಧನೆಗೆ ಬಂಡವಾಳವಾಗುತ್ತದೆ. ಇಂಥ ಬಂಡವಾಳಶಾಹಿ ಕ್ರೂರ ವ್ಯವಸ್ಥೆಯ ವಿರುದ್ಧ ಸಂಘಟಿತರಾಗಿ ಮುನ್ನುಗ್ಗದಿದ್ದರೆ ಗತ್ಯಂತರವಿಲ್ಲ ಎಂಬುದೇ ಕಾದಂಬರಿಯ ಒಟ್ಟು ದರ್ಶನ.**

ಮೊದಲ ಬಾರಿಗೆ ತುಸು ಧೈರ್ಯ ಮಾಡಿದ್ದು ಕಂಡ
ಆಡಳಿತ ಯಂತ್ರ ತಲ್ಲಣಿಸಿ ಬಿಡುತ್ತದೆ. ಶೋಷಕ
ಹಿತಾಸಕ್ತಿಯನ್ನು ಕಾಪಾಡಲೆಂದೆ ಕಾ
ಪ್ರವೃತ್ತವಾಗುವ ಕಾನೂನು ವ್ಯವಸ್ಥೆ ವೆಲ್ಲಾಯನ್
ದೂರನ್ನು ತಿರಸ್ಕರಿಸ
ವುದಷ್ಟೇ ಅಲ್ಲದೆ, ದೂ
ಕೊಟ್ಟ ಪ...
ತಪ್ಪಿತಸ್ಥನನ್ನಾಗಿ ಮಾ
ದಂಡ ವಿಧಿಸುತ್ತದೆ. ಹೀ
ಪ್ರತಿಭಟನೆಯ
ಮೊಳಕೆಯೊಂದು ಕು
ಯೊಡೆದದ್ದು ಎಲ್ಲಿ
ಎಂಬುದನ್ನು ಪತ್ತೆ ಹಚ್ಚ
ಪೊಲೀಸರು ಮತ್ತೊಂ
ಸುಳ್ಳು ಆರೋಪ ಹೊ
ಸದಯನ್ ಮತ್ತು
ಸೀರಂಗನ್ ಇಬ್ಬರ
ಬಂಧಿಸಿ ಜೇಲಿ
ಕಳಿಸುತ್ತಾರೆ.

ಅಷ್ಟು ಹೊತ್ತಿಗಾಗ
ಈ ಯುವಕರು ಕೃ
ಕಾರ್ಮಿಕರ ಯೂನಿಯ
ಮುಖಂಡ ವೇಲುಚಾಮಿ ಸಂಪರ್ಕಕ್ಕೆ ಬ
ಚಳುವಳಿ ಚಿಂತನೆಗಳ ಕುರಿತು ಮಾರ್ಗದಶ
ಪಡೆಯುತ್ತಾರೆ. ವೆಲ್ಲಾಯನ್ ವೇಲುಚಾಮಿ
ಪ್ರಭಾವದಿಂದ ಹೆಂಡತಿಯನ್ನು ಬಿಡಿಸಿಕೊ
ಬರುತ್ತಾನೆ. ಗುಡ್ಡಗಾಡು ಜನತೆಗೆ ಇದೊ
ಪವಾಡದಂತೆ ಕಂಡುಬಂದು ಹೋರಾಟದ
ಆಶಾಭಾವವೊಂದು ಉದಿಸತೊಡಗು
ಜೇಲಿನಲ್ಲಿ ಸದಯನ್, ಸೀರಂಗನ್‌ರು ಕಾಮಿ
ನೇತಾರ ಕುಮಾರವಿ ಸಂಪರ್ಕಕ್ಕೆ ಬರುತ
ಕುಮಾರನ್ ಇಬ್ಬರು ತರುಣರನ್ನು ಅಪ್ರ
ಸಂಘಟನಕಾರರನ್ನಾಗಿ ಸಜ್ಜುಗೊಳಿಸುತ
ಜಗತ್ತಿನ ಅನೇಕ ಜನಪರ ಚಳುವಳಿಗ
ಅವುಗಳನ್ನು ದಮನ ಮಾಡಲೆಂದು ಸೃಷ್ಟಿ
ಬಂಧಿಖಾನೆಗಳಲ್ಲಿಯೇ ಹೆಡೆ ಮ
ಎದ್ದುಬಂದದ್ದು ಇತಿಹಾಸದ ಅ
ಭಂಗಿಯಾಗಿದೆ. ಹೊರಬಂದ ಸದ
ಸೀರಂಗನ್ ಮೊದಲು ತಮ್ಮವರನ್ನು ಅನ್ಯಾ
ವಿರುದ್ಧ ಸೆಟೆದು ನಿಲ್ಲುವಂತೆ ಪ್ರೇರೇಪಿಸು
ತಾವು ಬೆಳೆದ ಬೆಳೆಗೆ ತಕ್ಕ ಧಾ
ಬರುವಂತಾಗಲು ಸ್ವಂತ ಸಂತೆ ನೆರೆಸುವ ವ್ಯ
ಹೆಜ್ಜೆ ಇಡುತ್ತಾರೆ. ಲಾಭಖೋರ ದಲ್ಲಾಲಿಗ
ಬಹಿಷ್ಕರಿಸಿ ಸಹಕಾರ ಸಂಘ ಕಟ್ಟುವ ಮು
ತಾವು ಉತ್ಪಾದಿಸಿದ ಮಾಲನ್ನು ಸ್ವಂತ
ಮಾಡಲು ನಿಲ್ಲುತ್ತಾರೆ. ಇದರಿಂದ ತ
ಬಿಡುವ ಜಮೀನ್ದಾರಿ ವರ್ತಕರು ಸದ
ಸೀರಂಗನ್‌ನ ಶಕ್ತಿ ಕುಗ್ಗಿಸಲು ಹ
ಹೂಡುತ್ತಾರೆ. ಸದಯನ್‌ನ ಮುದಿ ತ
ತೋಟ, ಸಂಸಾರವೆಲ್ಲವೂ ಕುಕಮಿ
ಕ್ರೌರ್ಯಕ್ಕೆ ಬಲಿಯಾಗುತ್ತದೆ. ಅಸಹ
ತಿರುಮನ್ ಇಷ್ಟಕ್ಕೆಲ್ಲಾ ತನ್ನ ಮ
ಚಳುವಳಿಯಂಥ ಉಸಾಬರಿಗಳೇ ಕಾರಣ
ಹಳಿಯುತ್ತಾನೆ. ಪ್ರತಿಭಟಿಸುವುದೇ
ಅಪರಾಧವೆಂದು ಭಾವಿಸುವ ತಿರು
ಮಗನನ್ನೇ ಮನೆಯಿಂದ ಹೊರಹಾ
ಅನಿವಾರ್ಯಕ್ಕೆ ಒಳಗಾಗುತ್ತಾನೆ. ಸದಯನ್
ಧೃತಿಗೆಡದೆ ತನ್ನ ಚಟುವಟಿಕೆ
ವ್ಯಸ್ತನಾಗುತ್ತಾನೆ. ಯೂನಿಯನ್ ಮು
ವೇಲುಚಾಮಿ ಮತ್ತು ಸಂಗಡಿಗರು ಸದಾ
ಬೆಂಗಾವಲಾಗಿ ನಿಲ್ಲುತ್ತಾರೆ. ಕೊನೆಗೆ ಕುತ
ತಿರುಮನ್‌ನ ಜಮೀನನ್ನು ಕಬಳಿಸಲು ಬ

ಪುಟ...

PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2003-05

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜ್
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ.12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462.
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.

Printed & Published by Communist Party of India(Marxist), Karnataka State Committee. Editor: S.Y.GURUSHANTH